ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜೂನ್ 17 ಸೋಮವಾರ 2024

ಸಂಪುಟ: 45 | ಸಂಚಿಕೆ: 62 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನೀಟ್ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ

- ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿಕೆ
- ಇದನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ
- ಎನ್‌ಟಿಎ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡು ಬಂದರೆ ಕಠಿಣ ಕ್ರಮ



ಧರ್ಮೇಂದ್ರ ಪ್ರಧಾನ್



ನವದೆಹಲಿ, ಜೂ. 16– ನೀಟ್ ಪರೀಕ್ಷೆಯಲ್ಲಿ ಕೆಲವು ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಸುದ್ದಿಸಂಸ್ಥೆವೊಂದರ ಜೊತೆ ಭಾನುವಾರ ಮಾತನಾಡಿದ ಅವರು, ಎರಡು ಸ್ಥಳಗಳಲ್ಲಿ ಕೆಲವು ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದಿದ್ದು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಲಿದೆ ಎಂದರು. ಸುಪ್ರೀಂಕೋರ್ಟ್‌ನ ಶಿಫಾರಸಿನ ಮೇರೆಗೆ 1,563 ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲು ಆದೇಶ ನೀಡಲಾಗಿದೆ ಎಂದ ಅವರು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಲ್ಲಿ (ಎನ್‌ಟಿಎ) ಸುಧಾರಣೆಯ ಅಗತ್ಯವಿದೆ. ಸಂಸ್ಥೆಯ ಹಿರಿಯ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಧಾನ್ ಎಚ್ಚರಿಕೆ ನೀಡಿದರು.

ಪ್ರಕರಣದ ಹಿನ್ನೆಲೆ: ಮೇ 5ರಂದು ದೇಶದ 4,750 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆದಿತ್ತು. ಸುಮಾರು 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಜೂನ್ 14ರಂದು ಫಲಿತಾಂಶ ಪ್ರಕಟಿಸುವ ಸಾಧ್ಯತೆ ಇತ್ತು. ಆದರೆ ಎನ್‌ಟಿಎ ಜೂನ್ 4ರಂದೇ ಫಲಿತಾಂಶ ಪ್ರಕಟಿಸಿತ್ತು.

ಹರಿಯಾಣದ ಫರೀದಾಬಾದ್‌ನ ಕೇಂದ್ರದ ಆರು ಮಂದಿ ಸೇರಿ, ದೇಶದಾದ್ಯಂತ 67 ಅಭ್ಯರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದು ಅಗ್ರಸ್ಥಾನ ಹಂಚಿಕೊಂಡಿದ್ದರು. ಕೆಲ ಅಭ್ಯರ್ಥಿಗಳಿಗೆ ಕೃಪಾಂಕವನ್ನು ಎನ್‌ಟಿಎ ನೀಡಿದ್ದು ಮತ್ತು ಒಂದೇ ಕೇಂದ್ರದ ಕೆಲವರು ಗರಿಷ್ಠ ಅಂಕಗಳನ್ನು ಗಳಿಸಿದ್ದು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಈ ವಿಚಾರವಾಗಿ ದೇಶಾದ್ಯಂತ ವಿದ್ಯಾರ್ಥಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಹಲವೆಡೆ ಪ್ರತಿಭಟನೆಗಳು ನಡೆದಿದ್ದವು. ● 5ನೇ ಪುಟಕ್ಕೆ

ಸ್ಥಳ ಮಹಜರ್‌ಗಾಗಿ ಇಂದು ಮೈಸೂರಿಗೆ ದರ್ಶನ್ ಕರೆತರುವ ಸಾಧ್ಯತೆ



ಮೈಸೂರು, ಜೂ. 16– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್‌ನನ್ನು ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ನಾಳೆ (ಜೂ. 17) ಮೈಸೂರಿಗೆ ಕರೆತಂದು ಮಹಜರು ನಡೆಸುವ ಸಾಧ್ಯತೆ ಇದೆ.

ಎರಡನೇ ಬಾರಿಗೆ ದರ್ಶನ್‌ನನ್ನು ಪೊಲೀಸ್ ಕಸ್ಟಡಿಗೆ ಪಡೆಯುವ ವೇಳೆ ಪೊಲೀಸರ ಪರ ವಾದ ಮಂಡಿಸಿದ್ದ ಸರ್ಕಾರಿ ವಿಶೇಷ ಅಭಿಯೋಜಕ ಪಿ. ಪ್ರಸನ್ನಕುಮಾರ್ ಅವರು, ಆರೋಪಿಗಳನ್ನು ಮೈಸೂರಿಗೂ ಕರೆದೊಯ್ದು ಮಹಜರು ನಡೆಸಬೇಕಾಗಿದೆ ಎಂದು ಹೇಳಿದ್ದರು. ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 12ರಂದು ಬೆಳಗ್ಗೆ ಕಾಮಾಕ್ಷಿಪಾಳ್ಯ ಠಾಣೆ ಇನ್ಸ್‌ಪೆಕ್ಟರ್ ಗಿರೀಶ್ ನಾಯಕ್ ಅವರ ತಂಡ ದರ್ಶನ್ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನ ಜಿಮ್‌ನಲ್ಲಿ ವರ್ಕ್‌ಔಟ್ ಮುಗಿಸಿಕೊಂಡು ಹೊರ ಬಂದ ಬಳಿಕ ● 5ನೇ ಪುಟಕ್ಕೆ

ಕೆರೆಯಲ್ಲಿ ಮುಳುಗಿ ಇಬ್ಬರು ವಿದ್ಯಾರ್ಥಿಗಳ ಸಾವು

ಮೈಸೂರು, ಜೂ.16(ಎಸ್‌ಬಿಡಿ)– ವಿದ್ಯಾರ್ಥಿಗಳಿಬ್ಬರು ಈಜಲು ಹೋಗಿ ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಮೈಸೂರು ತಾಲೂಕಿನ ಸಾಹುಕಾರಹುಂಡಿಯಲ್ಲಿ ಭಾನುವಾರ ಸಂಜೆ ನಡೆದಿದೆ. ಮೈಸೂರಿನ ಹೂಟಗಳ್ಳಿ ನಿವಾಸಿ ಪ್ರಸನ್ನ ಅವರ ಪುತ್ರ ವರುಣ್(16) ಹಾಗೂ ಧನಂಜಯ ಅವರ ಪುತ್ರ ಜಶ್ವಂತ್(14) ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದು, ಜೊತೆಯಲ್ಲಿದ್ದ ಸ್ನೇಹಿತ ಅವಿನಾಶ್(14) ಅದೃಷ್ಟವಶಾತ್ ಪಾರಾಗಿದ್ದಾನೆ. ಮೈಸೂರಿನ ಎಸ್‌ವಿಇಐ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಯಾಗಿದ್ದ ವರುಣ್, ನಾರಾಯಣ ಹೈಟೆಕ್ ಶಾಲೆಯ 9ನೇ ತರಗತಿ ವಿದ್ಯಾರ್ಥಿಗಳಾದ ● 5ನೇ ಪುಟಕ್ಕೆ

ದಕ್ಷಿಣ ಭಾರತ ಉತ್ಸವದಲ್ಲಿ 4200 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ



ಬಂಡವಾಳ ಹೂಡಿಕೆಗೆ ಮುಂದಾದ ಕೆಲವು ಉದ್ದಿಮೆದಾರರಿಗೆ ಒಡಂಬಡಿಕೆಯ ಪತ್ರಗಳನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹಾಗೂ ಪ್ರವಾಸೋದ್ಯಮ ಸಚಿವ ಡಾ.ಎಚ್.ಕೆ ಪಾಟೀಲ ವಿತರಿಸಿದರು.

ಬೆಂಗಳೂರು, ಜೂ.16– ಶಕ್ತಿ ಯೋಜನೆಯಿಂದಾಗಿ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಶೇ.50 ರಷ್ಟು ಹೆಚ್ಚಾಗಿದೆ.ಈ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವ್ಯಾಪಕ ಅವಕಾಶವಿದೆ. ದಕ್ಷಿಣ ಭಾರತ ಉತ್ಸವದ ಮೂಲಕ ಹರಿದು ಬಂದಿರುವ ಸುಮಾರು 4200 ಕೋಟಿ ರೂಪಾಯಿಗಳ ಹೂಡಿಕೆಯ ಜೊತೆಗೆ ಇನ್ನಷ್ಟು ಹೆಚ್ಚು ಹಣವನ್ನು ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬಳಸುವಂತೆ ಪ್ರವಾಸೋದ್ಯಮ ಹಾಗೂ ಕಾನೂನು ಸಚಿವರಾದ ಡಾ.ಎಚ್.ಕೆ. ಪಾಟೀಲ ಅವರು ಕರೆ ನೀಡಿದರು.

ಬೆಂಗಳೂರು ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ ದಕ್ಷಿಣ ಭಾರತ ಉತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಅವರು ಮಾತನಾಡಿದರು. ದಕ್ಷಿಣ ಭಾರತ ರಾಜ್ಯಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಅವುಗಳಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಎಫ್‌ಕೆಸಿಸಿಐ ಆಯೋಜಿಸಿರುವ ಈ ಕಾರ್ಯಕ್ರಮ ಬಹಳ ಮಹತ್ವದ್ದಾಗಿದೆ. ಈ ಉತ್ಸವದ ಮೂಲಕ ಸುಮಾರು 4200 ಕೋಟಿಗಳಷ್ಟು ಹೂಡಿಕೆಯ ಪ್ರಸ್ತಾವನೆಗಳಿಗೆ ಒಡಂಬಡಿಕೆ ● 5ನೇ ಪುಟಕ್ಕೆ

ಮೋದಿ ಆಡಳಿತದಲ್ಲಿ 4 ಸಾವಿರ ಕಿಲೋ ಮೀಟರ್ ಭಾರತದ ಭೂಮಿ ಚೀನಾ ಪಾಲು

ಪ್ರೊ.ಕೆ.ರಾಮದಾಸ್ ನೆನಪಿನಲಿ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಆರೋಪ

ಮೈಸೂರು, ಜೂ.16(ಬಿಎಲ್‌ಯು)– ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಹತ್ತು ವರ್ಷದ ಅವಧಿಯಲ್ಲಿ ನಾಲ್ಕು ಸಾವಿರ ಕಿಲೋ ಮೀಟರ್ ಭಾರತದ ನೆಲ ಚೀನಾ ಪಾಲಾಗಿದೆ ಎಂದು ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಆರೋಪಿಸಿದರು.

ಮೈಸೂರಿನ ರಂಗಾಯಣದ ಶ್ರೀರಂಗದಲ್ಲಿ ಭಾನುವಾರ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿನಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮೇಕ್ ಇನ್ ಇಂಡಿಯಾ', 'ಆತ್ಮನಿರ್ಭರ' ಕ್ರಾಂತಿ ಮಾಡಿದೆ ಎಂದು ಹೇಳುತ್ತಾರೆ. ಆದರೆ ಚೈನಾದಿಂದಲೇ ಬಹಳಷ್ಟು ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಜಾಗತಿಕವಾಗಿ 13 ದೊಡ್ಡ ಮಲಿನ ನಗರಗಳು ಭಾರತದಲ್ಲಿದೆ. ಬಿಜೆಪಿ ಸರ್ಕಾರದ ಇಂತಹ ಬಹಳಷ್ಟು ವೈಫಲ್ಯಗಳಿವೆ. ಆದರೆ ಇದ್ಯಾವುದು ಬಹಳಷ್ಟು ಜನರಿಗೆ ಮನವರಿಕೆ ಆಗುತ್ತಿಲ್ಲ ಎಂದರು.

ಪ್ರಧಾನಿ ನರೇಂದ್ರ ಮೋದಿ ವಿಚಾರವನ್ನು ಕೃತಕ ಬುದ್ಧಿಮತ್ತೆ ಅಥವಾ ಚಾಟ್ ಜಿಟಿಪಿಯಲ್ಲಿ ದಾಖಲಿಸಿದರೆ ಮೋದಿ ಅಭಿವೃದ್ಧಿ ಹರಿಕಾರ ಎಂಬುವುದು ಸೇರಿದಂತೆ ಅವರ ಪರವಾದ ಹಲವು ವಿವರಗಳು ತೆರೆದಿಟ್ಟುಕೊಳ್ಳುತ್ತದೆ ಎಂದರು.



ಮೈಸೂರಿನ ರಂಗಾಯಣದ ಶ್ರೀರಂಗದಲ್ಲಿ ಭಾನುವಾರ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿನಲಿ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಮಾತನಾಡಿದರು.

ಆದರೆ ಮೋದಿ ವೈಫಲ್ಯಗಳಿರುವ ಯಾವುದೇ ವಾಸ್ತವಿಕ ವಿಚಾರಗಳು ಚಾಟ್ ಜಿಟಿಡಿ ಅಥವಾ ಕೃತಕಬುದ್ಧಿಮತ್ತೆಯಲ್ಲಿ ಇರುವುದಿಲ್ಲ. ನರೇಂದ್ರ ಮೋದಿ ಜಾತ್ಯಾತೀತ ವ್ಯಕ್ತಿ ಅಂತಾರೆ. ಆದರೆ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿಗೂ ಒಂದು ಟಿಕೆಟ್ ನೀಡಲಿಲ್ಲ. ಇಷ್ಟೆಲ್ಲಾ ವೈಫಲ್ಯತೆಗಳಿದ್ದರೂ ಮೋದಿಯನ್ನು ಅಭಿವೃದ್ಧಿ ಹರಿಕಾರನಂತೆ ಬಿಂಬಿಸಲಾಗುತ್ತಿದೆ. ಇದರಿಂದ ಕೃತಕ ಬುದ್ಧಿಮತ್ತೆ, ಚಾಟ್ ಜಿಟಿಪಿ ಬಗ್ಗೆ ವಿಶ್ವದಲ್ಲೆ ಸಂಶಯ ಹಾಗೂ ಆತಂಕ ಮೂಡಿದೆ ಎಂದು ಕೃಷ್ಣಪ್ರಸಾದ್ ಅಭಿಪ್ರಾಯಪಟ್ಟರು.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಭಾರತದ ರಾಜಕೀಯ ನೈತಿಕತೆ ಕುಸಿದಿದೆ. ಈ ಹಿನ್ನೆಲೆ ಮೋದಿ ಅಹಂಕಾರದ ವ್ಯಕ್ತಿಯೆಂದು ಸ್ವತಃ ಆರ್‌ಎಸ್‌ಎಸ್ ನಾಯಕರೇ ಟೀಕಿಸಿದ್ದಾರೆ ಎಂದು ಹೇಳಿದರು.

ಸುಳ್ಳು ಹೇಳುವುದು ಒಳ್ಳೆಯದು ಎಂಬ ಪರಿಸ್ಥಿತಿ ದೇಶದಲ್ಲಿದೆ. ಮುಸ್ಲಿಂ ಸಮುದಾಯದ ಬಗ್ಗೆ ಕೀಳು ಅಭಿರುಚಿ ಬರುವಂತೆ ಬಿಂಬಿಸಲಾಗಿದೆ. ಪ್ರಜ್ವಲ್ ರೇವಣ್ಣ ಪ್ರಕರಣ, ಬಿಜೆಪಿಯ ಪೇ ಸಿಎಂ ಭ್ರಷ್ಟಾಚಾರ ಸೇರಿದಂತೆ ಬಹಳಷ್ಟು ವಿಚಾರಗಳ ಬಗ್ಗೆ ಮಠಮಾನ್ಯಗಳು ದನಿ ಎತ್ತಲಿಲ್ಲ ಎಂದು ಕೃಷ್ಣಪ್ರಸಾದ್ ಆರೋಪಿಸಿದರು.

ಈ ವೇಳೆ ಮಾತನಾಡಿದ ಚಿಂತಕರಾದ ಸವಿತಾ ನಾಗಭೂಷಣ್, ಪ್ರೊ.ರಾಮದಾಸ್ ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸುತ್ತಿದ್ದರು. ಅಂತರ್ಜಾತಿ ಮದುವೆ ಆಗುವರಿಗೆ ಮನೆಯಲ್ಲಿ ಆಶ್ರಯ ಕೂಡ ನೀಡುತ್ತಿದ್ದರು ಎಂದರು. ಇತ್ತೀಚೆಗೆ ಹಿಂಸಾಪ್ರವೃತ್ತಿ ಹೆಚ್ಚಾಗಿದೆ. ಚಿತ್ರನಟ ದರ್ಶನ್ ಸೇರಿದಂತೆ ಆತನ ಸಹಚರರು ಬಡಪಾಯಿ ಮೇಲೆ ತಮ್ಮ ದರ್ಪ ತೋರಿದ್ದಾರೆ. ಇಂತಹ ಹಿಂಸಾತ್ಮಕ ಕೃತ್ಯ ನೋಡುತ್ತಿದ್ದರೆ, ಭವಿಷ್ಯದ ದಿನಗಳು ಹೇಗಿರುತ್ತವೆ ಎಂದು ಊಹೆ ಮಾಡಿಕೊಳ್ಳಲು ಆತಂಕ ಆಗುತ್ತದೆ ಎಂದು ಸವಿತಾ ನಾಗಭೂಷಣ್ ಹೇಳಿದರು.

ಹಿರಿಯ ಪತ್ರಕರ್ತ ರವೀಂದ್ರ ಭಟ್, ಚಿಂತಕ ಪ್ರೊ.ಮುಜಾಫರ್ ಅಸಾದಿ, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

50 ಜನರಿಗೆ ಮಂತ್ರ ಮಾಂಗಲ್ಯ, ಸಾವಿರ ಜನರಿಗೆ ಆರತಕ್ಷತೆ

ಈಗ ಕೆಲವರು 50 ಜನರಿಗೆ ಸೀಮಿತವಾಗಿ ಮಂತ್ರ ಮಾಂಗಲ್ಯ ಮಾಡಿ, ಸಾವಿರ ಜನರಿಗೆ ಆರತಕ್ಷತೆ ಮಾಡುತ್ತಿದ್ದಾರೆ ಎಂದು ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಪ್ರೊ.ರಾಮದಾಸ್ ಸೇರಿದಂತೆ ಇತರರು ಹಾಕಿಕೊಟ್ಟ ಹಾದಿಯಲ್ಲಿ ಅಂತರ್ಜಾತಿ ಹಾಗೂ ಸರಳ ವಿವಾಹಗಳಾಗಬೇಕು. ಸಮಾಜಕ್ಕೆ ಬೋಧಿಸುವುದನ್ನು ಮೊದಲು ನಾವು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ

ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಸೇನಾ ಪಡೆ ಆಕ್ರೋಶ

ಮೈಸೂರು,ಜೂ.16(ಜಿಎ)–ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಸರ್ಕಾರ ಲೋಕಸಭಾ ಚುನಾವಣೆ ಬಳಿಕ ರಾಜ್ಯದ ವಾಹನ ಸವಾರರಿಗೆ ದೊಡ್ಡ ಶಾಕ್ ನೀಡಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಾಂಗ್ರೆಸ್ ಸರ್ಕಾರ ಕಳೆದ ವರ್ಷ ಅಧಿಕಾರಕ್ಕೆ ಬರುವ ಮುನ್ನ ರಾಜ್ಯ ಬಿಜೆಪಿ ಸರ್ಕಾರವು ಜನ ವಿರೋಧಿ ಸರ್ಕಾರ, ದಿನೇ ದಿನೆ ಬೆಲೆ ಏರಿಕೆ ಮಾಡುತ್ತಿದೆ ಎಂದು ಜನರಿಗೆ ಹೇಳಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ಬೆಲೆಗಳನ್ನು ಇಳಿಸುತ್ತೇವೆ ಹಾಗೂ ಉಚಿತ ಐದು ಭಾಗ್ಯಗಳನ್ನು ನೀಡುತ್ತೇವೆ ಎಂದು ರಾಜ್ಯದ ಜನತೆಗೆ ಆಮಿಷ ಒಡ್ಡಿ, ತದನಂತರ ಗೆದ್ದು ಅಧಿಕಾರಕ್ಕೆ ಬಂದ ತಕ್ಷಣವೇ ಉಚಿತ ಭಾಗ್ಯಗಳಿಗೋಸ್ಕರ ಮೊದಲು ವಿದ್ಯುತ್ ದರ ಹೆಚ್ಚಳ, ಕೆಎಸ್‌ಆರ್‌ಟಿಸಿ ಬಸ್ ದರ ಹೆಚ್ಚಳ, ಆಹಾರ ಧಾನ್ಯಗಳ ಬೆಲೆ ಹೆಚ್ಚಳ, ಹಾಲಿನ ದರ ಹೆಚ್ಚಳ, ಮನೆಗಳ ರಿಜಿಸ್ಟ್ರೇಷನ್ ಸ್ಟಾಂಪ್ ಡ್ಯೂಟಿ ದರ ಹೆಚ್ಚಳ, ಮದ್ಯದ ಬೆಲೆಗಳ ಹೆಚ್ಚಳ, ಜೊತೆಗೆ ಕನಿಷ್ಠ 20 ರೂ. ಇದ್ದ ಸ್ಟ್ಯಾಂಪ್ ಪೇಪರನ್ನು 100 ರೂ.ಗೆ ಹೆಚ್ಚಳ ಮಾಡಿ, ರಾಜ್ಯದಲ್ಲಿರುವ ಎಲ್ಲಾ ವಸ್ತುಗಳ ಬೆಲೆಗಳನ್ನೆಲ್ಲ ಏರಿಸಿ ಈಗ ಪುನಃ ಸಾಲದೆಂಬಂತೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿರುವುದು ಅತ್ಯಂತ ಖಂಡನೀಯ ಎಂದು ಕಿಡಿಕಾರಿದರು.



ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಜೆಎಲ್‌ಬಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸರ್ಕಾರ ಜನರಿಗೆ ಒಂದು ಕೈಯಲ್ಲಿ ಕೊಟ್ಟು, ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುತ್ತಿದೆ. ಕಾಂಗ್ರೆಸ್‌ನ ಉಚಿತ ಭಾಗ್ಯಗಳಿಂದ ರಾಜ್ಯದ ಬೊಕ್ಕಸ ಬರಿದಾಗುತ್ತಿದೆ. ರಾಜ್ಯದಲ್ಲಿ ತರಕಾರಿ ಬೆಲೆಯು ಸಹ ಬಹಳ ಹೆಚ್ಚಿದೆ. ಅತೀ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಬೇಕಾದ ರಾಜ್ಯ ಸರ್ಕಾರ ಪದೇ ಪದೆ ಬೆಲೆ ಏರಿಕೆಗಳನ್ನು ಮಾಡಿ ರಾಜ್ಯದ ಜನತೆಗೆ ಶಾಕ್ ಮೇಲೆ ಶಾಕ್ ನೀಡುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ರಾಜ್ಯ ಸರ್ಕಾರ ಕಳೆದ ಒಂದು ವರ್ಷಗಳಿಂದ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿ ಈಗ ಎಲ್ಲಾ ಬಿಟ್ಟಿ ಭಾಗ್ಯಗಳನ್ನು ಲೋಕಸಭಾ ಚುನಾವಣೆಯ ನಂತರ ನಿಲ್ಲಿಸುವ ಆಲೋಚನೆಯಲ್ಲಿತ್ತು. ಆದರೆ ಈಗ ಇನ್ನೇನು ಬಿಬಿಎಂಪಿ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಚುನಾವಣೆ ನಡೆಯುವುದರಿಂದ ಬಿಟ್ಟಿ ಭಾಗ್ಯಗಳನ್ನು ಇನ್ನೂ ಜೀವಂತವಾಗಿಟ್ಟುಕೊಳ್ಳಲು ರಾಜ್ಯದ ಜನರಿಗೆ ಅತೀ ಅಗತ್ಯವಾಗಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಈ ಕೂಡಲೆ ಬೆಲೆ ಏರಿಕೆಗಳನ್ನು ನಿಯಂತ್ರಣ ಮಾಡಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಆದೇಶವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸೇನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಪ್ರಭುಶಂಕರ್, ಕೃಷ್ಣಯ್ಯ, ಸುರೇಶ್ ಗೋಲ್ಡ್, ಡಾ.ಶಾಂತರಾಜೇ ಅರಸ್, ಶಿವಲಿಂಗಯ್ಯ, ನೇಹ, ನಾರಾಯಣ ಗೌಡ, ಲಕ್ಷ್ಮಿ, ಭಾಗ್ಯಮ್ಮ, ಸುನಿಲ್ ಅಗರ್ವಾಲ್, ಪರಿಸರ ಚಂದ್ರು, ದರ್ಶನ್‌ಗೌಡ, ಹನುಮಂತಯ್ಯ, ರಾಧಾಕೃಷ್ಣ, ರಘುರಾಜ್ ಅರಸು, ಆನಂದ್, ಸ್ವಾಮಿ ಗೌಡ, ಗಣೇಶಪ್ರಸಾದ್, ರಾಮಕೃಷ್ಣ ಗೌಡ, ರವೀಶ್, ಪ್ರಭಾಕರ, ಮಹಾದೇವಸ್ವಾಮಿ ಪಾಲ್ಗೊಂಡಿದ್ದರು.

ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ನಾಳೆ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ದರ ಏರಿಕೆ ಹಿಂಪಡೆಯಬೇಕು, ಇಲ್ಲದಿದ್ದರೆ ಉಗ್ರ ಹೋರಾಟ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಹಾಗೂ ಮಾಜಿ ಶಾಸಕರೂ ಆದ ಎಲ್.ನಾಗೇಂದ್ರ ಮಾತನಾಡಿದರು.

ಮೈಸೂರು, ಜೂ.16(ಜಿಎ)–ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ಈ ಕೂಡಲೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ಇದೇ ಜೂ. 18ರಂದು ಬೆಳಗ್ಗೆ 10.30ಕ್ಕೆ ಹೊಸ ಡಿಸಿ ಕಚೇರಿಗೆ ನಗರ ಮತ್ತು ಗ್ರಾಮಾಂತರ ಬಿಜೆಪಿ ವತಿಯಿಂದ ಮುತ್ತಿಗೆ ಹಾಕಲಾಗುವುದು ಎಂದು ನಗರಾಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮೊದಲೆಲ್ಲ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಆದರೆ ಕೇಂದ್ರದತ್ತ ಕೈತೋರಿಸುತ್ತಿದ್ದರು. ಆದರೆ ಈಗ ಪಂಚ ಗ್ಯಾರಂಟಿಗಳ ಕಾರಣ ರಾಜ್ಯ ಸರ್ಕಾರ ದಿವಾಳಿಯಾಗಿದ್ದು, ಒಂದು ಕೈಯ್ಯಲ್ಲಿ ಗ್ಯಾರಂಟಿ ನೀಡಿ, ಮತ್ತೊಂದು ಕೈಯ್ಯಲ್ಲಿ ಕಿತ್ತುಕೊಳ್ಳುತ್ತಿದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಿಂದ ಜನರಿಗೆ ಹೊರೆ ಬಿದ್ದಿದ್ದು, ಇದನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಮುತ್ತಿಗೆ ಹಾಕಲಾಗುತ್ತಿದೆ. ಒಂದು ವೇಳೆ ಸರ್ಕಾರ ಮಣಿಯದಿದ್ದರೆ ರಾಜ್ಯ ನಾಯಕರ ಸೂಚನೆಯಂತೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಜನರು ಹಾಗೂ ರಾಷ್ಟ್ರ ನಾಯಕರನ್ನು ಮೆಚ್ಚಿಸಲು ಗ್ಯಾರಂಟಿ ಜಾರಿಗೊಳಿಸಿದ ಕಾರಣ ಸರ್ಕಾರದ ಖಜಾನೆ ಬರಿದಾಗಿದೆ. ಸ್ಟ್ಯಾಂಪ್ ಶುಲ್ಕ ಶೇ.20 ಇದ್ದುದನ್ನು 120ಕ್ಕೆ ಏರಿಸಲಾಗಿದೆ. ಇದಲ್ಲದೆ ನಾಲ್ಕು ತಿಂಗಳಲ್ಲಿ ರಾಜ್ಯದಲ್ಲಿ 450 ಕೊಲೆ, 190 ಲೈಂಗಿಕ ದೌರ್ಜನ್ಯ ನಡೆದಿವೆ. ಕಳೆದ ಹತ್ತು ತಿಂಗಳಲ್ಲಿ 692 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಹಿಂದೆ ಬಿಜೆಪಿ ಸರ್ಕಾರ ಇದ್ದ ವೇಳೆ ಕೇಂದ್ರದ ಮೇಲೆ ಅವಲಂಬಿತರಾಗದೇ ರೈತರಿಗೆ ನೆರವಾಗಲಾಗುತ್ತಿತ್ತು. ಇನ್ನು, ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿಗಮ ಮಂಡಳಿಗಳಿಗೆ 546 ಕೋಟಿ ನೀಡಿದ್ದರೆ, ಕಾಂಗ್ರೆಸ್ ಸರ್ಕಾರ ಕೇವಲ 170 ಕೋಟಿ ನೀಡಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದುಳಿದವರ ಪರವಾಗಿದೆ ಎಂದು ಸಿಎಂ ಹೇಳಿಕೊಂಡರೂ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ರೈತರ ಟಿಸಿಗೆ ಹತ್ತು ಸಾವಿರ ಇದ್ದುದನ್ನು ಮೂರರಿಂದ ಆರು ಲಕ್ಷಕ್ಕೆ ಏರಿಸಲಾಗಿದೆ. ಹೀಗಾಗಿ ಮತ ನೀಡಿದ ರೈತರಿಗೆ ಬರೆ ಹಾಕುತ್ತಿದ್ದಾರೆ ಎಂದರು.

ಕಾಂಗ್ರೆಸ್ ಆಡಳಿತದಿಂದ ರಾಜ್ಯದ ಜನತೆಗೆ ಆಗುತ್ತಿರುವ ತೊಂದರೆ ಅಷ್ಟಿಷ್ಟಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರೂ ಎಚ್ಚೆತ್ತುಕೊಳ್ಳದ ಗೃಹ ಸಚಿವರು ರಾಜೀನಾಮೆ ನೀಡಬೇಕು. ಈ ನಡುವೆ ತಮ್ಮ ಪಕ್ಷ ಸುಮ್ಮನೆ ಕುಳಿತಿಲ್ಲ. ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದಯಾನಂದ್, ಕಿರಣ್ ಜಯರಾಮ್‌ಗೌಡ, ರಘು, ರಾಜೇಂದ್ರ, ಕೇಬಲ್ ಮಹೇಶ್, ಬಿ.ಎಂ. ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

7, 8, 9ನೇ ತರಗತಿ ವಸತಿ ಶಾಲೆ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.16– 2024–25ನೇ ಸಾಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್.ಅಂಬೇಡ್ಕರ್, ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ 7, 8 ಮತ್ತು 9ನೇ ತರಗತಿಯಲ್ಲಿ ಉಳಿಕೆ ಇರುವ ಸ್ಥಾನಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಜಿಲ್ಲೆಯ ಎಲ್ಲ ವಸತಿ ಶಾಲೆಗಳಲ್ಲಿ ಪಡೆಯಬಹುದಾಗಿದೆ. ಜೂ.22 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ರೋಸ್ಟರ್ ಮತ್ತು ಮೆರಿಟ್ ಅನುಸಾರ ಸೀಟು ಹಂಚಿಕೆ ಮಾಡಲಾಗುತ್ತಿದ್ದು, ಆಯಾಯ ತಾಲೂಕಿನ ವಸತಿ ಶಾಲೆಗಳಲ್ಲಿ ಜೂ.24ರಂದು ಬೆಳಗ್ಗೆ 11 ಗಂಟೆಯಿಂದ ಪ್ರವೇಶ ಪರೀಕ್ಷೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ವಸತಿ ಶಾಲೆಯ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಭಾವಸ್ಪಂದನ ಗಾಯನ

ಮೈಸೂರು,ಜೂ.16(ಜಿಎ)–ಮೈಸೂರಿನ ಭೂಮಿಕಾ ಅಸೋಸಿಯೇಟ್ಸ್ ಮತ್ತು ದಿ.ಮೈಕ್ ಚಂದ್ರು ಗೆಳೆಯರ ಬಳಗದ ಸಂಯುಕ್ತಾಶ್ರಯದಲ್ಲಿ ಜೂ.18ರಂದು ಸಂಜೆ 5.30ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾವಸ್ಪಂದನ ಶೀರ್ಷಿಕೆ ಅಡಿಯಲ್ಲಿ ನಾಡಿನ ಖ್ಯಾತ ಕವಿಗಳ ಗೀತ ಗುಚ್ಛಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಕಾಶವಾಣಿ ಕಲಾವಿದ ಮಂಜುನಾಥ್ ಈ ವಿಷಯ ತಿಳಿಸಿ, ಸಂತ ಶಿಶುನಾಳ ಷರೀಫರು, ಕುವೆಂಪು, ದ.ರಾ.ಬೇಂದ್ರೆ ಮೊದಲಾದ ಎಲ್ಲ ಪ್ರಸಿದ್ಧ ಕವಿಗಳ ಸುಮಾರು 28 ಗೀತೆಗಳನ್ನು ಆಕಾಶವಾಣಿ ಹಾಗೂ ದೂರದರ್ಶನದ ಯುವ ಕಲಾವಿದರು ಪ್ರಸ್ತುತಪಡಿಸಲಿದ್ದಾರೆ. ಭೂಮಿಕಾ ಅಸೋಸಿಯೇಟ್ಸ್ ಯಾವುದೇ ಲಾಭದ ಉದ್ದೇಶವಿಲ್ಲದೇ ಕೇವಲ ಕಲಾಸೇವೆ ಕಾರಣದಿಂದ ಕಾರ್ಯಕ್ರಮ ಆಯೋಜಿಸಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕೆ.ಎಸ್.ಸುರೇಶ್, ಅಶ್ವತ್‌ನಾರಾಯಣ್, ಮೈಸೂರು ಆನಂದ್, ರಾಜೇಶ್ ಪಡಿಯಾರ್ ಹಾಜರಿದ್ದರು.

ವಿವಾಹ ವಾರ್ಷಿಕೋತ್ಸವ ಶುಭಾಶಯ



ಭಾನುವಾರ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಗೌರಿಶಂಕರನಗರದ ಖ್ಯಾತ ಉದ್ಯಮಿ ಶ್ರೀಮತಿ ಸುಧಾ ಮತ್ತು ಚಿನ್ನಂಬಳ್ಳಿ ಮಹಾದೇವು ಅವರಿಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ವಿಶ್ವನಾಥ್ (ವಿಶ್ವ), ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜು, ಮಹದೇವೇಗೌಡ, ಪಾಲಿಕೆ ಮಾಜಿ ಸದಸ್ಯ ನಿರಾಲ್ ಶಾ ಉಪಸ್ಥಿತರಿದ್ದರು.

ಪ್ರತಿಭಾವಂತರನ್ನು ಗುರುತಿಸುವುದು ಸಂಘ–ಸಂಸ್ಥೆಗಳ ಕರ್ತವ್ಯ

ಸಖಿ ಸ್ವಾವಲಂಬಿ ಕಾರ್ಯಕ್ರಮ ಉದ್ಘಾಟಿಸಿದ ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಅಭಿಮತ

ಮೈಸೂರು, ಜೂ.16(ಜಿಎ)–ಶ್ರದ್ಧೆಯಿಂದ ವಿದ್ಯೆ ಕಲಿತು ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ ಪೋಷಕರು ತೋರಿಸುವ ಮಮತೆ ಎಷ್ಟು ಮುಖ್ಯವೋ ಅಂತೆಯೇ ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸುವುದೂ ಕೂಡ ಅಷ್ಟೇ ಮುಖ್ಯವಾಗಿದ್ದು, ಅದು ಸಂಘ ಸಂಸ್ಥೆಗಳ ಕರ್ತವ್ಯವೂ ಕೂಡ ಆಗಿರುತ್ತದೆ ಎಂದು ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ತಿಳಿಸಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ಸಭಾಂಗಣದಲ್ಲಿ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಗೀತೆಗೊಂದು ಗಿಡ ವಿಶ್ವ ಪರಿಸರ ದಿನಾಚರಣೆ ಹಾಗೂ ಸಖಿ ಸ್ವಾವಲಂಬಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸುವಂತೆಯೇ ಪ್ರತೀ ಸಂಸ್ಥೆಗಳಿಗೂ ಸಹಕಾರ ನೀಡಬೇಕಾಗಿರುವುದು ಸಾರ್ವಜನಿಕರ ಕರ್ತವ್ಯವೂ ಆಗಿರುತ್ತದೆ. ಜೊತೆಗೂಡಿ ಕೆಲಸ ಮಾಡಿದಾಗಲೇ ಕಾರ್ಯಕ್ರಮಗಳು ಯಶಸ್ವಿಯಾಗುವುದು ಎಂದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ಸಭಾಂಗಣದಲ್ಲಿ ಭಾನುವಾರ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಪ್ರಕೃತಿಯೊಂದಿಗಿನ ಮಾನವನ ಸಂಬಂಧ ಅವಿನಾಭಾವ, ಪ್ರತಿ ಗಿಡವೂ ತನ್ನದೇ ಆದ ಮಹತ್ವವನ್ನು ಪಡೆದಿರುತ್ತದೆ, ಹಸಿರನ್ನು ಉಳಿಸಿ ಬೆಳೆಸುವಂತೆ ಮಕ್ಕಳಿಗೆ ಹಿರಿಯರು ಕಲಿಸಲೇಬೇಕಿದೆ. ಒಬ್ಬ ಧೂಮಪಾನಿ ಬೀಡಿ, ಸಿಗರೇಟು ಸೇದಿ ಪರಿಸರ ನಾಶ ಮಾಡುವುದಲ್ಲದೇ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಾನೆ, ಇಂತಹ ಪರಿಸರ ವಿನಾಶಕಾರಿ ಕೃತ್ಯಗಳಿಂದ ಮಕ್ಕಳು ದೂರವಿರಬೇಕೆಂದರು.

ಬದುಕಿನ ಭದ್ರ ಬುನಾದಿಗೆ ವಿದ್ಯೆ ಅತ್ಯವಶ್ಯಕ. ಅಂಕವೊಂದೇ ಗುರಿಯಾಗದಿದ್ದರೂ ಅಂಕಕ್ಕೆ ಇಂದು ಅಷ್ಟೇ ಮಹತ್ವ ಇದ್ದೇ ಇದೆ. ಉತ್ತಮ ನಾಗರಿಕರಾಗಲು ವಿದ್ಯೆ ಮಹತ್ವದ್ದಾಗಿದೆ. ಸಾಮಾಜಿಕ ಬದುಕಿನಲ್ಲಿ ಉನ್ನತ ಸ್ಥಾನ ಕಲ್ಪಿಸಲು ವಿದ್ಯೆಯು ಅತ್ಯಂತ ಅವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ರಾಮಕೃಷ್ಣನಗರ 58ನೇ ವಾರ್ಡಿನ 52 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿ, ಪರಿಸರ ಪ್ರೇಮಿಗಳಿಗೆ ಗಿಡ ನೀಡಿ ಪ್ರಶಂಸಿಸಿದರು. ಸಖಿ ಸ್ವಾವಲಂಬಿ ಯೋಜನೆಯಡಿಯಲ್ಲಿ ಮಾಂಟೆಸರಿ ಶಿಕ್ಷಕರ ತರಬೇತಿ ಪಡೆದ 15 ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಸಮಾರಂಭದಲ್ಲಿ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟಿನ ಸಂಸ್ಥಾಪನಾ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶ್, ಭಾರತೀಯ ಜೈನ್ ಸಂಘಟನೆಯ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಸ್ವರಾಜ್ ಜೈನ್, ಶ್ರೀ ಕಾಮಧೇನು ಅಸೋಸಿಯೇಷನ್‌ನ ಮಾಲೀಕ ಆರ್.ಕೆ.ಮಂಜು ಉಪಸ್ಥಿತರಿದ್ದರು.

ಖ್ಯಾತ ಜಾನಪದ ವಿದ್ವಾಂಸರಾದ ಡಾ.ಜಯಲಕ್ಷ್ಮಿ ಸೀತಾಪುರ ನಿಧನ

ಮೈಸೂರು: ಖ್ಯಾತ ಜಾನಪದ ವಿದ್ವಾಂಸರಾದ ಡಾ.ಜಯಲಕ್ಷ್ಮೀ ಸೀತಾಪುರ (70) ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ಭಾನುವಾರ ನಿಧನರಾದರು.

ಅವರಿಗೆ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಪತಿ ಡಾ.ರಾಜಶೇಖರ್, ವಿದೇಶದಲ್ಲಿರುವ ಇಬ್ಬರು ಪುತ್ರಿಯರು ಇದ್ದಾರೆ.

ಕಳೆದ ವಾರ ಬೆಂಗಳೂರಿಗೆ ಕಾರಲ್ಲಿ ಹೊರಟಿದ್ದಾಗ ಇನ್ನೊಂದು ಕಾರು ಬಂದು ಡಿಕ್ಕಿ ಹೊಡೆದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಭಾನುವಾರ ಹೃದಯಾಘಾತದಿಂದ ನಿಧನರಾದರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಸೀತಾಪುರದವರಾದ ಅವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಎಂ.ಎ ಪದವಿ ಪಡೆದು, ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದರು. ನಂತರ 'ಕನ್ನಡದಲ್ಲಿ ಐತಿಹಾಸಿಕ ಜಾನಪದ ಮಹಾಕಾವ್ಯಗಳು' ಕುರಿತು ಪಿಎಚ್.ಡಿ ಪದವಿ ಪಡೆದರು. ಅಮೆರಿಕದ ಫೋರ್ಡ್ ಫೌಂಡೇಷನ್ ಫೆಲೋಶಿಪ್‌ಗೆ ಆಯ್ಕೆಯಾಗಿದ್ದರು. ನಂತರ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಅಧ್ಯಾಪಕರಾಗಿ ನಿವೃತ್ತರಾಗಿದ್ದರು.

ಶೋಧ, ಕನ್ನಡ ಜಾನಪದ, ಕನ್ನಡದಲ್ಲಿ ಐತಿಹಾಸಿಕ ಜಾನಪದ ಲಾವಣಿಗಳು, ಕನ್ನಡ ಸಮಗ್ರ ಗಾದೆಗಳು, ಐದು ಜಾನಪದ ಪ್ರಬಂಧಗಳು, ಜಾನಪದ ಒಕ್ಕಲು, ಕಲ್ಯಾಣವೆನ್ನಿ ಜನರೆಲ್ಲ, ಜಾನಪದ ಹಟ್ಟಿ, ಜಾನಪದ ಸಾಹಿತ್ಯದಲ್ಲಿ ಹಾಸ್ಯ, ಜಾನಪದ ತರಂಗ (ಜಾನಪದ ಕುರಿತ ಕೃತಿಗಳು), ಎದೆಕದವ ತಟ್ಟ್ಯಾವೆ (ಕವನ ಸಂಕಲನ), ಹಿರಿಯ ರಾಜಕಾರಣಿ ಕೆ.ಪುಟ್ಟಸ್ವಾಮಿ ಅವರ ಕುರಿತು ದಿಟ್ಟ ಸಾಧಕ, ತಬ್ಬಿಬ್ಬು ಹಾಗೂ ಬೆರಗು ಬೆಳಗು (ನಾಟಕಗಳು) ಅವರ ಪ್ರಮುಖ ಕೃತಿಗಳು. ಮುಖ್ಯವಾಗಿ ಕುಸ್ತಿ ಕಲೆ ಕುರಿತ ಅವರ ಕೃತಿ ಅನನ್ಯವಾದುದು.



ಹಲವಾರು ವಿದ್ಯಾರ್ಥಿಗಳಿಗೆ ಪಿಎಚ್.ಡಿ ಅಧ್ಯಯನಕ್ಕೆ ಅವರು ಮಾರ್ಗದರ್ಶಕರಾಗಿದ್ದರು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜೀಶಂಪ ಪ್ರಶಸ್ತಿ, ಮುದ್ದು ಮಾದಪ್ಪ ಪುರಸ್ಕಾರ, ಜಾನಪದ ಲೋಕ ಪ್ರಶಸ್ತಿ ಪುರಸ್ಕೃತರಾಗಿದ್ದರು.

ಡಾ.ಪ್ರೀತಿ ಶುಭಚಂದ್ರ, ಡಾ.ಎಚ್.ಎಲ್.ಶೈಲಾ ಹಾಗೂ ಡಾ.ಎಚ್.ಗೌರಮ್ಮ ಅವರು ಸಂಪಾದಿಸಿದ 'ಜಾನಪದ ಮಹಿಳಾಯಾನ' ಕೃತಿಯನ್ನು ಅವರಿಗೆ ಸಮರ್ಪಿಸಲಾಗಿತ್ತು. ಅವರ ಅಂತ್ಯಕ್ರಿಯೆ ಮಂಗಳವಾರ (ಜೂನ್ 18) ಮಧ್ಯಾಹ್ನ ಕೆ.ಜಿ.ಕೊಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.06.2024 ಸೋಮವಾರ, ಮಳೆ ನಕ್ಷತ್ರ: ಮೃಗಶಿರ, 08.06.2024ರಿಂದ 21.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಪ್ರತಿಷ್ಠಾಪನ ವಾರ್ಷಿಕ ಮಹೋತ್ಸವ, ಶ್ರೀ ಗುರುವಾಯೂರಪ್ಪನ್‌ರವರ 18ನೇ ಪ್ರತಿಷ್ಠಾಪನ ವಾರ್ಷಿಕ ಮಹೋತ್ಸವ, ಬೆಳಗ್ಗೆ 5.30ರಿಂದ ಗಣಪತಿ ಹೋಮ, ಚತುಶುದ್ಧಿ, ಶ್ರೀ ಗುರುವಾಯೂರಪ್ಪನಿಗೆ ಬಿಂಬಶುದ್ಧಿ, ಧಾರೆ, ಪಂಚಗವ್ಯಂ, ಪಂಚಗಂ, ಕಳಾಭಿಷೇಕ, ಉಚ್ಚ ಪೂಜೆ. ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 5.30ರಿಂದ ದೀಪಾರಾಧನೆ, ವಾದ್ಯಗಳೊಂದಿಗೆ ವಿಶೇಷ ಪೂಜೆ, ಅತ್ತಾಳ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಮೈಸೂರು.
- **ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಮೈಸೂರು, ಪಡುವಾರಹಳ್ಳಿ (ವಿನಾಯಕ ನಗರ), ಗ್ರಾಮಾಭ್ಯುದಯ ಟ್ರಸ್ಟ್, ಮೈಸೂರ್ ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್ ಕಣ್ಣಿನ ಆಸ್ಪತ್ರೆ, ರೋಟರಿ ಪಂಚಶೀಲ, ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ:** ದಿ. ಬಿ.ಎಂ. ಮರೀಗೌಡರ ಸ್ಮರಣಾರ್ಥ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀ ವರಸಿದ್ಧಿ ಮಹದೇಶ್ವರ ದೇವಸ್ಥಾನದ ಆವರಣ, ಪಡುವಾರಹಳ್ಳಿ, ಬೆಳಗ್ಗೆ 10 ಗಂಟೆಗೆ.
- **ಶ್ರೀಕೃಷ್ಣ ಗಾನ ಸಭಾ, ಮೈಸೂರು:** ಶ್ರೀಮಾನ್ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಡ.ರಾ.ಸ.ನಂದಕುಮಾರ–ಗಾಯನ, ವಿದುಷಿ ವೀಣಾ ಸುರೇಶ್–ಪಿಟೀಲು, ವಿದ್ವಾನ್ ಜಿ.ಎಸ್.ರಾಮಾನುಜಂ–ಮೃದಂಗ, ವಿದ್ವಾನ್ ಎನ್.ಆರ್.ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕೃಷ್ಣ ಭವನ, ಶ್ರೀ ಕೃಷ್ಣ ದೇವಸ್ಥಾನ, ಸಂಜೆ 6 ಗಂಟೆಗೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35. /6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ. ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ 6.40 "ನಾನು ನ.ರತ್ನ" ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.50 ರೈತರಿಗೆ ಸಲಹೆ, 7.15–ಯೋಗೋತ್ಸವ: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): 'ಸಾಹಿತ್ಯ ಸ್ಮೃತಿ'–ತ.ರಾ.ಸುಬ್ಬರಾಯರ ಭಾಷಣದ ಧ್ವನಿ ಮುದ್ರಣ, 10.00–ಶಾಸ್ತ್ರೀಯ ಸಂಗೀತ: ಮಹತಿ ಭಾರ್ಗವ್ ಪುರಿ–ವೈಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ **ಮಧ್ಯಾಹ್ನ:** 12.30–ದೇವರನಾಮ, ಬಿ.ಆರ್.ಗೀತಾ, 12.45 ನಮ್ಮ ಆರೋಗ್ಯ–'ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ದೊರೆಯುವ ಆಯುಷ್ ಸೌಲಭ್ಯಗಳು' ಕುರಿತು ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ತಗ್ಗಹಳ್ಳಿಯ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯದ ಆಯುಷ್ ವೈದ್ಯಾಧಿಕಾರಿ ಡಾ.ಭಾಗ್ಯಲಕ್ಷ್ಮೀ ಟಿ.ಎಸ್. ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆಗಳು–ಶ್ರೀಯಾ. ಕೆ.ಭಟ್ 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕದ್ರಿ ಗೋಪಾಲನಾಥ್–ಸ್ಯಾಕ್ಸೋಫೋನ್ ವಾದನ 4.00–ಮಹಿಳಾರಂಗ–"ನಾನು ನನ್ನ ಕಂಪನಿ" ವಿಷಯ: ಅಡಿಕೆ ಹಾಳೆ ತಟ್ಟೆ ತಯಾರಿಕಾ ಘಟಕದ ಶಿಲ್ಪಾ ಪ್ರಸಾದ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ. ಆರ್, 4.45–ಹಿಂದಿ ಪಾಠ–ಡಾ.ಸ್ಮಿತಾ ಚಿಪ್ಳೂಣ್ ಕರ್, 5.30 ``Pashudhan Se Behthar Jeevan", ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 5.45–ನಾನು ನ.ರತ್ನ ಬಾನುಲಿ ಸರಣಿ. ಖ್ಯಾತ ನಾಟಕಕಾರ ಹಾಗೂ ವಾಕ್ ಶ್ರವಣ ತಜ್ಞ ಡಾ.ನ.ರತ್ನ ಅವರ ಜೀವನಗಾಥೆ ಅವರದೇ ಧ್ವನಿಯಲ್ಲಿ 6.50 ಕೃಷಿರಂಗ: ಹಣ್ಣು ಹೊನ್ನು? ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಮೈಸೂರಿನ ಕರ್ಜನ್ ಪಾರ್ಕ್ ಆವರಣದಲ್ಲಿರುವ ಡಾ.ಎಂ.ಹೆಚ್.ಮರೀಗೌಡ ಸಭಾಂಗಣದಲ್ಲಿ ಜರುಗಿದ ಹಣ್ಣು ಹೊನ್ನು ಬಾನುಲಿ ಸರಣಿಯ ಸಮಾರೋಪ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ: ಆರ್.ಲೋಕೇಶ್ವರಿ 7.45–Talk in Kannada –ಸಾಹಿತ್ಯ, ಸಂಗೀತ, ಸಂತೋಷ –ಈ ಕುರಿತು ಪ್ರೊ.ಎಂ.ಕೃಷ್ಣೇಗೌಡ ಅವರಿಂದ ವಿಚಾರ ಪ್ರಸ್ತಾಪ, 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಬಾಲಸುಬ್ರಹ್ಮಣ್ಯ ಶರ್ಮ, 10.00–ನಾಟಕ–"ಒಕ್ಕಲಿಗ ಒಕ್ಕದಿರೆ", ರಚನೆ: ಹನುಮಂತ ಜುಟ್ಟಲ ನಿರ್ದೇಶನ: ಸುರೇಖಾ ಸುರೇಶ 10.30–ಸವಿನೆನಪು

ಯುವ ಪೀಳಿಗೆಗೆ ವೈಚಾರಿಕ ವಿಚಾರ ತಿಳಿಸಿವುದು ಅತ್ಯಗತ್ಯ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮತ



ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು, ಜೂ.16(ಎಂಕೆ)– ವೈಚಾರಿಕ ವಿಚಾರಗಳನ್ನು ಯುವ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಮೈಸೂರು ರಂಗಾಯಣದ ಶ್ರೀರಂಗದಲ್ಲಿ ದೇಶಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ವಿಚಾರವಾದಿ–ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯುವ ಸಮೂಹಕ್ಕೆ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ರಂತಹ ಮಹನೀಯರ ವಿಚಾರಧಾರೆಗಳನ್ನು ತಿಳಿಸದಿದ್ದರೆ ಕೋಮುವಾದಿ ಸಮಾಜ ನಿರ್ಮಾಣವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಎಚ್ಚರಿಸಿದರು. ಪ್ರೊ.ಕೆ.ರಾಮದಾಸ್ ಅವರೊಂದಿಗೆ ಒಡನಾಟ ಅತ್ಯಲ್ಪವಾದರೂ ಅವರಲ್ಲಿದ್ದ ಪ್ರಗತಿಪರ ಚಿಂತನೆಯ ಬಗ್ಗೆ ತಿಳಿದಿದ್ದೇನೆ. ಅವರು, ಬಂಡವಾಳಶಾಹಿಗಳ ವಿರುದ್ಧ ಹೋರಾಟ ನಡೆಸಿದ್ದರು. ಅನ್ಯಾಯ ಎಲ್ಲೇ ನಡೆದರೂ ಅದನ್ನು ಖಂಡಿಸುತ್ತಿದ್ದರು. ರೈತ ಸಂಘ ಸೇರಿದಂತೆ ಹಲವು ಸಂಘಟನೆಗಳೊಂದಿಗೆ ಸೇರಿ ಪ್ರತಿಭಟಿಸುತ್ತಿದ್ದರು ಎಂದು ಸ್ಮರಿಸಿದರು.

ಇತ್ತೀಚಿನ ದಿನಗಳಲ್ಲಿ ಪ್ರಗತಿಪರ ಚಿಂತನೆಗಳು ಮಾಯವಾಗುತ್ತಿವೆ. ಪ್ರಗತಿಪರರ ಹೋರಾಟ ಕಡಿಮೆಯಾಗಿದ್ದು, ಒಬ್ಬೊಬ್ಬರೂ ಡೈವರ್ಟ್ ಆಗುತ್ತಿದ್ದಾರೆ. ಕೋಮುವಾದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅನ್ಯಾಯವನ್ನು ಪ್ರಶ್ನಿಸಲಾಗದಂತಹ ವಾತಾವರಣ ಸೃಷ್ಟಿಯಾಗಿದೆ. ಸುಳ್ಳನ್ನೇ ಪದೇ ಪದೆ ಹೇಳಿ ಸತ್ಯವನ್ನಾಗಿ ತೋರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ವೈಚಾರಿಕ ವಿಚಾರಗಳು ಮಾಯವಾಗುತ್ತಿವೆ. ಅನ್ಯಾಯ ಕಂಡರೂ ಪ್ರತಿಭಟಿಸಲಾಗದ ಸಮಾಜದಲ್ಲಿ ಜೀವಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೋಮುವಾದಿಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಯುವ ಸಮೂಹವನ್ನು ವೈಜಾರಿಕತೆಯೆಡೆಗೆ ಕರೆದೊಯ್ಯುವ ಪ್ರಯತ್ನವನ್ನಾದರೂ ಮಾಡುವ ಅನಿವಾರ್ಯತೆ ಇದೆ. ಸಾಮಾಜಿಕ ಜಾಲತಾಣಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಅವರಂತಹ ವಿಚಾರಧಾರೆಗಳನ್ನು ತಿಳಿಸಬೇಕಾಗಿದೆ. ಯುವಕರಲ್ಲಿ ವೈಚಾರಿಕ ಮನೋಭಾವ ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ದೇಶಿರಂಗ ಸಾಂಸ್ಕೃತಿಕ ಸಂಸ್ಥೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು. ನಂತರ ವಿಚಾರವಾದಿ ಹೆಚ್.ಆರ್.ಸ್ವಾಮಿ ಮಾತನಾಡಿದರು. ಚಿಂತಕ ಶಿವಸುಂದರ್ ಸಮಾರೋಪದ ಅಧ್ಯಕ್ಷತೆ ವಹಿಸಿದ್ದರು. ದೇಶಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಸ್ಪರ್ಧೆಗಳೊಂದಿಗೆ ಹಲಸಿನ ಹಬ್ಬಕ್ಕೆ ತೆರೆ



ಹಲಸು ಹಬ್ಬದಲ್ಲಿ 'ನಾ ಕಂಡಂತೆ ಹಲಸು' ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಜೂ.16(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ, ರೋಟರಿ ಕ್ಲಬ್ ಆಫ್ ಮೈಸೂರು ಪಶ್ಚಿಮ ಹಾಗೂ ರೀಬಿಲ್ಡ್ ಇಂಡಿಯಾ ಫಂಡ್ ಸಹಯೋಗದಲ್ಲಿ ಆಯೋಜಿಸಿದ್ದ ಎರಡು ದಿನಗಳ 'ಹಲಸಿನ ಹಬ್ಬ' ವಿವಿಧ ಸ್ಪರ್ಧೆಗಳೊಂದಿಗೆ ಯಶಸ್ವಿ ತೆರೆಕಂಡಿತು.

ಹಲಸು ಅಡುಗೆ ತಯಾರಿಕೆ ಸ್ಪರ್ಧೆಯಲ್ಲಿ ಹಲಸಿನ ಕೇಕ್, ಹಲಸಿನ ಹಲ್ವ, ಹಲಸಿನ ಕಡಬು, ಹಲಸಿನ ಪಲಾವ್, ಹಲಸಿನ ಹಪ್ಪಳ, ಹಲಸಿನ ಪಾಯಸ, ಹಲಸಿನ ಹೋಳಿಗೆ, ಹಲಸಿನ ಕಬಾಬ್, ಹಲಸಿನ ಬೀಜದ ವಾಲ್ಪ್, ಹಲಸಿನ ದೋಸೆ, ಹಲಸಿನ ವಡೆ, ಹಲಸಿನ ಹಣ್ಣಿನ ಫ್ರೂಟ್ ಸಲಾಡ್, ಹಲಸಿನ ಕುಲ್ಫಿ ಮತ್ತು ಪತ್ರೊಡೆ ಸೇರಿದಂತೆ ಹಲವಾರು ಬಗೆಯ ಹಲಸಿನ ರುಚಿಕರ ತಿಂಡಿ ತಿನಿಸುಗಳನ್ನು ತಯಾರಿಸಿ ತಂದಿದ್ದ ಪ್ರತಿಮಾ ಪಾಟೀಲ್ ಪ್ರಥಮ ಬಹುಮಾನ ಗೆದ್ದರೆ, ಮಂಜುಳ ದೇವಿ ದ್ವಿತೀಯ ಹಾಗೂ ಸಿ.ಎ.ಸಿಂಧೂ ತೃತೀಯ ಬಹುಮಾನ ಪಡೆದರು.

ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ 'ನಾ ಕಂಡಂತೆ ಹಲಸು' ಚಿತ್ರಕಲಾ ಸ್ಪರ್ಧೆಯಲ್ಲಿ ಎಲ್‌ಕೆಜಿಯಿಂದ 4ನೇ ತರಗತಿವರೆಗಿನ ಪುಟಾಣಿಗಳಲ್ಲಿ ಡಿ.ಸ್ನೇಹರ್ಚನ ಪ್ರಥಮ ಬಹುಮಾನ ಪಡೆದರೆ, ಎ.ರಿದ್ಧಿಕ್ ದ್ವಿತೀಯ ಹಾಗೂ ಋತ್ವಿಕ್ ಶರತ್ ತೃತೀಯ ಬಹುಮಾನ ಪಡೆದರು. 5ನೇ ತರಗತಿ ಮೇಲ್ಪಟ್ಟ ಮಕ್ಕಳಲ್ಲಿ ಎಸ್.ಷಿತಿ ಪ್ರಥಮ, ಧೃತಿ ದ್ವಿತೀಯ ಹಾಗೂ ಡಿ. ರೋಮಿತ್ ಆರ್ಯ ತೃತೀಯ ಬಹುಮಾನ ಗೆದ್ದರು.

300 ಗ್ರಾಂ ಹಲಸಿನ ಹಣ್ಣಿನ ತೊಳೆ ತಿನ್ನುವ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಹೆಬ್ಬಾಳಿನ ಎಸ್.ಸುವಾಸಿನಿ ವೇಗ ತಿಂದು ಗೆದ್ದರೆ, ಪುರುಷರ ವಿಭಾಗದಲ್ಲಿ ಎಸ್.ಡಿ.ಮೋಹನ್ ಕುಮಾರ್ ಹಲಸು ಮೇಳದಲ್ಲಿ ಸತತ ಮೂರನೇ ಬಾರಿ ಪ್ರಥಮ ಬಹುಮಾನ ಗೆದ್ದರು. ಬಳಿಕ ವಿಜೇತರಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ಹಲಸು ಅಚ್ಚರಿಯ ಮರ: ಬಹುಮಾನ ವಿತರಿಸಿದ ಚಿಂತಕ ಚಿನ್ನಸ್ವಾಮಿ ವಡ್ಡಗೆರೆ ಮಾತನಾಡಿ, ಹಲಸು ಅಚ್ಚರಿಯ ಮರ. ಎಲೆಯಿಂದ ಬೀಜದವರೆಗೆ ನಾನಾ ಬಗೆಯಲ್ಲಿ ಬಳಕೆಯಾಗುವ ಕಲ್ಪವೃಕ್ಷ. ಮಕ್ಕಳಿಗೆ ಹಲಸಿನ ಮರದ ವೈವಿಧ್ಯತೆ, ಹಲಸಿನ ಸುತ್ತಲಿನ ಕಥೆಗಳು, ಹಲಸಿನ ಅಡುಗೆಗಳು ಮತ್ತು ಹಲಸಿನ ಕೃಷಿಯ ಪರಿಚಯ ಮಾಡಿಕೊಡಬೇಕು. ಪ್ರತಿ ಮಗು ಒಂದಾದರೂ ಹಲಸು ಗಿಡ ನೆಟ್ಟು ಅದರೊಂದಿಗೆ ತಾನೂ ಬೆಳೆಯುವಂತಾಗಬೇಕು ಎಂದು ಆಶಿಸಿದರು. ಚಿತ್ರಕಲಾ ಸ್ಪರ್ಧೆಯ ತೀರ್ಪುಗಾರ ಪುಷ್ಕರಣಿ ಶಾಲೆಯ ಕಲಾಶಿಕ್ಷಕ ವಿಶ್ವನಾಥ್, ಹಲಸಿನ ಅಡುಗೆ ಸ್ಪರ್ಧೆ ತೀರ್ಪುಗಾರ ವಿನಯ್ ಚಂದ್ರ, ಪಾಕ ಪ್ರವೀಣೆ ಮಂಗಳಾ ಪ್ರಕಾಶ್, ಸಹಜ ಸಮೃದ್ಧದ ಕೃಷ್ಣ ಪ್ರಸಾದ್, ಅನಿತಾ, ಮಂಜು, ಸಿ.ಎನ್.ಕೇಶವ ಮೂರ್ತಿ ಮತ್ತಿತರರಿದ್ದರು.

ಲೋಕಸಭೆ ಸ್ಪೀಕರ್ ಸ್ಥಾನಕ್ಕೆ ಟಿಡಿಪಿ ಸ್ಪರ್ಧಿಸಿದರೆ ಇಂಡಿಯಾ ಬಣದಿಂದ ಬೆಂಬಲಿಸಲು ಯತ್ನ

ಮುಂಬೈ: ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ತೆಲುಗು ದೇಶಂ ಪಕ್ಷ (ಟಿಡಿಪಿ) ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಇಂಡಿಯಾ ಮೈತ್ರಿಕೂಟದ ಎಲ್ಲ ವಿಪಕ್ಷಗಳು ಬೆಂಬಲ ನೀಡಲು ಪ್ರಯತ್ನಿಸುತ್ತವೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾವುತ್, ಲೋಕಸಭೆಯ ಸ್ಪೀಕರ್ ಆಯ್ಕೆಯು ನಿರ್ಣಾಯಕವಾಗಿದೆ ಒಂದು ವೇಳೆ ಬಿಜೆಪಿಗೆ ಆ ಸ್ಥಾನ ಸಿಕ್ಕರೆ, ಅದು ಟಿಡಿಪಿ, ಜೆಡಿಯು, ಚಿರಾಗ್ ಪಾಸ್ವಾನ್ ಮತ್ತು ಜಯಂತ್ ಚೌಧರಿ ಅವರ ರಾಜಕೀಯ ಪಕ್ಷಗಳನ್ನು ಒಡೆಯುತ್ತದೆ ಎಂದು ಹೇಳಿದ್ದಾರೆ.

ಸ್ಪೀಕರ್ ಸ್ಥಾನಕ್ಕೆ ಟಿಡಿಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಯಸುತ್ತಿದೆ ಎಂಬುದನ್ನು ನಾನು ಕೇಳಿದ್ದೇನೆ. ಹಾಗೇನಾದರೂ ಆದರೆ, ಇಂಡಿಯಾ ಮೈತ್ರಿಕೂಟ ಈ ಬಗ್ಗೆ ಚರ್ಚಿಸುತ್ತದೆ ಮತ್ತು ಮೈತ್ರಿಕೂಟದ ಎಲ್ಲ ಪಕ್ಷಗಳು ಟಿಡಿಪಿಗೆ ಬೆಂಬಲ ನೀಡುವುದನ್ನು ಖಚಿತಪಡಿಸಿ ಕೊಳ್ಳಲು ಪ್ರಯತ್ನಿಸುತ್ತಾರೆ ಎಂದು ಅವರು ಹೇಳಿದರು.



ತಮ್ಮನ್ನು ಬೆಂಬಲಿಸುವ ಜನರಿಗೆ ದ್ರೋಹ ಬಗೆಯುವುದು ಬಿಜೆಪಿಗೆ ಅಭ್ಯಾಸವಾಗಿದ್ದು, ಆ ಅನುಭವ ನಮಗಾಗಿದೆ. ನಿಯಮದ ಪ್ರಕಾರ ಉಪಸಭಾಪತಿ ಸ್ಥಾನವನ್ನು ಪ್ರತಿಪಕ್ಷಗಳು ಪಡೆಯಬೇಕು. ಕೇಂದ್ರದಲ್ಲಿ ಸ್ಥಿರ ಸರ್ಕಾರ ಇರುವುದಿಲ್ಲ ಎಂದರು.

ಲೋಕಸಭೆ ಚುನಾವಣೆಯ ನಂತರ ಬಿಜೆಪಿ ಬಗ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲವು ನಾಯಕರು ಇತ್ತೀಚೆಗೆ ನೀಡಿರುವ ಹೇಳಿಕೆಗಳ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಆರ್‌ಎಸ್‌ಎಸ್ ತನ್ನ ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಬಯಸಿದರೆ ಒಳ್ಳೆಯದು. ಆಗುತ್ತಿರುವ ಬೆಳವಣಿಗೆಗಳ ಮೇಲೆ ನಿಗಾ ಇರಿಸಿದ್ದೇವೆ ಎಂದು ಅವರು ಹೇಳಿದರು.


ಶರಣು ವಿಶ್ವ ವಚನ ಫೌಂಡೇಷನ್ ವತಿಯಿಂದ ಸಂಸ್ಥೆಯ ಕೃತಿ ಬಿಡುಗಡೆ



ಮೈಸೂರಿನ ಬಸವಬಳಗಗಳ ಒಕ್ಕೂಟಗಳ ವತಿಯಿಂದ ಮಹಾರಾಜ ಮೈದಾನದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಪ್ರಕಟಣೆಯ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ ಅವರ ರಚನೆಯ ವಚನ ಪ್ರದೀಪ ಕೃತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಬಿಡುಗಡೆ ಮಾಡಿದರು. ಈ ಸಂದರ್ಭ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷ ವಿನಯ ಕುಲಕರ್ಣಿ, ಚಲನಚಿತ್ರ ನಟ ಡಾಲಿ ಧನಂಜಯ್, ಬಸವ ಬಳಗ ಒಕ್ಕೂಟದ ಅಧ್ಯಕ್ಷ ಎಂ. ಪ್ರದೀಪ್ ಕುಮಾರ್, ಕೃತಿಯ ಸಂಪಾದಕಿ ಮಂಗಳ ಮುದ್ದುಮಾದಪ್ಪ, ಶರಣು ವಿಶ್ವ ವಚನ ಫೌಂಡೇಶನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ದಿಯಾ ಚಂದನ್, ಆರ್ಯನ್ ಪ್ರದೀಪ್ ಇತರರು ಉಪಸ್ಥಿತರಿದ್ದರು.

ಶ್ರೀ ಚಾಮರಾಜೇಂದ್ರ ಮೃಗಾಲಯದ ಯುವ ಸಂಘಟನೆಗೆ ಅರ್ಜಿ ಆಹ್ವಾನ

ಮೈಸೂರು, ಜೂ.16– ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ 12 ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ 32ನೇ ಯುವ ಸಂಘಟನೆಯನ್ನು ಆಯೋಜಿಸಲಾಗಿದೆ. ಕಾರ್ಯಕ್ರಮಗಳನ್ನು ಜುಲೈ 2024ರಿಂದ ಜನವರಿ 2025ರವರೆಗೆ 25 ಭಾನುವಾರಗಳಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಸಲಾಗುವುದು. ಆಯ್ಕೆಯಾದ ಸದಸ್ಯರುಗಳಿಗೆ ವನ್ಯಪ್ರಾಣಿಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಮೃಗಾಲಯ ಪರಿಸರದಲ್ಲಿ ಅವುಗಳ ನಿರ್ವಹಣೆ, ಪ್ರಾಣಿ ವರ್ತನೆ



ಅಧ್ಯಯನದ ಬಗ್ಗೆ ಕಾಲಕಾಲಿಕ ತರಗತಿಗಳ ಮೂಲಕ ತಿಳಿಯಪಡಿಸಲಾಗುವುದು.

ಆಸಕ್ತಿಯುಳ್ಳವರು ಜೂ.17ರಿಂದ 22ರವರೆಗೆ ಮೃಗಾಲಯದ ಕಚೇರಿಯಿಂದ ಅರ್ಜಿಯನ್ನು ಪಡೆದು, ಜೂ.22ರೊಳಗೆ ಸಲ್ಲಿಸಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆಯ ಆಧಾರದ ಮೇಲೆ 60 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ:9686668099 ಅಥವಾ ಇಮೇಲ್ edumysore99@gmail.comUನ್ನು ಸಂಪರ್ಕಿಸಬಹುದಾಗಿದೆ ಎಂದು ಶ್ರೀ ಚಾಮರಾಜರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಗೀತ ಒತ್ತಡ ಮುಕ್ತಗೊಳಿಸಿ ಮನೋಲ್ಲಾಸ ನೀಡುತ್ತದೆ

ಅಲಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ನಿರ್ದೇಶಕ ಡಾ.ನಾಗರಾಜ ವಿ.ಬೈರಿ



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಮೂವರು ಪತ್ರಕರ್ತರಿಗೆ 'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಜೂ.16(ಪಿಎಂ)– ಸಂಗೀತ ಒತ್ತಡ ಮುಕ್ತಗೊಳಿಸಿ ಮನೋಲ್ಲಾಸ ನೀಡುವ ವಿಶಿಷ್ಟ ಗುಣ ಹೊಂದಿದೆ ಎಂದು ಅಲಯನ್ಸ್ ಕ್ಲಬ್ ಅಂತರರಾಷ್ಟ್ರೀಯ ನಿರ್ದೇಶಕ ಡಾ.ನಾಗರಾಜ ವಿ.ಬೈರಿ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಅಲಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಹಾಗೂ ಗಾನ–ನಂದನ ಮೈಸೂರು ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಧಕ ಪತ್ರಕರ್ತರಿಗೆ 'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಗಾನ ನಂದನ ; ಸವಿಗಾನ–3 ಸಂಗೀತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪತ್ರಕರ್ತರ ಕೆಲಸ ಅತ್ಯಂತ ಶ್ರೇಷ್ಠವಾದುದು. ಸಾಧಕ ಪತ್ರಕರ್ತರನ್ನು ಗುರುತಿಸಿ ಗೌರವಿಸುತ್ತಿರುವುದು ಉತ್ತಮ ಕಾರ್ಯ. ಇದರಿಂದ ಅವರು ಮತ್ತಷ್ಟು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ ಎಂದರು.

ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ತಾತಯ್ಯನವರ ಕಾಲದಿಂದಲೂ ಮೈಸೂರು ಪತ್ರಿಕೋದ್ಯಮಕ್ಕೆ ತನ್ನದೇ ಆದ ಘನತೆ–ಗೌರವ ಇದೆ. ಈಗಲೂ ಸಹ ಅದು ಉಳಿದುಕೊಂಡು ಮುಂದುವರೆದಿದೆ ಎಂದರು.

ಉದ್ಘಾಟನೆ ನೆರವೇರಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮಾಧ್ಯಮ ಯಾವಾಗಲೂ ಸಮಾಜಮುಖಿ ಮತ್ತು ಜನಮುಖಿಯಾಗಿರಬೇಕು. ಮಾಧ್ಯಮ ಸಮಾಜ ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಸಮಾಜದ ಆಗು – ಹೋಗುಗಳನ್ನು ಜನತೆಗೆ ತಿಳಿಸುವಲ್ಲಿ ಮಾಧ್ಯಮಗಳು ಮಹತ್ವದ ಪಾತ್ರ ವಹಿಸುತ್ತಿವೆ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಯೋಜನೆಗಳನ್ನು ರೂಪಿಸಿದರೆ, ಜನರಿಗೆ ಮುಟ್ಟಿಸುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದಾಗಿದೆ. ಇಂದಿಗೂ ಜನ ಮಾಧ್ಯಮಗಳ ಮೇಲೆ ಅಪಾರ ನಂಬಿಕೆ ಹೊಂದಿದ್ದಾರೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಜೊತೆಗೆ ಪ್ರತಿಕಾರಂಗ ನಾಲ್ಕನೇ ಅಂಗ ಎಂದು ಗುರುತಿಸಿಕೊಂಡಿದೆ. ಸರ್ಕಾರ ಹಾಗೂ ಸಮಾಜದ ನಡುವೆ ಸೇತುವೆಯಂತಿರುವ ಪತ್ರಕರ್ತರು ನೈತಿಕತೆ ಹಾಗೂ ವಿಶ್ವಾಸಾರ್ಹತೆ ಉಳಿಸಿಕೊಂಡೇ ಕೆಲಸ ಮಾಡಬೇಕಿದೆ ಎಂದರು.

ಇದೇ ವೇಳೆ ಪತ್ರಕರ್ತರಾದ ಎಂ.ಆರ್. ಸತ್ಯನಾರಾಯಣ, ಕೆ.ಜೆ.ಲೋಕೇಶ್ ಬಾಬು ಹಾಗೂ ಪ್ರಕಾಶ್‌ಬಾಬು ಅವರಿಗೆ 'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಪೈಕಿ ಸಿ.ಕೆ.ಮಹೇಂದ್ರ ಅನುಪಸ್ಥಿತರಿದ್ದರು. ನಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ವೈ.ಡಿ.ರಾಜಣ್ಣ, ವೈದ್ಯ ಡಾ.ಬಿ.ಎನ್. ರವೀಶ್, ಅಲಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಹಾಗೂ ಗಾನ–ನಂದನ ಅಧ್ಯಕ್ಷ ಎನ್.ಬೆಟ್ಟೇಗೌಡ, ಡಾ.ಎ.ಎಸ್. ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ.ಎಸ್.ವಾಣಿ ಅವರು ಭಾವಗೀತೆ ಹಾಗೂ ಹಳೆಯ ಕನ್ನಡ ಚಿತ್ರಗೀತೆಗಳ ಗಾಯನ ಸಾದರಪಡಿಸಿ ಮನರಂಜಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಂಗಕರ್ಮಿ ರಾಜಶೇಖರ ಕದಂಬ, ಸಾಹಿತಿ ಟಿ.ಸತೀಶ್ ಜವರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಮ.ನ.ಲತಾ ಮೋಹನ್, ಸಂಘಟನಾ ಕಾರ್ಯದರ್ಶಿ ಮೈನಾ ಲೋಕೇಶ್ ಮತ್ತಿತರರು ಹಾಜರಿದ್ದರು.

ಚಾಮುಂಡಿಬೆಟ್ಟದ ಮೆಟ್ಟಿಲು ಹತ್ತಿ ನಂದಿನಿ ಉತ್ಪನ್ನ ಬಳಕೆ ಜಾಗೃತಿ ಮೂಡಿಸಿದ ಮೈಮುಲ್ ಸಿಬ್ಬಂದಿ

ಮೈಸೂರು, ಜೂ.16(ಎಂಟಿವೈ)– ನಂದಿನಿ ಉತ್ಪನ್ನಗಳ ಬಳಕೆ ಕುರಿತಂತೆ ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿ, ಅಧಿಕಾರಿಗಳು ಹಾಗೂ ಸಿಬ್ಬಂದಿ ಮೆಟ್ಟಿಲುಗಳ ಮೂಲಕ ಚಾಮುಂಡಿ ಬೆಟ್ಟ ತಲುಪಿ ಭಕ್ತರು ಹಾಗೂ ವಾಯು ವಿಹಾರಿಗಳಲ್ಲಿ ಜಾಗೃತಿ ಮೂಡಿಸಿದರು.



ನಂದಿನಿ ಹಾಲು ಹಾಗೂ ಇತರೆ ಉತ್ಪನ್ನಗಳ ಬಳಕೆ ಕುರಿತಂತೆ ಜಾಗೃತಿ ಮೂಡಿಸಲು ಮೈಮುಲ್ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ಭಾನುವಾರ ಮೆಟ್ಟಿಲು ಮೂಲಕ ಚಾಮುಂಡಿಬೆಟ್ಟ ಹತ್ತಿ ಗಮನ ಸೆಳೆದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಭಾನುವಾರ ಬೆಳಗ್ಗೆ ಚಾಮುಂಡಿಬೆಟ್ಟದ ಮೆಟ್ಟಿಲು ಹತ್ತುವ ವಿಶೇಷ ಜಾಗೃತಿ ಅಭಿಯಾನಕ್ಕೆ ಮೈಮುಲ್ ಅಧ್ಯಕ್ಷ ಎಂ.ಪ್ರಸನ್ನ ಚಾಲನೆ ನೀಡಿದರು. ನಂದಿನಿ ಉತ್ಪನ್ನಗಳ ಬಳಕೆ ಹಾಗೂ ಅವುಗಳಿಂದಾಗುವ ಉಪಯೋಗ ಕುರಿತಂತೆ ಘೋಷಣೆಯುಳ್ಳ ಫಲಕವನ್ನಿಡಿದು ಸಾಗಿದ ಮೈಮುಲ್ ಸಿಬ್ಬಂದಿ ವಾಯುವಿಹಾರಿಗಳ ಗಮನ ಸೆಳೆದರು. ಬೆಟ್ಟದಲ್ಲಿರುವ ದೇವಾಲಯದವರೆಗೂ ಸಾಗಿ ನಂದಿನಿ ಉತ್ಪನ್ನಗಳನ್ನೇ ಬಳಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ವೇಳೆ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಪ್ರಸನ್ನ ಮಾತನಾಡಿ, ಚಾಮುಂಡಿ ಬೆಟ್ಟದ ಮೆಟ್ಟಿಲು ಹತ್ತುವ ಮೂಲಕ ವಾಯು ವಿಹಾರಿಗಳಿಗೆ ನಂದಿನಿ ಹಾಲು ಹಾಗೂ ಇತರೆ ಉತ್ಪನ್ನಗಳ ಬಳಕೆ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

ಪ್ರತಿಯೊಬ್ಬರು ನಂದಿನಿ ಹಾಲಿನ ಬಳಕೆ ಮಾಡುವ ಮೂಲಕ ಅಪೌಷ್ಟಿಕತೆ ಹೋಗಲಾಡಿಸಬಹುದೆಂಬ ಸಂದೇಶ ಸಾರಲು ವಿವಿಧ ಸ್ವರೂಪ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ. ರಾಸಾಯನಿಕ ವಸ್ತು ಬಳಸಿ, ತಯಾರಿಸಿದ ಇತರೆ ಪಾನೀಯ ಹಾಗೂ ಉತ್ಪನ್ನಗಳನ್ನು ಬಳಸಿ ಆರೋಗ್ಯ ಕೆಡಿಸಿಕೊಳ್ಳುವುದಕ್ಕಿಂತ, ಸ್ಥಳೀಯ ರೈತರ ಹಿತದೃಷ್ಟಿಯಿಂದ ನಂದಿನಿ ಹಾಲಿನ ಉತ್ಪನ್ನಗಳನ್ನು ಹೆಚ್ಚಾಗಿ ಬಳಕೆ ಮಾಡಬೇಕು. ಮೈಮುಲ್‌ನಿಂದ ರೈತರಿಗೆ ಅಗತ್ಯ ನೆರವು ನೀಡಲಾಗುತ್ತಿದೆ. ಹುಲ್ಲಿನ ಕಟಿಂಗ್ ಯಂತ್ರ, ನೆಲ ಹಾಸಿಗೆ ಮ್ಯಾಟ್ ಸೇರಿ ಹಲವು ಸೌಲಭ್ಯ ಒದಗಿಸಲಾಗಿದೆ. ಇದರಿಂದಾಗಿ 9 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗಿ ದಾಖಲೆ ಬರೆದಿದೆ. ಇದರಿಂದ ಹೊರ ರಾಜ್ಯಗಳಲ್ಲೂ ನಂದಿನಿ ಹಾಲು ಹಾಗೂ ಇತರೆ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮೈಮುಲ್ ನಿರ್ದೇಶಕ ಸಚ್ಚಿದಾನಂದ ಮಾತನಾಡಿ, ಉತ್ಕೃಷ್ಟವಾದ ನಂದಿನಿ ಹಾಲು ಹಾಗೂ ಇತರೆ ಉತ್ಪನ್ನಗಳ ಬಳಕೆ ಮಾಡುವಂತೆ ಜನರಲ್ಲಿ ಅರಿವು ಮೂಡಿಸಿ, ನಂದಿನಿ ಉತ್ಪನ್ನಗಳ ಮಹತ್ವ ಜನರಿಗೆ ಮನವರಿಕೆ ಮಾಡಿಕೊಡಲು ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಮೈಮುಲ್ ಎಂಡಿ ಬಿ.ಎನ್.ವಿಜಯಕುಮಾರ್ ಮಾತನಾಡಿ, ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ಹಾಲಿನ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆದರೆ ಹಾಲು ಮಾರಾಟ ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಜನರಿಗೆ ಮನವರಿಕೆ ಮಾಡಿಕೊಟ್ಟು ನಂದಿನಿ ಹಾಲನ್ನೇ ಬಳಸುವಂತೆ ಪ್ರೇರೇಪಿಸಲು ಈಗಾಗಲೇ ವಿವಿಧ ಕಾರ್ಯಕ್ರಮ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಚಿತ್ರಕಲಾ ಸ್ಪರ್ಧೆ, ಮನೆ ಮನೆಗೂ ಅರಿವು ಮೂಡಿಸುವ ಅಭಿಯಾನ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾರುಕಟ್ಟೆ ವ್ಯವಸ್ಥಾಪಕ ಹೆಚ್.ಕೆ.ಜಯಶಂಕರ್, ಮೈಮುಲ್ ನಿರ್ದೇಶಕರಾದ ಕೆ.ಉಮಾಶಂಕರ್, ಎ.ಟಿ.ಸೋಮಶೇಖರ್, ಸಿ.ಓಂಪ್ರಕಾಶ್, ರಾಜ್‌ಕುಮಾರ್, ಆಡಳಿತ–ಖರೀದಿ ವ್ಯವಸ್ಥಾಪಕರು ಜಗದೀಶ್ ಇನ್ನಿತರರು ಪಾಲ್ಗೊಂಡಿದ್ದರು.

ಜೂ.19, ವಿಕಲಚೇತನರ ಕುಂದು–ಕೊರತೆ ಸಭೆ

ಮೈಸೂರು,ಜೂ.16–ಜಿಲ್ಲೆಯ ವಿಕಲಚೇತನ ವ್ಯಕ್ತಿಗಳ ಕುಂದು–ಕೊರತೆಗಳನ್ನು ಶೀಘ್ರ ಇತ್ಯರ್ಥಗೊಳಿಸುವ ಸಲುವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂ.19ರಂದು ಸಂಜೆ 5 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಭೆ ಏರ್ಪಡಿಸಲಾಗಿದೆ. ವಿಕಲಚೇತನರು ತಮ್ಮ ಕುಂದು–ಕೊರತೆಗಳ ಕುರಿತು ಅಹವಾಲುಗಳನ್ನು ಸಲ್ಲಿಸಬಹುದಾಗಿದ್ದು, ಇದರ ಸದುಪಯೋಗಪಡೆದುಕೊಳ್ಳುವಂತೆ ಜಿಲ್ಲಾ ಕಚೇರಿಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ 13 ಕೇಂದ್ರಗಳಲ್ಲಿ ಯುಪಿಎಸ್‌ಸಿ ಪರೀಕ್ಷೆ

ಮೈಸೂರು, ಜೂ.16(ಎಂಟಿವೈ)– ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಭಾನುವಾರ ಮೈಸೂರಿನ 13 ಕೇಂದ್ರಗಳಲ್ಲಿ ನಡೆಸಿದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯಲ್ಲಿ ಬೆಳಗ್ಗೆ 3501 ಹಾಗೂ ಮಧ್ಯಾಹ್ನ 3442 ಅಭ್ಯರ್ಥಿಗಳು ಹಾಜರಾಗಿ ಪರೀಕ್ಷೆ ಬರೆದರು.

ಪೊಲೀಸ್ ಬಿಗಿ ಭದ್ರತೆಯಲ್ಲಿ ಯುಪಿಎಸ್‌ಸಿ ನಡೆಸಿದ ಐಎಎಸ್, ಐಪಿಎಸ್, ಐಎಫ್‌ಎಸ್ ಸೇರಿದಂತೆ ಇತರ ನಾಗರಿಕ ಸೇವೆಗಳ ಪರೀಕ್ಷೆ ಬರೆಯಲು ಮೈಸೂರಲ್ಲಿ 5633 ಅಭ್ಯರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮಹಾರಾಣಿ ವಿಜ್ಞಾನ ಕಾಲೇಜು, ಮಹಾರಾಣಿ ಕಲಾ ಕಾಲೇಜು,



ಮೈಸೂರಿನ ಪದವಿ ಪೂರ್ವ ಕಾಲೇಜಿನಲ್ಲಿ ತೆರೆಯಲಾಗಿದ್ದ ಪರೀಕ್ಷಾ ಕೇಂದ್ರದಿಂದ ಹೊರ ಬರುತ್ತಿರುವ ಅಭ್ಯರ್ಥಿಗಳನ್ನು ಕಾಣಬಹುದು.

ಸದ್ವಿದ್ಯಾ ಪಿಯು ಕಾಲೇಜು, ಮಹಾರಾಜ ಪದವಿ ಪೂರ್ವ ಕಾಲೇಜು, ಡಿ.ಬನುಮಯ್ಯ ಕಾಲೇಜು, ಕುವೆಂಪುನಗರದ ಸರ್ಕಾರಿ ಪಿಯು ಕಾಲೇಜು, ವಿಜಯ ವಿಠಲ ಪಿಯು ಕಾಲೇಜು, ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜು, ಎಸ್‌ಬಿಆರ್‌ಆರ್ ಮಹಾಜನ ಕಾಲೇಜು, ನಟರಾಜ ಮಹಿಳಾ ಪಿಯು ಕಾಲೇಜು, ಪೀಪಲ್ಸ್ ಫಾರ್ ಮಹಿಳಾ ಪಿಯು ಕಾಲೇಜು ಹಾಗೂ ಮಹಾರಾಣಿ ಪದವಿ ಪೂರ್ವ ಕಾಲೇಜುಗಳಲ್ಲಿ ಪರೀಕ್ಷಾ ಕೇಂದ್ರವನ್ನು ತೆರೆದು, ನೋಂದಾಯಿತ ಅಭ್ಯರ್ಥಿಗಳಿಗೆ ವ್ಯವಸ್ಥೆ ಮಾಡಲಾಗಿತ್ತು.

ಎಲ್ಲಾ 13 ಕೇಂದ್ರಗಳಲ್ಲಿ ಬೆಳಗ್ಗೆ ನಡೆದ ಪರೀಕ್ಷೆಯಲ್ಲಿ 5633 ಅಭ್ಯರ್ಥಿಗಳಲ್ಲಿ 3,501 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾದರೆ, 2,132 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು. ಮಧ್ಯಾಹ್ನ 2ನೇ ಹಂತದ ಪರೀಕ್ಷೆಯಲ್ಲಿ 3,442 ಅಭ್ಯರ್ಥಿಗಳು ಪರೀಕ್ಷೆ ಬರೆದರೆ, 2,191 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಪರೀಕ್ಷಾ ಕೇಂದ್ರದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪರೀಕ್ಷೆ ಆರಂಭಕ್ಕೂ ಮುನ್ನ 30 ನಿಮಿಷ ಮೊದಲೇ ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳು ಬರುವಂತೆ ಸೂಚಿಸಲಾಗಿತ್ತು. ಪ್ರತಿಯೊಬ್ಬ ಅಭ್ಯರ್ಥಿಗಳನ್ನು ಕೂಲಂಕಷವಾಗಿ ತಪಾಸಣೆ ನಡೆಸಿ, ಪರೀಕ್ಷಾ ಕೇಂದ್ರಕ್ಕೆ ಬಿಡಲಾಯಿತು. ಅಲ್ಲದೇ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಅಪರ ಜಿಲ್ಲಾಧಿಕಾರಿ ಡಾ. ಶಿವರಾಜು ಸೇರಿದಂತೆ ಹಿರಿಯ ಅಧಿಕಾರಿಗಳ ತಂಡ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ವಿವಿಧೆಡೆಯಿಂದ ಅಭ್ಯರ್ಥಿಗಳೊಂದಿಗೆ ಪೋಷಕರು ಆಗಮಿಸಿ ತಮ್ಮ ಮಕ್ಕಳಿಗೆ ಅಂತಿಮ ಹಂತದ ಸಿದ್ಧತೆಯಲ್ಲಿ ಸಹಕಾರ ನೀಡುತ್ತಿದ್ದ ದೃಶ್ಯ ಪರೀಕ್ಷಾ ಕೇಂದ್ರಗಳ ಬಳಿ ಕಂಡು ಬರುತ್ತಿತ್ತು.

ನಕ್ಕರೆ ಅದೇ ಸ್ವರ್ಗ

ಯುವರಾಜ : ಎಲೇ ಕುಡುಕನೇ.... ನಿನ್ನ ಸಾವು ಹತ್ತಿರವಾಗಿದೆ... ಕೊನೆ ಆಸೆ ಏನಾದ್ರೂ ಇದೆಯಾ ಹೇಳು.

ಕುಡುಕ : ಮುಂದಿನ ಜನ್ಮದಲ್ಲಿ ಹಲ್ಲನ್ನು ಒಂದೇ ಕೊಟ್ಟರೂ ಪರವಾಗಿಲ್ಲ, ಲಿವರ್ ಮಾತ್ರ 32 ಕೊಡು ಪ್ರಭು...

ಮೈಸೂರು ಮಿತ್ರ

ಸೋಮವಾರ, 17 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಂದೆಗೂ ತಾಯಿ ಸ್ಥಾನ ತುಂಬಬಲ್ಲ ಜಗತ್ತಿನ ಏಕೈಕ ವ್ಯಕ್ತಿ ಮಗಳು ಮಾತ್ರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ತಾಯಿಯಂತೆ ಮಗಳು, ನೂಲಿನಂತೆ ಸೀರೆ'

ನಿಮ್ಮ ಪತ್ರಗಳು

■ ಸುರಕ್ಷಿತ ಪ್ರವಾಸೋದ್ಯಮ ಆದ್ಯತೆಯಾಗಲಿ

ಮಾನ್ಯರೆ,

ಮಳೆಗಾಲ ಪ್ರಾರಂಭವಾಗಿದ್ದು, ಮನರಂಜನೆಗಾಗಿ ರೆಸಾರ್ಟ್, ಗಿರಿಧಾಮಗಳು, ದೇವಾಲಯಗಳು, ಐತಿಹಾಸಿಕ ಸ್ಥಳಗಳು, ಜಲಪಾತಗಳು ಗೇಮ್ ಝೋನ್, ಹೋಂ ಸ್ಟೇ ಹೀಗೆ ಮುಂತಾದ ಸ್ಥಳಗಳಿಗೆ ಪ್ರವಾಸ ಕೈಗೊಳ್ಳುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಹೀಗೆ ಪ್ರವಾಸ ಮಾಡುವ ಪ್ರವಾಸಿಗರು ತಮ್ಮ ರಕ್ಷಣೆಯ ಬಗ್ಗೆ ಮುಂಜಾಗ್ರತೆ ವಹಿಸುವುದು ಅನಿವಾರ್ಯ.

ಗುಜರಾತ್‌ನ ರಾಜ್‌ಕೋಟ್‌ನಗರದಲ್ಲಿ ಗೇಮ್‌ಝೋನ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 12 ಮಕ್ಕಳು ಸೇರಿ 35 ಜನ ಮರಣ ಹೊಂದಿರುವುದು ದುರದೃಷ್ಟಕರ. ಜೊತೆಗೆ ರಾಮನಗರದಲ್ಲಿನ ಜೀಪ್ ಲೈನ್ ತುಂಡಾಗಿ 35 ವರ್ಷದ ಮಹಿಳೆ ಮೃತಪಟ್ಟಿರುವುದು ಪ್ರವಾಸಿಗರು ಎಚ್ಚರಿಕೆ ವಹಿಸುವುದು ಅನಿವಾರ್ಯ. ಪ್ರವಾಸಕ್ಕೆ ಹೊರಡುವ ಪ್ರವಾಸಿಗರು ಮೊದಲು ತಾವು ಭೇಟಿ ನೀಡುವ ಸ್ಥಳಗಳ ಬಗ್ಗೆ ಮೊದಲೆ ಮಾಹಿತಿ ಸಂಗ್ರಹಿಸಬೇಕು ಉದಾಹರಣೆಗೆ: ಆ ಪ್ರದೇಶದ ಹವಾಮಾನ, ತಂಗುವ ಹೋಟೆಲ್, ಪ್ರವಾಸಿ ಸ್ಥಳದಲ್ಲಿ ಮೂಲ ಸೌಕರ್ಯ, ರಕ್ಷಣೆ, ಸಂಪರ್ಕ ವ್ಯವಸ್ಥೆ, ಹತ್ತಿರದ ಪೊಲೀಸ್ ಠಾಣೆಗಳು, ಆಸ್ಪತ್ರೆಗಳು ಹೀಗೆ ಇನ್ನೂ ಮುಂತಾದ ವಿಷಯಗಳ ಬಗ್ಗೆ ಮೊದಲೆ ಮಾಹಿತಿ ಸಂಗ್ರಹಿಸಿದರೆ ಸುರಕ್ಷಿತವಾಗಿ ಪ್ರವಾಸ ಕೈಗೊಳ್ಳಬಹುದಾಗಿದೆ.

ಇಂದಿನ ಅಂತರ್ಜಾಲ ಯುಗದಲ್ಲಿ ಯಾವುದೇ ಪ್ರವಾಸಿ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸುವುದು ಸುಲಭವಾದ ಕಾರ್ಯವಾಗಿದೆ. ವೆಬ್‌ಸೈಟ್ ಮತ್ತು ಯೂಟ್ಯೂಬ್‌ಗಳಲ್ಲಿ ಹಲವಾರು ವೀಡಿಯೋ ಸಹಿತ ಮಾಹಿತಿಯಿದ್ದು ಆ ಸ್ಥಳದ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ. ಜೊತೆಗೆ ಆ ಸ್ಥಳದಲ್ಲಿ ಉತ್ತಮ ಸೌಲಭ್ಯಗಳಿದ್ದರೆ ಒಳ್ಳೆಯ ರೇಟಿಂಗ್ ಪಾಯಿಂಟ್ ಹಾಗೂ ಒಳ್ಳೆಯ ಪ್ರತಿಕ್ರಿಯೆ ಕೂಡ ಬರುತ್ತದೆ.

ಪ್ರವಾಸೋದ್ಯಮ ಎಂಬುದು ಸರ್ಕಾರಕ್ಕೆ ದೊಡ್ಡ ಮಟ್ಟದ ಆದಾಯ ತಂದು ಕೊಡುವ ಮೂಲವಾಗಿದ್ದು, ಸರ್ಕಾರಗಳು ಪ್ರವಾಸಿ ಸ್ಥಳಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು, ಕೆಲವೊಂದು ಪ್ರವಾಸಿ ಸ್ಥಳಗಳಲ್ಲಿ ಅನಗತ್ಯ ಟೋಲ್ ಸಂಗ್ರಹ ಕೇಂದ್ರಗಳಿರುತ್ತವೆ ಮತ್ತು ಕೆಲವು ಕಡೆ ಹೆಸರಿಗು ಒಬ್ಬರಾದರು ಪೊಲೀಸ್ ಇರುವುದಿಲ್ಲ. ಇಂತಹ ಕಡೆ ಪ್ರವಾಸಿಗರ ಭದ್ರತೆಗೆ ಯಾರು ಹೊಣೆ.

ಕೇಂದ್ರ-ರಾಜ್ಯ ಸರ್ಕಾರಗಳು ಪ್ರವಾಸಿ ಕೇಂದ್ರಗಳಲ್ಲಿ ಮೂಲಸೌಕರ್ಯಗಳನ್ನು ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಪಡಿಸುವ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿಗೆ ಆದ್ಯತೆ ನೀಡಿದರೆ ಸರ್ಕಾರಕ್ಕೆ ಆದಾಯವು ಬರುತ್ತದೆ ಮತ್ತು ಹಲವಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ.

-ರಾಸುಮ ಭಟ್, ಚಿಕ್ಕಮಗಳೂರು.

■ ಹುಣಸೂರಿನ ಪ್ರಯಾಣಿಕರಿಗೆ ಒಂದು ರೂಪಾಯಿ ಚಿಲ್ಲರೆ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ಮೈಸೂರಿನ ಪ್ರಮುಖ ತಾಲೂಕು ಕೇಂದ್ರವಾದ ಹುಣಸೂರಿಗೆ ದಿನನಿತ್ಯ ಸಾವಿರಾರು ಜನರು ಮೈಸೂರಿನಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಮೂಲಕ ಪ್ರಯಾಣಿಸುತ್ತಾರೆ. ಪ್ರಯಾಣ ದರ 51 ರೂಪಾಯಿಗಳನ್ನು ನಿಗದಿಪಡಿಸಿದ್ದು, ಪ್ರಯಾಣಿಕರಿಗೆ ಹಾಗೂ ಕಂಡಕ್ಟರ್‌ಗಳಿಗೆ ಇದುವೇ ದೊಡ್ಡ ತಲೆನೋವು ಎಂದರೆ ತಪ್ಪಾಗಲಾರದು. ಪ್ರತಿನಿತ್ಯ ಬಸ್‌ನಲ್ಲಿ ಒಂದು ರೂಪಾಯಿಗಾಗಿ ಜಗಳ ಸಾಮಾನ್ಯವಾಗಿಬಿಟ್ಟಿದೆ. ಎಷ್ಟು ಜನರಿಗೆ ಒಂದು ರೂಪಾಯಿ ಬಿಡಲಿ ಎಂದು ತಮ್ಮ ಅಳಲು ತೋಡಿಕೊಳ್ಳುವ ಕಂಡಕ್ಟರ್ ನಾವು ಎಲ್ಲಿಂದ ಒಂದು ರೂಪಾಯಿ ತರಲಿ ಎಂದು ತಲೆ ಚಚ್ಚಿಕೊಳ್ಳುವ ಪ್ರಯಾಣಿಕ ಇವರಿಬ್ಬರ ಜಗಳ್ ಬಂದಿ ನೋಡಿ ಶಕ್ತಿ ಯೋಜನೆಯಲ್ಲಿ ಉಚಿತ ಪ್ರಯಾಣ ಮಾಡುವ ಮಹಿಳೆಯರು ಒಳಗೊಳಗೇ ನಗುವರು.

ಟಿಕೆಟ್ ಹಿಂದೆ ಚಿಲ್ಲರೆ ಬರೆದು ಕೊಡುವ ಕಂಡಕ್ಟರ್ ಬಸ್ ಸ್ಟ್ಯಾಂಡಿನಲ್ಲಿ 3-4 ಜನರಿಗೆ ಸೇರಿಸಿ ದೊಡ್ಡ ನೋಟು ನೀಡಿ ಹಂಚಿಕೊಳ್ಳಿ ಎಂದು ಹೇಳಿ ಹೊರಟು ಬಿಟ್ಟರೆ ಬಸ್‌ನಿಂದ ಇಳಿದ ಪ್ರಯಾಣಿಕರು ಚಿಲ್ಲರೆ ಹಂಚಿಕೊಳ್ಳಲು ಮತ್ತೆ ಜಗಳವಾಡುವುದು ನಡೆಯುತ್ತಿದೆ. ಮಳೆ ನಿಂತರು ಮರದ ಹನಿ ನಿಲ್ಲದ ಹಾಗೆ ಆಗುತ್ತಿದೆ. ಅದಕ್ಕೆ ಸಮಸ್ತ ಹುಣಸೂರಿಗೆ ಪ್ರಯಾಣಿಸುವ ಪುರುಷ ಪ್ರಯಾಣಿಕರ ಪರವಾಗಿ ನನ್ನ ಮನವಿ ಏನೆಂದರೆ ಶಕ್ತಿ ಯೋಜನೆಗೆ ಸಾವಿರಾರು ಕೋಟಿ ನೀಡಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿರುವ ಸರ್ಕಾರ ನಮಗೆ ಒಂದು ರೂಪಾಯಿ ಬಿಟ್ಟು ಕೊಟ್ಟರೆ 50 ರೂಪಾಯಿ ನೀಡಿ ಕಂಡಕ್ಟರ್ ಜೊತೆ ಜಗಳವಿಲ್ಲದೆ ನೆಮ್ಮದಿಯಿಂದ ಪ್ರಯಾಣ ಮಾಡಬಹುದು. ಈ ನಿಟ್ಟಿನಲ್ಲಿ KSRTC ಹಿರಿಯ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕಾಗಿ ಕೋರಿಕೆ.

- ನಾಗೇಂದ್ರ ಕಿಲಗೆರೆ, ಮೈಸೂರು

■ ಗಂಡ-ಹೆಂಡತಿ ಜಗಳ ಟಿವಿ ಮಾಧ್ಯಮದವರೆಗೆ...

ಮಾನ್ಯರೆ,

ಗಂಡ, ಹೆಂಡತಿ ಜಗಳ ಉಂಡು ಮಲಗುವ ತನಕ ಎಂಬುದು ಗಾದೆ ಮಾತು, ಆದರೆ ಪ್ರಸ್ತುತ, ಅದು ಹಿಂದಿನ ಹಾಗಿಲ್ಲ, ಗಂಡ ಹೆಂಡಿರ ಜಗಳ ಟಿವಿ ಮಾಧ್ಯಮದ ಮೂಲಕ ಎನ್ನುವಂತಹ ಪರಿಸ್ಥಿತಿಗೆ ಬಂದು ನಿಂತಿದೆ. ಸಮಾಜದಲ್ಲಿ ಏನೋ ಒಂಚೂರು ಹೆಸರು ಮಾಡಿರುವ ಗಂಡ ಹೆಂಡತಿ ಇಬ್ಬರೂ ಮಾಧ್ಯಮಗಳ ಮುಂದೆ ಕುಳಿತುಕೊಳ್ಳುತ್ತಾರೆ, ಅಲ್ಲಿ ಅವರ ದಾಂಪತ್ಯದ ಬಗ್ಗೆ ಏನೇನೋ ಹೇಳ್ಕೋತಾರೆ, ಹಾಗಾಗಿ ನಮ್ಮಲ್ಲಿ ಹೊಂದಾಣಿಕೆ ಸಾಧ್ಯವಿಲ್ಲ. ಹಾಗಾಗಿ ವಿಚ್ಛೇದನ ಪಡೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತಾರೆ ಆದರೆ ಮಾಧ್ಯಮದವರು ಬಿಡಬೇಕಲ್ಲ ಸುಮಾರು ಪ್ರಶ್ನೆಗಳ ಸುರಿಮಳೆಯಾಗುತ್ತದೆ. ಅವರೂ ಏನೋ ಉತ್ತರ ಕೊಡುತ್ತಾರೆ, ಆದರೆ ಇವರ ವಿಚ್ಛೇದನದಿಂದ ಯಾರಿಗೂ ಪ್ರಯೋಜನವಿಲ್ಲ, ಲಾಭವೂ ಇಲ್ಲ ನಷ್ಟವೂ ಇಲ್ಲ, ನಿಜ ಹೇಳಬೇಕೆಂದರೆ ಇದು ಅವರ ವೈಯಕ್ತಿಕ ವಿಷಯ, ಹೋಗಲಿ ಆ ಜೋಡಿಯೇನು ಅಂತಾರಾಷ್ಟ್ರೀಯ ಮಟ್ಟದವರೇನೂ ಅಲ್ಲ, ಒಂದು ಲೈನಿನ ಸುದ್ದಿಯನ್ನು, ಟಿವಿ ಮಾಧ್ಯಮದವರು, ಒಂದುಗಂಟೆಯ ಕಾರ್ಯಕ್ರಮ ಮಾಡುತ್ತಾರೆ, ಇದರಿಂದ ಸಮಾಜಕ್ಕೆ ಯಾವರೀತಿಯ ಮೆಸೇಜೂ ಹೋಗುವುದಿಲ್ಲ ಬದಲಾಗಿ ಕೀಳ ಭಿರುಚಿಯ ಪ್ರಸಾರವಾಗುತ್ತದೆ, ಇದು ನಮಗೆ ಬೇಕೆ?, ನಮ್ಮ ಕುಟುಂಬ ವ್ಯವಸ್ಥೆ, ಇನ್ನೂ ಗಟ್ಟಿಯಾಗಿಯೇ ಇದೆ, ಅಲ್ಲೊಂದು, ಇಲ್ಲೊಂದು ಇಂತಹ ಘಟನೆಗಳು ಆಗಾಗ ನಡೆಯುತ್ತವೆ. ಅದನ್ನು ವೈಭವೀಕರಿಸುವುದನ್ನು ಬಿಟ್ಟರೆ, ಸಮಾಜಕ್ಕೆ ಒಳ್ಳೆಯದು, ಎಲ್ಲರೂ ಒಗ್ಗೂಡಿ ಸ್ವಸ್ಥ ಸಮಾಜ ಕಟ್ಟುವ ಪ್ರಯತ್ನ ಪಡೋಣ. ಇಂತಹ ಘಟನೆಗಳನ್ನು ವೈಭವೀಕರಿಸುವುದು ಬೇಡ.

-ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಬೆರಗು

ಯೋಗ ಪಿತ್ರಾರ್ಜಿತ... ಯೋಗ್ಯತೆ ಸ್ವಯಾರ್ಜಿತ...!

ಕಾಲವೊಂದಿತ್ತು, ಮನೆತನ ನೋಡಿ ತಮ್ಮ ಮನೆಯ ಮಗಳನ್ನು ಮದುವೆ ಮಾಡಿಕೊಡುತ್ತಿದ್ದರು, ಮನೆತನ ನೋಡಿ ತಮ್ಮ ಮನೆಗೆ ಸೊಸೆ ತರುತ್ತಿದ್ದರು. ಆಗ ಯೋಗ್ಯತೆಯೂ ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಂತೆ ಇರುತ್ತಿತ್ತು. ಆದರೆ ಇಂದು ಸಾಮಾಜಿಕ ವ್ಯವಸ್ಥೆಯೇ ಬದಲಾಗಿದೆ. ಮನೆಯ ಹಿರಿಯರ ಸಂಸ್ಕಾರವನ್ನು ಕಂಡು ಮಕ್ಕಳು ಅವರಂತೆ ಇರುತ್ತಾರೆ ಎಂದು ಊಹಿಸುವುದು ಕಷ್ಟಸಾಧ್ಯ. 'ತಾಯಿಯಂತೆ ಮಗಳು, ನೂಲಿನಂತೆ ಸೀರೆ' ಎಂಬ ಗಾದೆ ಇಂದಿಗೆ ಅಷ್ಟು ಸುಲಭವಾಗಿ ನಂಬಲಾಗದು. ಹಾಗೆಯೇ 'ತಂದೆಗೆ ತಕ್ಕ ಮಗ' ಎಂಬ ಮಾತನ್ನೂ ಸಹ ಪರಿಗಣಿಸಲಾಗದು. ಇಂದಿನ ಕಾಲಘಟ್ಟದಲ್ಲಿ ಹೆತ್ತವರಿಗೆ ತಮ್ಮ ಮಕ್ಕಳ ಯೋಗ್ಯತೆ ತಿಳಿದಿರುವುದಿಲ್ಲ. ಮನೆಯಲ್ಲಿ ಇದ್ದಾಗ ಒಂದು ರೀತಿ ವರ್ತಿಸುವ ಅವರುಗಳು ಹೊರಗಡೆ ಪ್ರಪಂಚದಲ್ಲಿ ಭಿನ್ನವಾದ ವ್ಯಕ್ತಿತ್ವ ಹೊಂದಿರುತ್ತಾರೆ. ಇಂದಿನ ಮಕ್ಕಳ ನಡೆ ನೋಡಿ ಇವರು ಯಾರ ಮನೆಯ ಮಕ್ಕಳು ಎಂದು ಊಹಿಸಲಾಗದು. ಹೆತ್ತವರು ತಮ್ಮ ಆಸ್ತಿಪಾಸ್ತಿಯನ್ನು ಮಕ್ಕಳಿಗೆ ನೀಡಿ ಅವರನ್ನು ಯೋಗವಂತರನ್ನಾಗಿ ಮಾಡಬಹುದು, ಆದರೆ ಸಂಸ್ಕಾರ, ಸಂಸ್ಕೃತಿಯನ್ನು ನೀಡಿ ಯೋಗ್ಯರನ್ನಾಗಿ ರೂಪಿಸುವುದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಇಂದು ಯೋಗ ಪಿತ್ರಾರ್ಜಿತ, ಯೋಗ್ಯತೆ ಸ್ವಯಾರ್ಜಿತ ಎನ್ನಬೇಕಾಗುತ್ತದೆ.

ಇಂದು ಸಮಾಜದಲ್ಲಿ ಅನೇಕ ಯೋಗ ಪುರುಷರು ಹಾಗೂ ಮಹಿಳೆಯರು ದೊರಕುತ್ತಾರೆ. ಆದರೆ ಯೋಗ್ಯತೆ ಇರುವವರನ್ನು ಹುಡುಕುವುದು ಕಷ್ಟಸಾಧ್ಯವಾಗಿದೆ. ನಂಬಿಕೆ, ವಿಶ್ವಾಸ ಎಂಬ ಪದಗಳು ಸವಕಲು ಆಗಿಬಿಟ್ಟಿವೆ. ಸ್ವಾರ್ಥ ಸಾಧನೆಗೆ, ಸ್ವಯಂ ಸುಖಕ್ಕೆ ಇಂದಿನ ಪೀಳಿಗೆ ಅನೇಕ ವಿಷಯಗಳಲ್ಲಿ ರಾಜಿಯಾಗಿಬಿಡುವ ಮನೋಭಾವ ಹೊಂದಿರುತ್ತಾರೆ. ನೋಡಿದವರು ಏನನ್ನುತ್ತಾರೆ ಎಂದು ಒಂದು ನೈತಿಕ ಭಯ ಇರಿಸಿಕೊಂಡರೆ ಮಾತ್ರ ಮನುಷ್ಯರು ಯೋಗ್ಯರಾಗಲು ಸಾಧ್ಯ. 'ಅಯ್ಯೋ, ಯಾರನ್ನು ಕಟ್ಟಿಕೊಂಡು ನನಗೇನು, ಇದು ನನ್ನ ಬದುಕು, ನನಗೆ ಇಷ್ಟ ಬಂದ ಹಾಗೆ ಬದುಕುತ್ತೇನೆ' ಎಂದು ಬದುಕುವವರು ಸ್ವೇಚ್ಛಾಚಾರಿಗಳಾಗಿಬಿಡುತ್ತಾರೆ. ಇಂಥವರಿಂದಲೇ ಯೋಗ್ಯತೆ ಎಂಬ ಪದ ಅಪಮೌಲ್ಯವಾಗುತ್ತಿದೆ. ಈ ಪೀಳಿಗೆಯವರ ಪ್ರಾಶಸ್ತ್ಯಗಳೇ ಭಿನ್ನವಾಗಿವೆ. ಮನೆ, ಮನೆತನ, ಹೆತ್ತವರ ನಂಬಿಕೆ ಇವೆಲ್ಲಾ ಅವರ ಗಣನೆಗೆ ಬರುವುದೇ ಇಲ್ಲ. ಇದರಿಂದ ಅನೇಕ ಅಪರಾಧ ಪ್ರಕರಣಗಳಲ್ಲಿ ವಿದ್ಯಾವಂತ ಯುವಕರಷ್ಟೇ ಅಲ್ಲ, ಒಳ್ಳೆಯ ಮನೆತನದಿಂದ ಬಂದ ಯುವಕರು ಭಾಗಿಯಾಗುತ್ತಿರುವುದು ದುರದೃಷ್ಟಕರ.

ಮಕ್ಕಳಿಗೆ ಹೆತ್ತವರು ಒಳ್ಳೆಯ ಶಿಕ್ಷಣ ಕೊಡಿಸಬಹುದು. ತಾವು ಉತ್ತಮ ಸಂಸ್ಕಾರ ಅನುಸರಿಸಿ, ನೀವು ಹೀಗೆ ನಡೆಯಿರಿ ಎಂದು ಹೇಳಬಹುದು. ಆದರೆ ಯೋಗ್ಯತೆ ಗಳಿಸಿಕೊಳ್ಳುವುದು ಮಾತ್ರ ಸ್ವಯಂ ಪ್ರಯತ್ನದಿಂದ ಮಾತ್ರ ಸಾಧ್ಯ. ಅಪ್ಪ-ಅಮ್ಮನ ಯೋಗ್ಯತೆ ರಕ್ತಗತವಾಗಿ ಮಕ್ಕಳಿಗೆ ಬರುತ್ತದೆ ಎಂದು ನಂಬುವುದು ತಪ್ಪು. ಇಂದು ಅನೇಕ ಸುಸಂಸ್ಕೃತ ಕುಟುಂಬದ ಮಕ್ಕಳು ಸಮಾಜದಲ್ಲಿ ತಪ್ಪು ಹಾದಿ ತುಳಿದು ಮನೆಗೆ ಕಂಟಕವಾಗಿ ಪರಿಣಮಿಸಿದ್ದಾರೆ. ಯೌವನದಲ್ಲಿ ಯಾವುದು ಸರಿ-ತಪ್ಪು ಎಂಬ ಅರಿವಿಲ್ಲದೆ, ಅಯೋಗ್ಯ ಗೆಳೆಯರ ಸಹವಾಸಕ್ಕೆ ಬಿದ್ದು, ಅಪ್ಪ- ಅಮ್ಮ ಗಳಿಸಿದ ಆಸ್ತಿಯನ್ನಷ್ಟೇ ಕರಗಿಸಿದೇ ಅವರು ಹತ್ತಾರು ವರ್ಷಗಳಿಂದ ಗಳಿಸಿದ್ದ ಗೌರವವನ್ನು ಹಾಳುಗೆಡವಿಬಿಡುತ್ತಾರೆ.

ಲಾಟರಿ ಹೊಡೆದರೂ ಒಂದೇ ದಿನದಲ್ಲಿ ಯೋಗ ಲಭಿಸಬಹುದು. ಆದರೆ ಯೋಗ್ಯತೆ ಒಂದೇ ದಿನ, ಒಂದು ವಾರ, ಒಂದು ತಿಂಗಳು, ವರ್ಷದಲ್ಲಿ ಗಳಿಸುವಂತಹ ಸಂಗತಿಯಲ್ಲ. ಅದೊಂದು ತಪಸ್ಸು ಇದ್ದ ಹಾಗೆ. ಯೋಗ ಹೋದರೆ ಮತ್ತೆ ಸಿಗಬಹುದು, ಆದರೆ ಯೋಗ್ಯತೆ ಮಾತ್ರ ಒಮ್ಮೆ ಕಳೆದುಕೊಂಡರೆ ಮತ್ತೆ ಸುಲಭವಾಗಿ ಗಳಿಸಲಾಗದ ಸಂಗತಿ. ಯೋಗ್ಯತೆ ಇರುವ ಮನುಷ್ಯ ಸದಾ ಎಚ್ಚರದಿಂದ ಇರಬೇಕಾಗುತ್ತದೆ. ಅಯೋಗ್ಯರಿಗೆ ಯೋಗ್ಯ ಜನರಿಗೆ ಸಮಾಜದಲ್ಲಿ ಸಿಗುವ ಗೌರವ ಕಂಡು ಈರ್ಷೆ ಮೂಡಿ ಅವರನ್ನು ಅಯೋಗ್ಯರು ಎಂದು ಬಿಂಬಿಸಲು ಸಹ ಯತ್ನಿಸಬಹುದು.

ಯೋಗ್ಯತೆ ಇರುವವರನ್ನು ಗುರುತಿಸಿ ಗೌರವಿಸಲು ಯೋಗ್ಯತೆ ಇರಬೇಕು. ತಮ್ಮ ಕೆಲಸ ಮಾಡಿಕೊಡಲಿಲ್ಲ ಎಂದ ಮಾತ್ರಕ್ಕೆ ಅವರನ್ನು ಅಯೋಗ್ಯರು ಎಂದು ಪರಿಗಣಿಸಿಬಿಡುವ ಅಯೋಗ್ಯರು ನಮ್ಮ ನಿಮ್ಮ ನಡುವೆ ಇದ್ದಾರೆ. ಅಕ್ರಮವನ್ನು ಸಕ್ರಮ ಮಾಡಿಕೊಟ್ಟರೆ ಅವರ ದೃಷ್ಟಿಯಲ್ಲಿ ಯೋಗ್ಯರೆನಿಸಿಕೊಳ್ಳುತ್ತಾರೆ. ಆದರೆ ಅಕ್ರಮವನ್ನು ಅಕ್ರಮ ಎಂದು ತಳ್ಳಿಹಾಕಿದರೆ ಮಾತ್ರ ಅವರ ದೃಷ್ಟಿಯಲ್ಲಿ ಅಯೋಗ್ಯರಾಗಿ ಬಿಡುತ್ತಾರೆ. ಆದರೆ ಯೋಗ್ಯರು ಮಾತ್ರ 'ನಾಯಿ ಬೊಗಳಿದರೆ ಭೂಲೋಕ ಹಾಳಾಗುವುದಿಲ್ಲ' ಎಂದು ಭಾವಿಸಿ ಯಾವುದಕ್ಕೂ ವಿಚಲಿತರಾಗದೆ ತಮ್ಮತನ ಕಾಪಾಡಿಕೊಳ್ಳುವ ಅಗತ್ಯವಿದೆ.



> **"ಯೋಗ್ಯತೆಗೆ ಯಾವುದೇ ವಿದ್ಯಾರ್ಹತೆ ಬೇಕಿಲ್ಲ. ಅನೇಕ ಅವಿದ್ಯಾವಂತರು ಯೋಗ್ಯರಾಗಿ ಸಮಾಜದಲ್ಲಿ ಸಾರ್ಥಕ ಬದುಕನ್ನು ಕಂಡುಕೊಂಡಿದ್ದಾರೆ. ಆದರೆ ವಿದ್ಯಾವಂತರೆನಿಸಿಕೊಂಡವರಲ್ಲಿ ಅನೇಕರು ಇಲ್ಲಸಲ್ಲದ ಚಟಗಳ ದಾಸರಾಗಿ, ಸಾಲಗಾರರಾಗಿ, ಮಾತಿಗೆ ತಪ್ಪಿದವರಾಗಿ, ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿ ಅಯೋಗ್ಯರಾಗಿಬಿಟ್ಟಿರುತ್ತಾರೆ. ಇನ್ನೂ ಕೆಲವರು ತಮ್ಮ ಇಷ್ಟಾರ್ಥಗಳನ್ನು ಅನುಸರಿಸಲು ವಾಮಮಾರ್ಗವನ್ನು ಅನುಸರಿಸಿ ತಮ್ಮ ವಿದ್ಯಾರ್ಹತೆಗೆ ಅವಮಾನ ಮಾಡಿಬಿಟ್ಟಿರುತ್ತಾರೆ. ಮೂರು ಬಿಟ್ಟವರು ಊರಿಗೆ ದೊಡ್ಡವರು ಎನ್ನುವಂತೆ ತಮ್ಮ ಗುರಿ ಸಾಧನೆಗೆ ಯಾವುದೇ ನೀಚ ಕೆಲಸ ಮಾಡಲು ಸಿದ್ಧರಾಗಿರುತ್ತಾರೆ. ಅವರಿಗೆ ಯೋಗ್ಯತೆ ಎಂಬ ಪದದ ಅರ್ಥವೇ ಅರಿವಿರುವುದಿಲ್ಲ.**

ಯೋಗ್ಯತೆಗೆ ಯಾವುದೇ ವಿದ್ಯಾರ್ಹತೆ ಬೇಕಿಲ್ಲ. ಅನೇಕ ಅವಿದ್ಯಾವಂತರು ಯೋಗ್ಯರಾಗಿ ಸಮಾಜದಲ್ಲಿ ಸಾರ್ಥಕ ಬದುಕನ್ನು ಕಂಡುಕೊಂಡಿದ್ದಾರೆ. ಆದರೆ ವಿದ್ಯಾವಂತರೆನಿಸಿಕೊಂಡವರಲ್ಲಿ ಅನೇಕರು ಇಲ್ಲಸಲ್ಲದ ಚಟಗಳ ದಾಸರಾಗಿ, ಸಾಲಗಾರರಾಗಿ, ಮಾತಿಗೆ ತಪ್ಪಿದವರಾಗಿ, ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿ ಅಯೋಗ್ಯರಾಗಿ ಬಿಟ್ಟಿರುತ್ತಾರೆ. ಇಂದು ಸರ್ಕಾರದ ಮಟ್ಟದಲ್ಲಿ ನಡೆಯುತ್ತಿರುವ ಅಕ್ರಮ ವ್ಯವಹಾರಗಳಲ್ಲಿ ವಿದ್ಯಾವಂತರೇ ಭಾಗಿಯಾಗುತ್ತಿರುವುದು ವಿಪರ್ಯಾಸ ಸಂಗತಿ. ಇನ್ನೂ ಕೆಲವರು ತಮ್ಮ ಇಷ್ಟಾರ್ಥಗಳನ್ನು ಅನುಸರಿಸಲು ವಾಮಮಾರ್ಗವನ್ನು ಅನುಸರಿಸಿ ತಮ್ಮ ವಿದ್ಯಾರ್ಹತೆಗೆ ಅವಮಾನ ಮಾಡಿ ಬಿಟ್ಟಿರುತ್ತಾರೆ. 'ಮೂರು ಬಿಟ್ಟವರು ಊರಿಗೆ ದೊಡ್ಡವರು' ಎನ್ನುವಂತೆ ತಮ್ಮ ಗುರಿ ಸಾಧನೆಗೆ ಯಾವುದೇ ನೀಚ ಕೆಲಸ ಮಾಡಲು ಸಿದ್ಧರಾಗಿರುತ್ತಾರೆ. ಅವರಿಗೆ ಯೋಗ್ಯತೆ ಎಂಬ ಪದದ ಅರ್ಥವೇ ಅರಿವಿರುವುದಿಲ್ಲ.

ಇಂದಿನ ಸಮಾಜದಲ್ಲಿ ಕೆಲವರ ಮನೋಭಾವವು ಸಹ ವಿಚಿತ್ರ ಎನಿಸುತ್ತದೆ. ಸಂಬಂಧ ಮಾಡಬೇಕಾದಾಗ ವರ/ವಧುವಿನ ಯೋಗ್ಯತೆಗಿಂತೆ ಯೋಗವನ್ನೇ ಮಾನದಂಡವಾಗಿರಿಸಿಕೊಂಡು, ಅವರಿಗೆ ಇರುವ ಆಸ್ತಿ ಅಂತಸ್ತಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುತ್ತಾರೆ. ಗುಣವಂತ/ಗುಣವಂತೆಗಿಂತ ಹಣವಂತ/ಹಣವಂತೆ ಇಂದಿನ ಮದುವೆ ಮಾರುಕಟ್ಟೆಯಲ್ಲಿ ಬೇಡಿಕೆಯ ವ್ಯಕ್ತಿಗಳಾಗಿರುತ್ತಾರೆ. ಹಣದಿಂದ ಎಲ್ಲವನ್ನು ಕೊಂಡುಕೊಳ್ಳಬಹುದು ಎಂಬ ಹುಂಬತನ ಅನೇಕರಿಗಿದೆ. ಹಣದಿಂದ ಏನನ್ನು ಬೇಕಾದರೂ ಕೊಂಡುಕೊಳ್ಳಬಹುದು, ಆದರೆ ಯೋಗ್ಯತೆಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಯೋಗ್ಯತೆ ಎಂಬುದು ಅಮೂಲ್ಯವಾದುದು. ಅದು ಬಿಕರಿಗೆ ಸಿಗುವ ವಸ್ತುವಲ್ಲ. ಯೋಗ್ಯತೆ ಗಳಿಸಿದವರೂ ಅಷ್ಟೇ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯೋಗ್ಯರು ಸದಾ ಗಾಜಿನ ಮನೆಯಲ್ಲಿ ವಾಸಿಸುವಂತೆ ಇರಬೇಕಾಗುತ್ತದೆ.

ಮನುಷ್ಯನಿಗೆ ದಿಢೀರ್ ಹಣ ಹಾಗೂ ಖ್ಯಾತಿ ಲಭಿಸಿಬಿಟ್ಟರೆ ತನ್ನ ತನವನ್ನು ಕಳೆದುಕೊಳ್ಳುವುದೇ ಹೆಚ್ಚು. ಕೆಲವು ಯೋಗ್ಯರು ಹಾಗೂ ಪ್ರಜ್ಞಾವಂತರು ಮಾತ್ರ ಯಾವುದೂ ಶಾಶ್ವತವಲ್ಲ ಎಂಬ ಸತ್ಯವನ್ನು ಅರಿತು, ಅವರು ಇದ್ದಂತೆಯೇ ಇದ್ದುಬಿಡುತ್ತಾರೆ. ಆದರೆ ಕೆಲವು ಅಯೋಗ್ಯರು ಮಾತ್ರ ಹಣ ಹಾಗೂ ಅಂತಸ್ತಿನ ಮದದಲ್ಲಿ ಭೂಮಿಯ ಮೇಲೆ ನಡೆಯುವುದಿಲ್ಲ. ಆನೆ ನಡೆದದ್ದೇ ಹಾದಿ ಎಂಬ ಮಾತಿನಂತೆ ತಾವು ಮಾಡಿದ್ದೆಲ್ಲವೂ ಸರಿ ಎಂಬ ಅಹಮಿಕೆಯಿಂದ ಮೆರೆದಾಡುತ್ತಾರೆ. ಅವರಿಗೆ ಕಾಲವೇ ಬುದ್ಧಿ ಕಲಿಸುತ್ತದೆ. ಈ ಪ್ರಪಂಚ ಪ್ರಾಮಾಣಿಕರಿಗೆ ಪರೀಕ್ಷೆಗಳನ್ನು ಒಡ್ಡುತ್ತದೆ. ಅದೇ ರೀತಿ ಯೋಗ್ಯರನ್ನೇ ಹೆಚ್ಚು ಪರೀಕ್ಷಿಸುತ್ತದೆ. ಅನೇಕ ಅಯೋಗ್ಯರಿಗೆ ಯೋಗ್ಯ ಜನರ ಯೋಗ್ಯತೆ ತಿಳಿಯುವುದೇ ಇಲ್ಲ. ಯೋಗ್ಯರ ಸರಳತೆ, ಸಭ್ಯತೆ, ತತ್ತ್ವ-ಆದರ್ಶಗಳನ್ನು ಆಡಿಕೊಳ್ಳುವಂತಹ ಅಯೋಗ್ಯರು ಅನೇಕರಿದ್ದಾರೆ. ಹಾಗೆಯೇ ಅಯೋಗ್ಯರನ್ನು ಕೊಂಡಾಡುವ ಅಂಧಾಭಿಮಾನಿಗಳಿಗೇನು ಕಡಿಮೆ ಇಲ್ಲ.

ಇಂದಿನ ಪೀಳಿಗೆಯ ಯುವಕರು ಬುದ್ಧಿವಂತರಾಗಿರುತ್ತಾರೆ. ಆದರೆ ಬುದ್ಧಿವಂತರಿಗೆಲ್ಲಾ ಒಳ್ಳೆಯ ಬುದ್ಧಿ ಇರುತ್ತದೆ ಎನ್ನುವ ಹಾಗಿಲ್ಲ. ಬಿಸಿರಕ್ತದ ಯುವಕರು ದಾರಿತಪ್ಪುವ ಮುನ್ನ ಒಮ್ಮೆ ತಾಯಿ-ತಂದೆಯ ಪರಿಶ್ರಮ, ಪ್ರೀತಿ, ತ್ಯಾಗವನ್ನೊಮ್ಮೆ ನೆನೆಯಬೇಕು. ಸುಖದಲ್ಲಿ ಒಟ್ಟಿಗಿರುವ ಅಯೋಗ್ಯ ಸ್ನೇಹಿತರುಗಳು ಕಷ್ಟಬಂದಾಗ ಕೈಕೊಡುತ್ತಾರೆ ಎಂಬ ಸತ್ಯ ಅರಿಯಬೇಕು. ತಾಯಿ-ತಂದೆಗಿಂತ ದೊಡ್ಡ ಶಕ್ತಿ ನಮಗಿಲ್ಲ ಎಂದು ನಂಬಬೇಕು. ತಾಯಿ-ತಂದೆಗೆ ಮಕ್ಕಳು ಸಾಧಿಸಿದಾಗ ಸಿಗುವ ಸಂತೋಷಕ್ಕಿಂತ ಬೇರೆ ಅಗತ್ಯವಿರುವುದಿಲ್ಲ. ಮಕ್ಕಳು ಉದ್ಧಾರ ಆದರು ಎಂದರೆ ಅದಕ್ಕಿಂತ ಗೌರವ ನಿರೀಕ್ಷಿಸುವುದಿಲ್ಲ. ಮಕ್ಕಳು ಹಾಳಾದರು ಎಂದರೆ ಅದಕ್ಕಿಂತ ನೋವಿನ ಸಂಗತಿ ಅವರಿಗೆ ಬೇರಿಲ್ಲ. ಆದ್ದರಿಂದ ಯೋಗ್ಯರಾಗಿ ಬದುಕುವ ಪಣ ತೊಡಬೇಕು. ಎಲ್ಲದಕ್ಕಿಂತ ಅಪ್ಪ-ಅಮ್ಮನ ನೆಮ್ಮದಿ ಮುಖ್ಯ ಎಂದು ಭಾವಿಸಬೇಕು. ಬಸವಣ್ಣನವರು ವಚನವೊಂದರಲ್ಲಿ 'ಸಾರ ! ಸಜ್ಜನರ ಸಂಗವ ಮಾಡುವುದು; ದೂರ ! ದುರ್ಜನರ ಸಂಗ ಬೇಡವಯ್ಯಾ, ಆವ ಹಾವಾದಡೇನು, ವಿಷವೊಂದೆ, ಅಂತವರ ಸಂಗ ಬೇಡವಯ್ಯಾ, ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳಕೂಟ ವಿಷವೋ, ಕೂಡಲಸಂಗಮದೇವಾ' ಎಂದು ಸ್ನೇಹ ಮಾಡುವಾಗ ಎಷ್ಟು ಎಚ್ಚರದಿಂದ ಇರಬೇಕು ಎಂಬುದನ್ನು ಈ ವಚನದ ಮೂಲಕ ಹೇಳಿದ್ದಾರೆ.

ಇಂದಿನ ದಿನಮಾನದಲ್ಲಿ 'ಹಾಲು ಕುಡಿದ ಮಕ್ಕಳೆ ಬದುಕುವುದು ಕಷ್ಟ, ಇನ್ನು ವಿಷ ಕುಡಿದವರು ಬದುಕಲು ಸಾಧ್ಯವೇ?' ಅಂದರೆ ಸನ್ಮಾರ್ಗದಲ್ಲಿ ನಡೆದರೆ ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಇನ್ನು ದುರ್ಮಾರ್ಗದಲ್ಲಿ ನಡೆದರೆ ಉತ್ತಮ ಜೀವನ ರೂಪಿಸಿಕೊಂಡು ಯೋಗ್ಯರಾಗಲು ಸಾಧ್ಯವೇ? ನಮಗೆ ಯೋಗ ಇಲ್ಲದಿದ್ದರೂ ಪರವಾಗಿಲ್ಲ, ಯೋಗ್ಯತೆಯಿಂದ ಸಮಾಜದಲ್ಲಿ ಒಂದು ಗೌರವವನ್ನು ಗಳಿಸಬಹುದು. ಯೋಗ್ಯತೆಗಿಂದ ಮತ್ತೊಂದು ಯೋಗವಿಲ್ಲ ಎಂದು ಭಾವಿಸಿದರಂತೂ ಬದುಕಿನಲ್ಲಿ ಸಾರ್ಥಕತೆ ಕಾಣಬಹುದು.

ಪದ ತಾಂಬೂಲ:

ಹೆತ್ತವರಿಗೆ ಯೋಗವಂತ ಮಕ್ಕಳಿಗಿಂತ ಯೋಗ್ಯತೆಯುಳ್ಳ ಮಕ್ಕಳೇ ನಿಜವಾದ ಆಸ್ತಿ

ಪೊನ್ನಾಚಿಯಲ್ಲಿ ಬಿದಿರು ಪರಿಕರ ತಯಾರಿಸುವ ಕೇಂದ್ರ ಆರಂಭ

- ಮೊದಲ ತಂಡದಲ್ಲಿ 30 ಮಹಿಳೆಯರಿಗೆ ತರಬೇತಿ
- ಬೆಂಗಳೂರಿನ ಇಂಡಸ್ಟ್ರೀ ಫೌಂಡೇಷನ್ ನೆರವು
- ರಾಷ್ಟ್ರೀಯ ಬಿದಿರು ಯೋಜನೆಯಡಿ ತರಬೇತಿ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಜೂ.16-ಕಾಡಂಚಿನ ಗ್ರಾಮದ ಮಹಿಳೆಯರನ್ನು ಸ್ವಾವಲಂಬಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ವತಿಯಿಂದ ಪೊನ್ನಾಚಿ ಗ್ರಾಮದಲ್ಲಿ ಮಹಿಳೆಯರಿಗೆ ಬಿದಿರಿನ ಪರಿಕರಗಳ ತಯಾರಿಕಾ ಕೇಂದ್ರ ಆರಂಭಿಸಲಾಗಿದ್ದು, ಮೊದಲ ತಂಡದಲ್ಲಿ 30 ಮಹಿಳೆಯರು ವಿವಿಧ ಪರಿಕರ ತಯಾರಿಸುವ ಕಾಯಕದಲ್ಲಿ ಮಗ್ನರಾಗಿದ್ದಾರೆ.

ದಕ್ಷಿಣ ಪ್ರಾಂತ್ಯದ ಪ್ರಸಿದ್ಧ ಯಾತ್ರಾಸ್ಥಳವಾಗಿರುವ ಮಲೆ ಮಹದೇಶ್ವರ ಬೆಟ್ಟದ ಅರಣ್ಯದಲ್ಲಿರುವ ಪೊನ್ನಾಚಿ ಗ್ರಾಮದಲ್ಲಿ ಬಿದಿರು ಪರಿಕರ ತಯಾರಿಕಾ ಕೇಂದ್ರವನ್ನು ತೆರೆದಿದ್ದು, ಮೊದಲ ಹಂತದಲ್ಲಿ ಬಿದಿರು ಬೊಂಬನ್ನು ಯಾವ ಯಾವ ಪರಿಕರಗಳಿಗೆ ಯಾವ ಮಾದರಿಯಲ್ಲಿ ಕತ್ತರಿಸಬೇಕೆಂದು ಹೇಳಿಕೊಡಲಾಗುತ್ತಿದ್ದು, ತಯಾರಿಕೆಯ ಚಾಕಚಕ್ಯತೆ ಮೂಡಿದರೆ ಶೀಘ್ರದಲ್ಲಿಯೇ ಉತ್ಪನ್ನಗಳ ತಯಾರಿಕೆ ಆರಂಭವಾಗಲಿದೆ.

ಕಾಡಂಚಿನ ಮಹಿಳೆಯರು ಹಾಗೂ ಯುವಕರನ್ನು ಸ್ವಾವಲಂಬಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ವಿವಿಧೆಡೆ ಕೆಲ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದು, ಅದರಲ್ಲಿ ಮಲೆ ಮಹದೇಶ್ವರ ವನ್ಯಧಾಮ ವ್ಯಾಪ್ತಿಯಲ್ಲಿ ಮೊದಲ ಹಂತದಲ್ಲಿ ಬಿದಿರು ಪರಿಕರ ತಯಾರಿಕಾ ಕೇಂದ್ರ ತೆರೆಯಲಾಗಿದೆ. ರಾಷ್ಟ್ರೀಯ ಬಿದಿರು ಯೋಜನೆಯಡಿ ಈ ಕೇಂದ್ರ ಸ್ಥಾಪಿಸಿದ್ದು, 2 ವರ್ಷದ ಹಿಂದೆಯೇ ಆಸಕ್ತ ಮಹಿಳೆಯರಿಗೆ ತರಬೇತಿ ನೀಡಲಾಗಿತ್ತು. ಮೊದಲಿಗೆ ಬಿದಿರಿನ ಬುಟ್ಟಿ, ಮೊರ, ಕುಕ್ಕೆ, ಬೀಸಣಿಗೆ ಸೇರಿದಂತೆ ಇನ್ನಿತರ ವಸ್ತುಗಳನ್ನು ತಯಾರಿಸುವ ತರಬೇತಿ ನೀಡಲಾಗಿತ್ತು. ಆ ವೇಳೆ ಸಾಕಷ್ಟು ಮಂದಿ ಸ್ವಯಂ ಪ್ರೇರಣೆಯಿಂದ ತರಬೇತಿ ಪಡೆದಿದ್ದರು. ಇದೀಗ ತಯಾರಿಕಾ ಘಟಕಕ್ಕೆ ವಿಶಾಲವಾದ ಕಟ್ಟಡ ನಿರ್ಮಿಸಲಾಗಿದ್ದು, ತಯಾರಿಕೆಯಲ್ಲಿ ತೊಡಗುವ ಮಹಿಳೆಯರಿಗೆ ಸೌಲಭ್ಯ ಒದಗಿಸಲಾಗಿದೆ.

ಬೇಡಿಕೆ ಹೆಚ್ಚಾಗುತ್ತಿದೆ: ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ವಸ್ತುಗಳ ಬಳಕೆಗೆ ಜನ ತಿರಸ್ಕರಿಸುತ್ತಿರುವ ಹಿನ್ನೆಲೆಯಲ್ಲಿ



ಪೊನ್ನಾಚಿ ಗ್ರಾಮದಲ್ಲಿ ಅರಣ್ಯ ಇಲಾಖೆ ಆರಂಭಿಸಿರುವ ಬಿದಿರು ಪರಿಕರ ತಯಾರಿಕಾ ಕೇಂದ್ರದಲ್ಲಿ ಬಿದಿರು ವಸ್ತುಗಳ ತಯಾರಿಕೆಯಲ್ಲಿ ತೊಡಗಿರುವ ಸ್ಥಳೀಯ ಮಹಿಳೆಯರು.

ಈ ಹಿಂದೆ ಬಳಸುತ್ತಿದ್ದ ಬಿದಿರು ಹಾಗೂ ಪರಿಸರಕ್ಕೆ ಪೂರಕವಾದ ವಸ್ತುಗಳಿಂದ ತಯಾರಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ದಶಕಗಳಿಂದ ಬಳಸುತ್ತಿದ್ದ ಬಿದಿರಿನ ವಸ್ತುಗಳ ಬಳಕೆಗೆ ಜನ ಮುಂದಾಗುತ್ತಿರುವುದರಿಂದ ಇದೀಗ ಕಾಡಂಚಿನ ಗ್ರಾಮಗಳ ಜನರಿಗೆ ಬಿದಿರಿನ ಪರಿಕರ ತಯಾರಿಸುವ ಕಲೆ ಕಲಿಸಲು ಅರಣ್ಯ ಇಲಾಖೆ ಮುಂದಾಗಿದೆ. ಮಲೆ ಮಹದೇಶ್ವರ ಬೆಟ್ಟಕ್ಕೆ ವಿವಿಧೆಡೆಯಿಂದ ಬರುವ ಭಕ್ತರು ವಾಪಸ್ಸಾಗುವಾಗ ಬಿದಿರಿನ ಪುಟ್ಟಿ, ಕುಕ್ಕೆ, ಮೊರ ಸೇರಿದಂತೆ ಇನ್ನಿತರ ವಸ್ತುಗಳನ್ನು ಕೊಂಡೊಯ್ಯುವ ಪದ್ಧತಿ ಇಟ್ಟುಕೊಂಡಿರುವುದರಿಂದ ಕಾಡಂಚಿನ ಭಾಗದ ಜನರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ಸುಲಭವಾಗಿ ಒದಗಿ ಬರುತ್ತದೆ. ಈ ಕಾರಣದಿಂದ ಪೊನ್ನಾಚಿ ಗ್ರಾಮದಲ್ಲಿ ಅರಣ್ಯ ಇಲಾಖೆ ತೆರೆದಿರುವ ಬಿದಿರುವ ಪರಿಕರ ತಯಾರಿಕಾ ಕೇಂದ್ರಕ್ಕೆ ಬೇಡಿಕೆ ವ್ಯಕ್ತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಸಾಕಷ್ಟು ಮಂದಿಗೆ ಆದಾಯ ತಂದುಕೊಡುವ ಕೇಂದ್ರವಾಗಿಯೂ ಮುನ್ನೆಲೆಗೆ ಬರಲಿದೆ.

ಮರಳಿ ಕುಲ ಕಸುಬಿಗೆ ಆಹ್ವಾನ: ಮಹದೇಶ್ವರ ಬೆಟ್ಟ ಭಾಗದ ಹಲವು ಗ್ರಾಮಗಳಲ್ಲಿ ಅನೇಕ ಕುಟುಂಬಗಳು ಬಿದಿರು ಕಲೆಯನ್ನು ಪಾರಂಪರಿಕವಾಗಿ ಮುನ್ನಡೆಸಿಕೊಂಡು ಬರುತ್ತಿವೆ. ಕೆಲ ವರ್ಷಗಳಿಂದ ಬಿದಿರಿನ ಪೂರೈಕೆಯಲ್ಲಾದ ವ್ಯತ್ಯಯದಿಂದ ಅನೇಕರು ಬಿದಿರು ಕಲೆಯನ್ನು ನೇಪಥ್ಯಕ್ಕೆ ಸರಿಸಿ, ಜೀವನಾಂಶಕ್ಕೆ ಕೂಲಿ ಮಾಡುವುದಕ್ಕೆ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಿದಿರು ಪರಿಕರ ತಯಾರಿಕಾ ಕೇಂದ್ರ ಸ್ಥಾಪನೆ ಮಾಡಿರುವುದು ಕುಲ ಕಸುಬು, ಹಾಗೂ ಗುಡಿ ಕೈಗಾರಿಕೆ ಅವಲಂಬಿತರಾಗಿದ್ದ ಅನೇಕ ಕುಟುಂಬಗಳಿಗೆ ವರದಾನವಾಗಿ ಪರಿಣಮಿಸಲಿದೆ. ಅಲ್ಲದೆ, ಸಾಂಪ್ರದಾಯಿಕ ವಸ್ತುಗಳ ತಯಾರಿಕೆಗೆ ಮತ್ತೆ ಮುನ್ನುಡಿ ಬರೆದಂತಾಗಲಿದೆ.

ತಯಾರಿ ವಿಧಾನ: ಪೊನ್ನಾಚಿಯ 30 ಮಹಿಳೆಯರ ತಂಡ ಬಿದಿರು ಪರಿಕರ ತಯಾರಿಕೆಯಲ್ಲಿ ಆರಂಭಿಕ ಹಂತದ ಕಾಯಕದಲ್ಲಿ ತೊಡಗಿದ್ದಾರೆ. ತರಬೇತಿ ಪಡೆದಿದ್ದರೂ, ಇನ್ನಷ್ಟು ಚಾಕಚಕ್ಯತೆ ಬೇಕಾಗಿರುವುದರಿಂದ ಇದೀಗ ಮೊದಲ ಹಂತದಲ್ಲಿ ಯಾವ ಪರಿಕರ ತಯಾರಿಕೆ ಯಾವ ಅಳತೆ, ವಿನ್ಯಾಸದಲ್ಲಿ ಬಿದಿರು ಬೊಂಬನ್ನು ಕತ್ತರಿಸಬೇಕು. ಅದನ್ನು ಪಾಲಿಶ್ ಮಾಡುವ ಬಗೆ, ಜೋಡಣೆ ಮಾಡಲು ರಂಧ್ರ ಮಾಡುವ ವಿಧಾನ, ಮೇಲ್ಮೈ ಅಲಂಕರಿಸಲು ಬಳಸುವ ಬಿದಿರಿನ ಚಕ್ಕೆ ಸೀಳುವಿಕೆ ಸೇರಿದಂತೆ ಇನ್ನಿತರ ಕೆಲಸದಲ್ಲಿ ಮಹಿಳೆಯರು ತೊಡಗಿಸಿಕೊಂಡಿದ್ದಾರೆ. ಯಾರ ಸಹಾಯವಿಲ್ಲದೆ ಕಟ್ಟಿಂಗ್, ಪಾಲಿಶ್, ರಂಧ್ರ ಹಾಗೂ ಜೋಡಣೆ ಮಾಡುವುದನ್ನು ಕಲಿತ ಮೇಲೆ ಪರಿಕರ ತಯಾರಿಕಾ ಕಾರ್ಯ ಆರಂಭವಾಗಲಿದೆ. ಈ ಕೇಂದ್ರದಲ್ಲಿರುವ ಮಹಿಳೆಯರು ಆಸಕ್ತಿಯಿಂದ ಕೆಲಸದಲ್ಲಿ ಮಗ್ನರಾಗಿರುವುದರಿಂದ ಮುಂದಿನ ತಿಂಗಳಿಂದ ಬಿದಿರು ಪರಿಕರ ತಯಾರಿಕೆ ಆರಂಭವಾಗಲಿದೆ. ಈಗಾಗಲೇ ಕೆಲವರು ಮೊರ ತಯಾರಿಕೆ, ಕುಕ್ಕೆ ತಯಾರಿಕೆಯಲ್ಲಿ ಪರಿಣತಿ ಹೊಂದಿದ್ದು, ಕೆಲಸ ಆರಂಭಿಸಿದ್ದಾರೆ.

> "ಪೊನ್ನಾಚಿಯಲ್ಲಿ ರಾಷ್ಟ್ರೀಯ ಬಿದಿರು ಯೋಜನೆಯಡಿ ಬಿದಿರು ತಯಾರಿಕಾ ಕೇಂದ್ರ ಆರಂಭಿಸಲಾಗಿದೆ. ಮೊದಲ ಹಂತದಲ್ಲಿ 30 ಮಹಿಳೆಯರು ಬಿದಿರಿನ ಪರಿಕರ ತಯಾರಿಕೆಯಲ್ಲಿ ತೊಡಗಿದ್ದಾರೆ. ಆಸಕ್ತರು ಇನ್ನಷ್ಟು ಮಂದಿ ಬಂದರೂ ಅವರಿಗೂ ತರಬೇತಿ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಕೇಂದ್ರದಲ್ಲಿ ಯಂತ್ರೋಪಕರಣ ಅಳವಡಿಸಿ, ಅದರಿಂದಲೂ ಪರಿಕರ ತಯಾರಿಸುವ ಆಲೋಚನೆ ಹೊಂದಲಾಗಿದ್ದು, ಸ್ಥಳೀಯ ಮಹಿಳೆಯರಿಗೆ ಆದಾಯ ಮಾಡುವ ಕೇಂದ್ರವಾಗಲಿದೆ. ಈ ಕೇಂದ್ರದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಇಂಡಸ್ಟ್ರೀ ಫೌಂಡೇಷನ್ ನೆರವು ನೀಡುತ್ತಿದೆ. ಮುಂದಿನ ದಿನಗಳಲ್ಲಿ ಈ ಕೇಂದ್ರದಲ್ಲಿ ದೊಡ್ಡಮಟ್ಟದಲ್ಲಿ ಬಿದಿರಿನ ಪರಿಕರಗಳ ತಯಾರಿಕೆ ನಡೆಯಲಿದೆ.
> **-ಜಿ.ಸಂತೋಷ್‌ಕುಮಾರ್, ಡಿಸಿಎಫ್, ಮಲೆ ಮಹದೇಶ್ವರ ಬೆಟ್ಟ ವನ್ಯಧಾಮ**

ಆಧುನಿಕ ಸ್ಪರ್ಶ: ಪಾರಂಪರಿಕ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಆಧುನಿಕ ಸ್ಪರ್ಶ ನೀಡಲು ಅರಣ್ಯ ಇಲಾಖೆ ಮುಂದಾಗಿದೆ. ಅದಕ್ಕೆ ಬೆಂಗಳೂರಿನ ಇಂಡಸ್ಟ್ರೀ ಫೌಂಡೇಷನ್ ನೆರವು ನೀಡುತ್ತಿದೆ. ಪರಿಸರ ಅಭಿವೃದ್ಧಿ ಸಮಿತಿ (ಇಡಿಸಿ) ಸಹಯೋಗದಲ್ಲಿ ಈ ಕೇಂದ್ರ ಕಾರ್ಯಾರಂಭ ಮಾಡಿದ್ದು, ಮಹಿಳೆಯರು ತಯಾರಿಸುವ ಬಿದಿರಿನ ವಸ್ತುಗಳ ಅಲಂಕಾರಿಕಾ ವಸ್ತುಗಳಾಗಿಸುವುದಕ್ಕೂ ಉದ್ದೇಶಿಸಲಾಗಿದೆ. ಒಂದೆಡೆ ಬಿದಿರಿನ ಸಾಂಪ್ರದಾಯಿಕ ವಸ್ತುಗಳ ಬಳಕೆ ಹಾಗೂ ತಯಾರಿಕೆಯನ್ನು ಉತ್ತೇಜಿಸುವ ಕಾರ್ಯದೊಂದಿಗೆ ಮಾರುಕಟ್ಟೆಯಲ್ಲಿ ಗ್ರಾಹಕರನ್ನು ಸೆಳೆಯಲು ಆಧುನಿಕ ಸ್ಪರ್ಶ ನೀಡಲು ಚಿಂತಿಸಲಾಗಿದೆ. ಇದರಿಂದ ಪೆನ್ ಸ್ಟಾಂಡ್, ಬೀಸಣಿಗೆ, ಬಿದಿರು ಖುರ್ಚಿ, ಟೀಪಾಯಿ ಸೇರಿದಂತೆ ಇನ್ನಿತರು ವಸ್ತುಗಳನ್ನು ತಯಾರಿಸಲು ಪ್ರೇರಣೆ ನೀಡಲು ಉದ್ದೇಶಿಸಲಾಗಿದೆ.

ಗೌರವ ಧನ: ಪರಿಕರ ತಯಾರಿಕೆ ಕಲಿಯುವವರೆಗೂ ಮಹಿಳೆಯರಿಗೆ ಗೌರವ ಧನ ನೀಡಲಾಗುತ್ತದೆ. ನಿರ್ದಿಷ್ಟ ಸಂಖ್ಯೆಯ ಮಹಿಳೆಯರನ್ನು ಒಂದು ತಂಡವಾಗಿ ರಚಿಸಿ, ಆ ತಂಡಕ್ಕೆ ಒಬ್ಬರು ಮೇಲ್ವಿಚಾರಕರನ್ನು ನಿಯೋಜಿಸಲಾಗುತ್ತದೆ. ಪ್ರತಿ ಯೊಬ್ಬರ ಹಾಜರಿ ಸಂಗ್ರಹಿಸಿ, ಮಾಸಾಂತ್ಯಕ್ಕೆ ಗೌರವ ಧನ ನೀಡಲಾಗುತ್ತದೆ.

ಆದಾಯ ಹಂಚಿಕೆ: ಮಹಿಳೆಯರು ತಯಾರಿಸುವ ವಸ್ತುಗಳ ಪಟ್ಟಿ ಮಾಡಲಾಗುತ್ತದೆ. ಯಾರ್‍ಯಾರು ಎಷ್ಟೆಷ್ಟು ಪರಿಕರ ತಯಾರಿಸಿದ್ದಾರೆ. ಅವುಗಳು ಮಾರುಕಟ್ಟೆಯಲ್ಲಿ ಮಾರಾಟವಾಗುವ ದರ ಸೇರಿದಂತೆ ಎಲ್ಲವನ್ನೂ ನಮೂದು ಮಾಡಿಕೊಳ್ಳಲಾಗುತ್ತದೆ. ಆ ಬಳಿಕ ವಸ್ತು ತಯಾರಿಸಿದ ಮಹಿಳೆಯರಿಗೆ ಹಣ ನೀಡಲಾಗುತ್ತದೆ. ಮಾರಾಟವಾದ ಮೊತ್ತದಲ್ಲಿ ಇಡಿಸಿ ಹಾಗೂ ಇಂಡಸ್ಟ್ರೀ ಫೌಂಡೇಷನ್‌ಗೆ ಇಂತಿಷ್ಟು ಮೊತ್ತ ನೀಡಬೇಕಾಗುತ್ತದೆ. ಆ ಹಣವನ್ನು ಕಡಿತಗೊಳಿಸಿ ಮಹಿಳೆಯರಿಗೆ ಹಣ ನೀಡುವ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ.

ಬಿದಿರು ಸರಬರಾಜು: ಈ ಹಿಂದೆ ಅರಣ್ಯ ಪ್ರದೇಶದಲ್ಲಿ ಬಿದಿರನ್ನು ತಂದು ಪರಿಕರ ತಯಾರಿಸಿ ಮಾರಾಟ ಮಾಡಲಾಗುತ್ತಿತ್ತು. ಆದರೆ, ಅರಣ್ಯ ಕಾಯ್ದೆ ಬಿಗಿಯಾಗಿ ಜಾರಿಗೊಂಡ ನಂತರ ಬಿದಿರುವ ಲಭ್ಯತೆ ಕ್ಷೀಣವಾಗಿ ಅನೇಕರು ಕಸುಬು ತೊರೆದಿದ್ದರು. ಇದೀಗ ಪರಿಕರಗಳ ತಯಾರಿಕೆಗಾಗಿ ಬಿದಿರು ಬೆಳೆದು ಮಾರಾಟ ಮಾಡುವ ವ್ಯವಸ್ಥೆ ಇರುವುದರಿಂದ ಈ ಕೇಂದ್ರಗಳಿಗೆ ಅನುಮತಿ ಪಡೆದು ಬಿದಿರು ಬೆಳೆದಿರುವವರಿಂದ ಬಿದಿರು ಖರೀದಿ ಪೂರೈಸಲಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಅಕ್ರಮಗಳು ನಡೆದಿವೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ನೀಟ್ ಪರೀಕ್ಷೆ ಅಕ್ರಮದ ಬಗ್ಗೆ ಧ್ವನಿ ಎತ್ತಿ ಕೇಂದ್ರ ಸರ್ಕಾರದಕ್ಕೆ ಪತ್ರ ಬರೆದಿದ್ದರು. ಕೆಲ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿರುವುದು ಹಾಗೂ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ, ನೀಟ್ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಕೆಲವರು ಸುಪ್ರೀ ಕೋರ್ಟ್ ಮೊರೆ ಹೋಗಿದ್ದರು. ಸುಪ್ರೀಂಕೋರ್ಟ್ ಶಿಫಾರಸ್ಸಿನ ಮೇರೆಗೆ ಕೃಪಾಂಕ ನೀಡಲಾಗಿದ್ದ 1563 ವಿದ್ಯಾರ್ಥಿಗಳಿಗೆ ಕೃಪಾಂಕ ಕಡತಮಾಡಿ ದೊರೆಯುವ ಅಂಕ ಒಪ್ಪಿಕೊಳ್ಳುವಂತೆ ಇಲ್ಲದಿದ್ದರೆ, ಮರುಪರೀಕ್ಷೆ ಎದುರಿಸುವಂತೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸೂಚಿಸಿದ್ದಲ್ಲದೇ, ಮರುಪರೀಕ್ಷೆಗೂ ದಿನಾಂಕ ನಿಗದಿಪಡಿಸಿ ಆದೇಶ ಹೊರಡಿಸಿತ್ತು.

ದರ್ಶನ್ ಕರೆತರುವ ಸಾಧ್ಯತೆ

ವಶಕ್ಕೆ ಪಡೆದು ಬೆಂಗಳೂರಿಗೆ ಕರೆದೊಯ್ದಿದ್ದರು. ಅಂದು ಮಧ್ಯಾಹ್ನ ದರ್ಶನ್‌ನನ್ನು ಅಧಿಕೃತವಾಗಿ ಬಂಧಿಸಲಾಗಿತ್ತು. ಜೂನ್ 12ರಂದು ರ್‍ಯಾಡಿಸನ್ ಬ್ಲೂ ಬಳಿ ದರ್ಶನ್‌ನನ್ನು ವಶಕ್ಕೆ ಪಡೆದ ಸ್ಥಳ ಮಹಜರು ನಡೆಸುವ ಅಗತ್ಯತೆ ಇರುವ ಕಾರಣ ಆತನನ್ನು ನಾಳೆ ಪೊಲೀಸರು ಮೈಸೂರಿಗೆ ಕರೆತರಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ದರ್ಶನ್‌ನನ್ನು ವಶಕ್ಕೆ ಪಡೆದ ಸ್ಥಳ ಮಾತ್ರವಲ್ಲದೇ, ದರ್ಶನ್ ಮೈಸೂರಿನಲ್ಲಿದ್ದಾಗ ಆರೋಪಿಗಳೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದರೆ ಆ ಸ್ಥಳದ ಮಹಜರು ಕೂಡ ನಡೆಸಲಾಗುತ್ತದೆ ಎಂದು ಹೇಳಲಾಗಿದೆ.

ಇಬ್ಬರು ವಿದ್ಯಾರ್ಥಿಗಳ ಸಾವು

ಜಶ್ವಂತ್ ಹಾಗೂ ಅವಿನಾಶ್ ರಜೆಯಿದ್ದ ಕಾರಣ ಭಾನುವಾರ ಬೆಳಗ್ಗೆ ಮೂರು ಸೈಕಲ್‌ಗಳಲ್ಲಿ ಸಾಹುಕಾರಹುಂಡಿ ಕೆರೆಗೆ ಹೋಗಿ ಈಜಿದ್ದಾರೆ. ಮಧ್ಯಾಹ್ನ ಮನೆಗೆ ವಾಪಸ್ಸಾಗಿ ಊಟ ಮಾಡಿಕೊಂಡು ಮತ್ತೆ ಸಂಜೆ 4 ಗಂಟೆ ಸಮಯದಲ್ಲಿ ಮತ್ತೆ ಕೆರೆಯಲ್ಲಿ ಈಜಲು ಹೋಗಿದ್ದಾರೆ. ಈ ವೇಳೆ ವರುಣ್ ಹಾಗೂ ಜಶ್ವಂತ್ ನೀರಿನಲ್ಲಿ ಮುಳುಗಿದ್ದು, ಸ್ವಲ್ಪ ದೂರದಲ್ಲಿದ್ದ ಅವಿನಾಶ್ ಪಾರಾಗಿದ್ದಾನೆ. ಸ್ನೇಹಿತರು ನೀರಿನಲ್ಲಿ ಮುಳುಗುತ್ತಿರುವುದನ್ನು ಕಂಡು ಆತಂಕಗೊಂಡ ಅವಿನಾಶ್, ದಡಕ್ಕೆ ಬಂದು ಸೈಕಲ್‌ನಲ್ಲಿ ಹೋಗಿ ಸ್ವಲ್ಪ ದೂರದಲ್ಲಿದ್ದ ಸ್ಥಳೀಯರಿಗೆ ವಿಷಯ ತಿಳಿಸಿದ್ದಾರೆ. ಅವರು ಕೆರೆ ಬಳಿ ಓಡಿಬರುವಷ್ಟರಲ್ಲಿ ಇಬ್ಬರು ಸ್ನೇಹಿತರು ನೀರಿನಲ್ಲಿ ಮುಳುಗಿದ್ದರು. ವಿಷಯ ತಿಳಿದ ಕೂಡಲೇ ಇಲವಾಲ ಠಾಣೆ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ ನಾಯಕ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಅಗ್ನಿಶಾಮಕ ದಳದವರಿಗೆ ಮಾಹಿತಿ ನೀಡಿದ್ದಾರೆ. ವೃತ್ತ ನಿರೀಕ್ಷಕ ಶಿವನಂಜಶೆಟ್ಟಿ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಪೊಲೀಸರು ಹಾಗೂ ಅಗ್ನಿಶಾಮಕ ದಳದವರು ಕಾರ್ಯಾಚರಣೆ ನಡೆಸಿದರಾದರೂ ಮೃತದೇಹಗಳು ಪತ್ತೆಯಾಗಲಿಲ್ಲ. ಈಜು ಪರಿಣತರಾದ ಇಲವಾಲದ ದೊಡ್ಡಸ್ವಾಮಿನಾಯಕ ಸಂಜೆ 7 ಗಂಟೆ ವೇಳೆಗೆ ಮೃತದೇಹಗಳನ್ನು ಹೊರತೆಗೆದರು. ಮಕ್ಕಳನ್ನು ಕಳೆದುಕೊಂಡ ಕುಟುಂಬದವರ ರೋದನ ಮುಗಿಲು ಮುಟ್ಟಿತ್ತು. ಈ ಹುಡುಗರು ಸಾಹುಕಾರಹುಂಡಿ ಕೆರೆಗೆ ಇದೇ ಮೊದಲು ಬಂದಿದ್ದಾಗಿ ಸ್ಥಳೀಯರು ತಿಳಿಸಿದರು. ಮೃತದೇಹಗಳನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿಡಲಾಗಿದ್ದು, ಸೋಮವಾರ ಬೆಳಗ್ಗೆ ವೈದ್ಯಕೀಯ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಲಾಗುವುದು ಎಂದು ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ ನಾಯಕ್ ತಿಳಿಸಿದರು.

ಬಂಡವಾಳ ಹೂಡಿಕೆ

ಆಗುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಫ್‌ಕೆಸಿಸಿಐ ಪದಾಧಿಕಾರಿಗಳ ಕಾರ್ಯ ಅಭಿನಂದನೆಗೆ ಅರ್ಹವಾಗಿದೆ. ಶಕ್ತಿ ಯೋಜನೆಯ ಅನುಷ್ಠಾನದ ನಂತರ ರಾಜ್ಯದಲ್ಲಿ ಎಲ್ಲಾ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಶೇ.50 ರಷ್ಟು ಹೆಚ್ಚಾಗಿದೆ. ಈ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು ಕೇವಲ ಸರಕಾರದಿಂದ ಸಾಧ್ಯವಿಲ್ಲ. ಈ ಕ್ಷೇತ್ರಗಳಲ್ಲಿ ಹೂಡಿಕೆಗೆ ವಿಫುಲ ಅವಕಾಶಗಳಿವೆ. ಇಲ್ಲಿನ ಹೂಡಿಕೆಯಿಂದ ಬಹಳಷ್ಟು ಉಪಯೋಗವನ್ನು ಉದ್ದಿಮೆದಾರರು ಪಡೆದುಕೊಳ್ಳಬಹುದಾಗಿದೆ. ಪ್ರವಾಸೋದ್ಯಮ ಎಂದರೆ ಕೇವಲ ಲಕ್ಸುರಿ ಪ್ರವಾಸೋದ್ಯಮ ಅಲ್ಲ, ಸಾಮಾನ್ಯ ಜನರ ಪ್ರವಾಸೋದ್ಯಮಕ್ಕೂ ಸರಕಾರ ಆದ್ಯತೆ ನೀಡುತ್ತದೆ. ದಕ್ಷಿಣ ಭಾರತ ಸಾಂಸ್ಕೃತಿಕ ಪ್ರವಾಸೋದ್ಯಮದ ಪ್ರಮುಖ ತಾಣವಾಗಿದೆ. ಈ ಉತ್ಸವದ ಮೂಲಕ ದಕ್ಷಿಣ ಭಾರತ ರಾಜ್ಯಗಳ ಐತಿಹಾಸಿಕ, ಪಾರಂಪರಿಕ, ಸ್ಮಾರಕ ಸಂಪನ್ಮೂಲಗಳಲ್ಲಿನ ಅವಕಾಶಗಳನ್ನ ತೋರಿಸುವ ವೇದಿಕೆಯನ್ನು ನೀಡಲಾಗಿದೆ. ಎಲ್ಲರೂ ಜೊತೆಗೂಡಿ ವಿಶ್ವ ಪ್ರವಾಸೋದ್ಯಮ ಭೂಪಟದಲ್ಲಿ ಉತ್ತಮ ಸ್ಥಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗೋಣ ಎಂದು ಕರೆ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, ದಕ್ಷಿಣ ಭಾರತ ರಾಜ್ಯಗಳನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವ ಪ್ರಯತ್ನಕ್ಕೆ ಯಶಸ್ಸು ದೊರೆತಿದೆ. ಕೈಗಾರಿಕಾ ಉತ್ಪಾದನೆ, ಕೃಷಿಯ ನಂತರ ಹೆಚ್ಚಿನ ಉದ್ಯೋಗಾವಕಾಶಗಳನ್ನು ಮತ್ತು ಹೂಡಿಕೆಯ ಅವಕಾಶ ಇರುವುದು ಪ್ರವಾಸೋದ್ಯಮ ಕ್ಷೇತ್ರದಲ್ಲಿ. ಈ ಉತ್ಸವದ ಮೂಲಕ ಎಫ್‌ಕೆಸಿಸಿಐ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡುವಂತೆ ಉದ್ದಿಮೆದಾರರನ್ನು ಪ್ರೋತ್ಸಾಹಿಸಿದೆ. ಇದರಿಂದಾಗಿ ಸುಮಾರು 4200ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲೂ ಎಫ್‌ಕೆಸಿಸಿಐ ವತಿಯಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗೆ ಪ್ರೋತ್ಸಾಹ ನೀಡಲು ಆದ್ಯತೆ ನೀಡಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಬಂಡವಾಳ ಹೂಡಿಕೆಗೆ ಮುಂದಾದ ಕೆಲವು ಉದ್ದಿಮೆದಾರರಿಗೆ ಒಡಂಬಡಿಕೆಯ ಪತ್ರಗಳನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹಾಗೂ ಪ್ರವಾಸೋದ್ಯಮ ಸಚಿವ ಡಾ. ಎಚ್.ಕೆ ಪಾಟೀಲ ವಿತರಿಸಿದರು.ಈ ಸಂಧರ್ಭದಲ್ಲಿ ಪ್ರವಾಸೋದ್ಯಮ ಇಲಾಖೆ ನಿರ್ದೇಶಕರಾದ ಡಾ.ವಿ. ರಾಮ್ ಪ್ರಸಾತ್ ಮನೋಹರ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಯೋಜನೆ ರೂಪಿಸಿ

ಅಧಿಕಾರಿಗಳಿಗೆ ಕೇಂದ್ರದ ಉಕ್ಕು, ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೂಚನೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯದಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಮಂಡ್ಯ,ಜೂ.16– ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದ ಹಲವಾರು ಕಾರ್ಯಕ್ರಮಗಳಿವೆ. ಅಧಿಕಾರಿಗಳು ಚಿಂತನೆ ನಡೆಸಿ ಹೊಸ ಯೋಜನೆಗಳ ರೂಪಿಸಿ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಅನುದಾನ ಸಮರ್ಪಕ ಬಳಕೆಯಾಗಬೇಕು. ಇಲಾಖೆಗಳಿಗೆ ಸರ್ಕಾರದಿಂದ ಬಿಡುಗಡೆಯಾಗುವ ಹಣ ಸಮರ್ಪಕವಾಗಿ ಹಾಗೂ ಪಾರದರ್ಶಕವಾಗಿ ಅಧಿಕಾರಿಗಳು ಬಳಕೆ ಮಾಡಬೇಕು. ಅನುದಾನ ಬಿಡುಗಡೆಯಾಗಿ ಬಳಕೆಯಾಗದಿರುವ ಪ್ರಕರಣಗಳನ್ನು ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ನೋಡಿದ್ದೇನೆ. ಸಮರ್ಪಕ ಅನುದಾನದ ಬಳಕೆ ಕೂಡ ಜಿಲ್ಲೆಯ ಅಭಿವೃದ್ಧಿಯ ಸಂಕೇತ ಎಂದರು.

ಸಾರ್ವಜನಿಕರಿಗೆ ಸ್ಪಂದಿಸಿ ಅಭಿವೃದ್ಧಿಗೆ ಸಹಕರಿಸಿ ಮಂಡ್ಯ ಜಿಲ್ಲೆಯಲ್ಲಿ ರೈತರ ಸಂಖ್ಯೆ ಹೆಚ್ಚು, ಅವರ ಕಷ್ಟಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸಿ. ಜಿಲ್ಲೆಯಲ್ಲಿ ಹಲವಾರು ಸಂಪನ್ಮೂಲಗಳಿವೆ. ಆದರೂ ಬೇರೆ ಜಿಲ್ಲೆಗೆ ಹೋಲಿಸಿದರೆ ಮಂಡ್ಯ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳು ನಡೆಯಬೇಕಿದೆ. ಯಾವುದೇ ಒತ್ತಡಗಳಿಗೆ ಮಣಿಯಬೇಡಿ. ಕಾನೂನುಬದ್ಧವಾಗಿ ಕೆಲಸ ನಿರ್ವಹಿಸಿ ಎಂದ ಅವರು, ಸಿ.ಎಸ್.ಆರ್ ಅನುದಾನದ ಮೂಲಕ ಅಧಿಕಾರಿಗಳು ಚುರುಕಾಗಿ ಹೊಸ ಯೋಜನೆಗಳ ಮೂಲಕ ಮಾದರಿ ಶಾಲೆ, ಕಾಲೇಜು, ಆಸ್ಪತ್ರೆ, ಕ್ರೀಡಾಂಗಣ ನಿರ್ಮಾಣ ಕುರಿತು ಯೋಜನೆ ಸಿದ್ಧಪಡಿಸಿ, ಕೇಂದ್ರ ಸರ್ಕಾರ ಅಥವಾ ಸಿ.ಎಸ್.ಆರ್ ಅನುದಾನದ ಮೂಲಕ ಅನುಷ್ಠಾನಗೊಳಿಸೋಣ. ಒಟ್ಟಾರೆ ಜಿಲ್ಲೆಯ ಅಭಿವೃದ್ಧಿ ನನ್ನ ಗುರಿ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಬೆಳೆಗಳು, ಕೆ.ಆರ್.ಎಸ್ ಅಣೆಕಟ್ಟಿನಲ್ಲಿ ಇರುವ ನೀರಿನ ಮಟ್ಟ, ನೀರಾವರಿ ಸಲಹಾ ಸಮಿತಿ ಸಭೆ ನಡೆಸಲು ಅನುಸರಿಸುವ ಕ್ರಮ, ಜಿಲ್ಲೆಯ ಕೈಗಾರಿಕೆಗಳ ಮಾಹಿತಿಯನ್ನು ಸಚಿವರಿಗೆ ನೀಡಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅಪಘಾತಗಳನ್ನು ತಡೆಗಟ್ಟಲು ಯೋಜನೆಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಇದಲ್ಲದೇ ಮನ್‌ಮುಲ್ ನಿಂದ ನ್ಯಾಷನಲ್ ಪ್ರೋಗ್ರಾಮ್ ಫಾರ್ ಡೈರಿ ಡೆವಲಪ್‌ಮೆಂಟ್ ಯೋಜನೆಯಡಿ ಮೂರು ಯೋಜನೆಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಕೇಂದ್ರ ಸಚಿವರ ಗಮನಕ್ಕೆ ತಂದರು.

ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸಿಫ್ ಮಾತನಾಡಿ, ನರೇಗಾ, ಸ್ವಚ್ಛ ಭಾರತ್ ಮಿಷನ್, ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಹಾಗೂ ಪ್ರಧಾನಮಂತ್ರಿ ವಾಪಸ್ ಯೋಜನೆಯಲ್ಲಿ ಜಿಲ್ಲೆಯ ಪ್ರಗತಿಯ ಬಗ್ಗೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು, ಈ ಬಾರಿ ಪ್ರಧಾನ ಮಂತ್ರಿ ಆವಸ್ ಯೋಜನೆಯಡಿ ಹೆಚ್ಚಿನ ಗುರಿ ನಿಗದಿಯಾಗಲಿದೆ. ಇದಕ್ಕೆ ಇಂದಿನಿಂದಲೇ ಸಿದ್ಧತೆ ಪ್ರಾರಂಭಿಸಿ ಎಂದರು.

ಸಭೆಯಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಹೆಚ್.ಟಿ.ಮಂಜು, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಎಸ್ಪಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜ್, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಸಂಜೀವಪ್ಪ, ನಿವೃತ್ತ ಐಎಎಸ್ ಅಧಿಕಾರಿ ಕೃಷ್ಣಯ್ಯ ಸೇರಿದಂತೆ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು.

ಆದಿಚುಂಚನಗಿರಿಗೆ ಕುಮಾರಸ್ವಾಮಿ ಭೇಟಿ



ಆದಿಚುಂಚನಗಿರಿ: ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿರುವ ಶ್ರೀ ಕ್ಷೇತ್ರ ಆದಿಚುಂಚನಗಿರಿಗೆ ಭಾನುವಾರ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ, ಶ್ರೀಮಠದ ಪೀಠಾಧಿಪತಿ ಡಾ.ನಿರ್ಮಲಾನಂದನಾಥಶ್ರೀಗಳೊಂದಿಗೆ ಕಾಲಭೈರವೇಶ್ವರನ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಹೆಚ್ಡಿಕೆಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ದೇವರ ದರ್ಶನದ ಬಳಿಕ ಚುಂಚಶ್ರೀಗಳ ಆಶೀರ್ವಾದ ಪಡೆದು ಕೆಲ ನಿಮಿಷಗಳ ಕಾಲ ನಿರ್ಮಲಾನಂದಶ್ರೀಗಳೊಂದಿಗೆ ಮಾತುಕತೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್ಡಿಕೆ, ರಾಜ್ಯ ಸರ್ಕಾರದ ಅಗತ್ಯ ಬೆಲೆ ಏರಿಕೆ ವಿರುದ್ಧ ಜನ ದಂಗೆ ಏಳಬೇಕು. ಗ್ಯಾರಂಟಿ ಮುಂದುವರೆಸಲು ಬೆಲೆ ಏರಿಕೆ ಮಾಡಿರುವುದಾಗಿ ಸ್ವತ: ರಾಜ್ಯ ಸರ್ಕಾರದ ಸಚಿವರೇ ಒಪ್ಪಿಕೊಂಡಿದ್ದಾರೆ. ಜನರಿಂದಲೇ ವಸೂಲಿಗೆ ನಿಂತಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕೆಂದು ಕಿಡಿಕಾರಿದರು.

ಕಾಲಭೈರವೇಶ್ವರನ ದರ್ಶನ ಮಾಡಿ ಆಶೀರ್ವಾದ ಪಡೆದಿದ್ದು, ರಾಜ್ಯದ ಸಮಸ್ಯೆಗಳು ಬಗೆಹರಿಯುವಂತೆ ಕೋರಿಕೊಂಡಿದ್ದೇನೆ. ಒಕ್ಕಲಿಗ ಸಮಾಜ ಹಾಗೂ ರಾಜ್ಯಕ್ಕೆ ಗೌರವ ತರುವಂತೆ ಕೆಲಸ ಮಾಡಲು ಶಕ್ತಿ ಕೊಡುವಂತೆ ಪ್ರಾರ್ಥಿಸಿದ್ದು, ರಾಜ್ಯಕ್ಕೆ ಉತ್ತಮ ಕೊಡುಗೆ ನೀಡುವ ಅವಕಾಶವಿದ್ದು, ಅದನ್ನು ಸದ್ಬಳಕೆ ಮಾಡಿಕೊಳ್ಳುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಸಿ.ಎಸ್.ಪುಟ್ಟರಾಜು, ಕೆ.ಸುರೇಶ್‌ಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ನೆಲ್ಲಿಗೆರೆ ಬಾಲು ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಕರಗಂ ನಾರಾಯಣ ಅಯ್ಯಂಗಾರ್ ನಿಧನ




ಮೇಲುಕೋಟೆ: ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ಪ್ರಥಮ ಸ್ಥಾನೀಕರಾದ ಕರಗಂ ನಾರಾಯಣ ಅಯ್ಯಂಗಾರ್ (82) ಶನಿವಾರ ದೈವಾಧೀನರಾಗಿದ್ದು ಭಾನುವಾರ ಮೇಲುಕೋಟೆಯಲ್ಲಿ ಶ್ರೀವೈಷ್ಣವ ಸಂಪ್ರದಾಯ ಹಾಗೂ ಚೆಲುವನಾರಾಯಣನ ಮಾಲೆ ಮರ್ಯಾದೆಯ ಗೌರವಾರ್ಪಣೆಯೊಂದಿಗೆ ಅಂತ್ಯಕ್ರಿಯೆ ನೆರವೇರಿತು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಕರಗಂ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಚೆಲುವನಾರಾಯಣ ಸ್ವಾಮಿ ದೇವಾಲಯದಲ್ಲಿ ಪ್ರಥಮ ಸ್ಥಾನೀಕರಾಗಿ, ಪಾರುಪತ್ತೇಗಾರರಾಗಿ ಸುದೀರ್ಘವಾಗಿ ಕರ್ತವ್ಯ ನಿರ್ವಹಿಸಿದ್ದರು. ರಾಜ್ಯ ಪ್ರಶಸ್ತಿಗೆ ಭಾಜನರಾದ ನಿವೃತ್ತ ಮುಖ್ಯ ಶಿಕ್ಷಕರೂ ಆಗಿದ್ದ ಕರಗಂ ನಾರಾಯಣ ಅಯ್ಯಂಗಾರ್ ಜಕ್ಕನಹಳ್ಳಿ, ಮೇಲುಕೋಟೆ, ಚಿಟ್ಟನಹಳ್ಳಿ ಸೇರಿದಂತೆ ಹಲವು ಗ್ರಾಮಗಳ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಿ ಜನಾನುರಾಗಿಯಾಗಿದ್ದರು. ಮಂಡ್ಯ ಜಿಲ್ಲಾ ಸಾಕ್ಷರತೆ ಕಾರ್ಯಾನುಷ್ಠಾನದಲ್ಲಿ ತೊಡಗಿಸಿಕೊಂಡಿದ್ದ ಕರಗಂ ಅವರಿಗೆ ಜಿಲ್ಲಾಡಳಿತ ಉತ್ತಮ ಸಂಪನ್ಮೂಲವ್ಯಕ್ತಿ ಎಂದು ಗುರುತಿಸಿ ಗೌರವಿಸಿತ್ತು.

ಮೇಲುಕೋಟೆ ದೇವಾಲಯದ ಕೈಂಕರ್ಯಗಳು ಮತ್ತು ಶೈಕ್ಷಣಿಕ ಸೇವೆಗಾಗಿಯೇ ಜೀವನವನ್ನು ಮುಡಿಪಾಗಿಟ್ಟು ಚೆಲುವನಾರಾಯಣನ ಪಾದ ಸೇರಿದ್ದಾರೆ. ಚೆಲುವನಾರಾಯಣ ಸ್ವಾಮಿ ರಾಮಾನುಜಾಚಾರ್ಯರ ಸಾಂಪ್ರದಾಯಿಕ ಮಾಲೆ ಮರ್ಯಾದೆಯನ್ನು ಸಮರ್ಪಿಸಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಶ್ರೀರಂಗಪಟ್ಟಣದ ರಂಗನಾಥ ರಾಮನಗರದ ಶ್ರೀರಾಮ ಸನ್ನಿಧಿ, ಮಳೂರು ಅಪ್ರಮೇಯ, ಮೇಲುಕೋಟೆ ಯೋಗನರಸಿಂಹ ಸ್ವಾಮಿ ಬೆಟ್ಟದಿಂದಲೂ ಮರ್ಯಾದೆ ಅರ್ಪಿಸಲಾಯಿತು. ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಹೆಚ್.ಮಂಜುನಾಥ್ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿ ಯತಿರಾಜ ಸಂಪತ್ಕುಮಾರನ್, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ಗ್ರಾ.ಪಂ ಅಧ್ಯಕ್ಷ ಸೋಮಶೇಖರ್ ಉಪಾಧ್ಯಕ್ಷ ಎನ್ ತಿರುಮಲೈ ಸೇರಿದಂತೆ ಹಲವು ಗಣ್ಯರು ಮೃತರಿಗೆ ಅಂತಿಮ ಗೌರವ ಅರ್ಪಿಸಿದರು. ಮೃತರಿಗೆ ಇಬ್ಬರು ಪುತ್ರರು, ಓರ್ವ ಸಹೋದರ, ಓರ್ವ ಸಹೋದರಿ ಇದ್ದಾರೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ



ಮಂಡ್ಯ,ಜೂ.16– ಕೋಲಕಾರನದೊಡ್ಡಿ, ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಜೂ.18ರಂದು ಬೆಳಗ್ಗೆ 9ರಿಂದ ಸಂಜೆ 5ಗಂಟೆ ವರೆಗೆ ತಗ್ಗಹಳ್ಳಿ, ಕೋಲಕಾರನದೊಡ್ಡಿ, ಹೆಮ್ಮಿಗೆ, ಸೂನಗನಹಳ್ಳಿ, ಪುರ, ಲೋಕಸರ, ಹಲುವಾಡಿ, ಕಮ್ನಾಯಕನಹಳ್ಳಿ, ಟಿ.ಮಲ್ಲಿಗೆರೆ, ಕಬ್ಬನಹಳ್ಳಿ, ತಿಮ್ಮನ ಹೊಸೂರು, ಬಿ.ಹೊಸೂರು, ಗೋಪನಹಳ್ಳಿ ಯಡಗನಹಳ್ಳಿ, ಮಾದರಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ನೌಕಾಪಡೆಯ ಲೆಫ್ಟಿನೆಂಟ್ ಬಿ.ಎಂ.ಸಾಗರ್‌ಗೆ ಹುಟ್ಟೂರಲ್ಲಿ ಅಭಿನಂದನೆ

ಕೆ.ಆರ್.ಪೇಟೆ, ಜೂ.16– ಭಾರತೀಯ ಸೇನೆಯಲ್ಲಿ ನೌಕಾಪಡೆಯ ಲೆಫ್ಟಿನೆಂಟ್ ಅಧಿಕಾರಿಯಾಗಿ ನೇಮಕಗೊಂಡ ಬೂಕಹಳ್ಳಿ ಗ್ರಾಮದ ಬಿ.ಎಂ. ಸಾಗರ್ ಅವರನ್ನು ಹುಟ್ಟೂರು ಬೂಕಹಳ್ಳಿ ಗ್ರಾಮಸ್ಥರು ಅದ್ದೂರಿಯಾಗಿ ಸನ್ಮಾನಿಸಿ ಗೌರವಿಸಿದರು.

ಕೆಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿ ಬೂಕಹಳ್ಳಿ ಗ್ರಾಮದ ಗಂಜಿಗೆರೆ ಗ್ರಾ.ಪಂ. ಮಾಜಿ ಪ್ರಧಾನರು ಹಾಗೂ ಪಿ.ಎಲ್.ಡಿ ಬ್ಯಾಂಕ್ ಮಾಜಿ ನಿರ್ದೇಶಕರಾದ ಚಂದ್ರಪ್ಪ ಅವರ ಪುತ್ರ, ಪ್ರೇಮ ಎಲೆಕ್ಟ್ರಿಕಲ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬೂಕಹಳ್ಳಿ ಮಂಜು ಹಾಗೂ ಚಂದ್ರಕಲಾ ಮಂಜು ದಂಪತಿಗಳ ಸುಪುತ್ರರಾದ ಬಿ.ಎಂ.ಸಾಗರ್ ಅವರು ನೌಕಾಪಡೆಯ ಸಬ್ ಲೆಫ್ಟಿನೆಂಟ್ ಅಧಿಕಾರಿಯಾಗಿ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಬಿ.ಎಂ. ಸಾಗರ್ ಅವರು ಭವಿಷ್ಯದಲ್ಲಿ ಇನ್ನೂ ಉನ್ನತ ಮಟ್ಟದ ಅಧಿಕಾರಿಯಾಗಿ ದೇಶ ಸೇವೆ ಮಾಡಲು ಭಗವಂತನ ಕೃಪೆ ಇರಲಿ ಎಂದು ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಜೀರ್ ಪ್ರಾರ್ಥಿಸಿದರು.

ಬೂಕಹಳ್ಳಿ ಗ್ರಾಮದ ಮುಖಂಡರಾದ ಸ್ವಾಮಿ ಮಾತನಾಡಿ, ಸಾಧನೆ ಎನ್ನುವುದು ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ ಎನ್ನುವಂತೆ, ದೇಶ ಸೇವೆಗೆ ಸೇರಿರುವ ನಮ್ಮ ಗ್ರಾಮದ ಯುವಕ ಬಿ.ಎಂ.ಸಾಗರ್ ಅವರಿಂದ ನಮ್ಮ ಗ್ರಾಮಕ್ಕೆ ಒಳ್ಳೆಯ ಹೆಸರು ಬಂದಿದೆ. ತಾಲೂಕಿನ ಯುವಕರಿಗೆ ಸ್ಫೂರ್ತಿ ನೀಡಿದೆ. ಇಂತಹ ಮಗನಿಗೆ ಜನ್ಮ ಕೊಟ್ಟ ನಮ್ಮ ಗ್ರಾಮ ಹಾಗೂ ಬೂಕಹಳ್ಳಿ ಮಂಜು ಹಾಗೂ ಚಂದ್ರಕಲಾ ಮಂಜು ದಂಪತಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ನಮಗೆ ದೇಶ ಏನು ಕೊಟ್ಟಿತು ಎನ್ನುವುದರ ಬದಲು ದೇಶಕ್ಕೆ ನಮ್ಮ ಕೊಡುಗೆ ಏನು ಎಂಬ ಪ್ರಶ್ನೆ ಹಾಕಿಕೊಂಡು ದೇಶ ಸೇವೆಗೆ ಮುಂದೆ ಬರಬೇಕು ಎಂದು ಯುವಕರಿಗೆ ತಿಳುವಳಿಕೆ ಮೂಡಿಸುವಂತೆ ತಿಳಿಸಿದರು.

ಸಮಾರಂಭದ ಕೇಂದ್ರಬಿಂದು ನೌಕಾಪಡೆಯ ಲೆಫ್ಟಿನೆಂಟ್ ಬಿ.ಎಂ.ಸಾಗರ್ ಮಾತನಾಡಿ, ಇಂತಹ ಸಾಧನೆ ಮಾಡಲು ನನಗೆ ನನ್ನ ಕುಟುಂಬ ಹಾಗೂ ತಂದೆ–ತಾಯಿಗಳ ಸಹಕಾರ ಹಾಗೂ ಆಶೀರ್ವಾದದಿಂದ ಆಗಿದೆ. ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂಬ ಛಲ ನನ್ನಲ್ಲಿತ್ತು. ಅದಕ್ಕೆ ಸಾಕಷ್ಟು ಶ್ರಮ ಪಡಬೇಕಾಯಿತು. ನನ್ನ ತಂದೆಯವರು ನನಗೆ ಎಲ್ಲಾ ರೀತಿಯ ಸಹಾಯ ಮಾಡಿದರು. ಮೊದಲಿಗೆ ನನಗೆ ಮಿಲ್ಟ್ರಿ (ಸಿಪಾಯಿ) ಇಲಾಖೆಗೆ ಸೇರಿ ದೇಶ ಸೇವೆ ಮಾಡುವ ಹಂಬಲ ಇತ್ತು. ದೇಶ ಪ್ರೇಮದ ಬಗ್ಗೆ ಪುಸ್ತಕಗಳನ್ನು ಓದುತ್ತಿದ್ದೆ. ಮಿಲ್ಟ್ರಿಗೆ ಸಂಬಂಧಿಸಿದ ಸಿನಿಮಾಗಳನ್ನು ನೋಡಿ ಹೆಚ್ಚು ಖುಷಿ ಪಡುತ್ತಿದ್ದೆ ನಮ್ಮ ತಂದೆಗೆ ಒಂದು ಸಲ ದೇಶ ಸೇವೆಗೆ ಸೇರುತ್ತಿರುವ ಬಗ್ಗೆ ತಿಳಿಸಿದ್ದೆ, ಅದಕ್ಕೆ ಅವರು ಯೋಚನೆ ಮಾಡಿ ನಿರ್ಧಾರ ತೆಗೆದುಕೊಂಡು ಮುಂದುವರಿಯುವಂತೆ ಸಲಹೆ ನೀಡಿದರು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ನಿವೃತ್ತ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನಜೀರ್ ಅಹಮದ್, ಪದಾಧಿಕಾರಿಗಳಾದ ನಿವೃತ್ತ ಶಿಕ್ಷಕ ರಂಗಸ್ವಾಮಿ, ನಾಗರಾಜು, ನಟರಾಜು, ಚೋಕನಹಳ್ಳಿ ಪ್ರಕಾಶ್, ಪ್ರಭಾಕರ್, ನಂದೀಶ್, ನಾ.ನಾಗರಾಜು, ಗಂಜಿಗೆರೆ ಮಾಧು, ವಿಶ್ವನಾಥ್, ಪಿಡಿಓ ಶಿವಸ್ವಾಮಿ, ಸೇರಿದಂತೆ ಇತರರು ಹಾಜರಿದ್ದರು.



ಭಾರತೀಯ ಸೇನೆಯ ನೌಕಾಪಡೆಯ ಸಬ್ ಲೆಫ್ಟಿನೆಂಟ್ ಅಧಿಕಾರಿಯಾಗಿ ನೇಮಕಗೊಂಡ ಬಿ.ಎಂ.ಸಾಗರ್ ಅವರನ್ನು ಗ್ರಾಮಸ್ಥರು ಹೃದಯ ಸ್ಪರ್ಶಿಯಾಗಿ ಸನ್ಮಾನಿಸಿ ಗೌರವಿಸಿದರು.

ಮೈಸೂರು ವಿವಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಸಂಯೋಜನಾಧಿಕಾರಿ ರಾಮುಗೆ ಅಭಿನಂದನೆ

ಮೈಸೂರು,ಜೂ.16(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಸೆಂಟರ್ ಫಾರ್ ಜಿಯೋಇನ್‌ಫಾರ್ಮೆಟಿಕ್ಸ್ ಟೆಕ್ನಾಲಜಿ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಸಂಯೋಜನಾಧಿಕಾರಿ ಪ್ರೊ. ರಾಮು ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಕಳೆದ 30 ವರ್ಷಗಳಿಂದ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರೊ.ರಾಮು ಅವರಿಗೆ ಅಭಿನಂದಿಸುವುದು ಕುಲಪತಿಯಾದ ನನ್ನ ಕರ್ತವ್ಯವಾಗಿದೆ. ಅವರು ಮೈಸೂರು ವಿವಿಯ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗದ ಜಿ.ಐ.ಎಸ್ ವಿಭಾಗದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂದರು.

ಆರಂಭದಿಂದಲೂ ಶೈಕ್ಷಣಿಕ ಉತ್ಕೃಷ್ಟತೆ ಆಳವಾದ ಬದ್ಧತೆಯನ್ನು ಹೊಂದಿದ್ದಾರೆ. ಹೊಸ ಹೊಸ ಆಲೋಚನೆಗಳೊಂದಿಗೆ ಉತ್ಸಾಹದಿಂದ ವಿಭಾಗದ ಸುಧಾರಣೆಗೆ ಸೇವೆಯನ್ನು ಸಲ್ಲಿಸಿದ್ದಾರೆ. ಮೈಸೂರು ವಿವಿಯೊಂದಿಗಿನ ಇವರ ಈ ಪಯಣವು ಮುಂಬರುವ ಹಲವು ವರ್ಷಗಳವರೆಗೆ ಪರಂಪರೆಯಿಂದ ಗುರುತಿಸಲ್ಪಡುತ್ತದೆ. ಇವರ ಸಾಧನೆಗಳಿಂದ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಗಳ ಮೇಲೆ ಶಾಶ್ವತವಾದ ಪ್ರಭಾವ ಬೀರುತ್ತದೆ ಎಂದರು.

ನಿಮ್ಮ ಜೀವನದ ಈ ಹೊಸ ಅಧ್ಯಾಯವು ನಿಮಗೆ ಸಂತೋಷ, ಉತ್ತಮ ಆರೋಗ್ಯ ಮತ್ತು ವಿಶ್ರಾಂತಿ ನೀಡಲಿದೆ. ನಿಮ್ಮ ಪ್ರೀತಿ ಪಾತ್ರರ ಜೊತೆಗೆ ಸಂತಸದ ಕ್ಷಣಗಳನ್ನು ಕಳೆಯಿರಿ, ನಿಮ್ಮ ಅತ್ಯುತ್ತಮ ಸೇವೆ, ಸಮರ್ಪಣೆ ಮತ್ತು ಶ್ರೇಷ್ಠತೆಯ ನಿಮ್ಮ ಅಚಲ ಬದ್ಧತೆಗೆ ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮದ್ರಾಸು ವಿವಿಯ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಬಾಲಸುಬ್ರಮಣ್ಯಂ, ಪ್ರೊ.ವಸಂತಕುಮಾರನ್, ಭೂಗೋಳಶಾಸ್ತ್ರ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ.ಸಿ.ಚೌಡಯ್ಯ, ಅಭಿನಂದನಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಸೆಂಟರ್ ಫಾರ್ ಜಿಯೋಇನ್‌ಫಾರ್ಮೆಟಿಕ್ಸ್ ಟೆಕ್ನಾಲಜಿ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಸಂಯೋಜನಾಧಿಕಾರಿ ಪ್ರೊ.ರಾಮು ದಂಪತಿಯನ್ನು ಅಭಿನಂದಿಲಾಯಿತು.

ಜೂ.18, 21 ರೈತರಿಗೆ ಆನ್‌ಲೈನ್ ತರಬೇತಿ

ಮೈಸೂರು, ಜೂ.16– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಜೂ.18ರಂದು ಮಧ್ಯಾಹ್ನ 3ರಿಂದ 4ರವರೆಗೆ 'ಹೈನುಗಾರಿಕೆಯೊಂದಿಗೆ ಸಮಗ್ರ ಕೃಷಿ' ಹಾಗೂ ಜೂ.21ರಂದು 'ಸಾವಯವ ಪದ್ಧತಿ ಮತ್ತು ನೈಸರ್ಗಿಕ ಬೇಸಾಯ ಪದ್ಧತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅನುಭವ ಹಂಚಿಕೆ' ವಿಷಯ ಕುರಿತು ರೈತ ಅಥವಾ ರೈತ ಮಹಿಳೆಯರಿಗೆ ಆನ್‌ಲೈನ್ ತರಬೇತಿಗಳನ್ನು ಏರ್ಪಡಿಸಲಾಗಿದೆ. ಆಸಕ್ತರು ಗೂಗಲ್ ಮೀಟ್ www.kmw-kvob-syp ಲಿಂಕ್‌ನ ಮೂಲಕ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಮಾಹಿತಿಗೆ ದೂ.ಸಂ:8277933157.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ. 16– ಮೈಸೂರಿನ ಬ್ರಾಹ್ಮಣ ಸಂಘ ಹೆಬ್ಬಾಳು ವಿಜಯ ನಗರವು ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್ ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.30 ಕೊನೆ ದಿನ. ಹೆಚ್ಚಿನ ಮಾಹಿತಿಗೆ ಮೊ. 92435 29365, 90350 11459, 63632 70792 ಸಂಪರ್ಕಿಸಬಹುದು.

ನುಡಿಯ ಬಾಗಿಲ ಹಾಯ್ದು ಕವನ ಸಂಕಲನ ಬಿಡುಗಡೆ



ಮೈಸೂರು, ಜೂ. 16(ಎಸ್‌ಪಿಎನ್)– ಹಿರಿಯ ಕವಿ ರಾಮು ರಚಿತ 'ನುಡಿಯ ಬಾಗಿಲ ಹಾಯ್ದು' ಕವನ ಸಂಕಲನವನ್ನು ಮೈಸೂರು ವಿವಿ ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ.ಚ. ಸರ್ವಮಂಗಳ ಬಿಡುಗಡೆಗೊಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ಅಹರ್ನಿಶಿ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ರಾಮು ನೆನಪಿಗೊಂದು ನುಡಿ ಕಾಣಿಕೆ' ಬಿಡುಗಡೆಗೊಳಿಸಿ ಅವರು, ಮಾತನಾಡಿದರು.

ಚಿಕ್ಕವರಿಗೆ ದೊಡ್ಡವರು ಜೀವಂತ ಇರುವಾಗಲೇ ಸಾವು ಸಂಭವಿಸಬಾರದು. ಈ ದುಃಖ ತಡೆದುಕೊಳ್ಳುವ ಶಕ್ತಿ, ತಂದೆ–ತಾಯಿಗೆ ಇರುವುದಿಲ್ಲ. ಗುರುಗಳ ಮುಂದೆ ಶಿಷ್ಯರು, ತಂದೆ–ತಾಯಿಯ ಮುಂದೆ ಮಕ್ಕಳ ಸಾವು ನೋಡಲು ಬಯಸುವುದಿಲ್ಲ. ನನಗಿಂತ ಚಿಕ್ಕವರು, ಮಗುವಂತಹ ಮನಸ್ಸಿನ ರಾಮು ಅವರ ಸಾವು ಊಹಿಸಲು ಇಂದಿಗೂ ಸಾಧ್ಯವಾಗುತ್ತಿಲ್ಲ ಎಂದು ನುಡಿ ನಮನ ಸಲ್ಲಿಸಿದರು.

ಪತ್ರಿಕೆಯೊಂದರ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾಗುತ್ತಿದ್ದ ರಾಮು ಅವರ ಲೇಖನಗಳು ಸಾಹಿತ್ಯಾಸಕ್ತರನ್ನು ತಲುಪಿವೆ. ಅಂತೆಯೇ ರಾಮು ರಚಿತ ಕವಿತೆಗಳಲ್ಲಿ ತಾಯಿ ಮನಸ್ಸಿನ ಭಾವನೆಗಳಿರುವುದು ಅನಾವರಣಗೊಂಡಿದೆ. ರಾಮನಿಗೂ ರಾಮುವಿಗೂ ಇರುವ ಅಕ್ಷರಗಳ ವ್ಯತ್ಯಾಸವನ್ನು ಓದುಗರು ಗಮನಿಸಬೇಕು. ರಾಮನ ಹಿಂದೆ ಜೈ ಸೇರಿಸಿದರೆ ಬೇರೆ ಅರ್ಥ ಕೊಡುತ್ತದೆ. ಅದೇ ರೀತಿ ರಾಮ ಪದದಲ್ಲಿನ ಮ ಜಾಗದಲ್ಲಿ ಮು ಸೇರಿಸಿದರೆ ಅದು ಮುಗ್ಧ ಮನಸ್ಸಿನ 'ರಾಮು' ಅನಾವರಣಗೊಳ್ಳುತ್ತಾರೆ ಎಂದರಲ್ಲದೆ, ರಾಮು ರಚಿತ 'ನುಡಿಯ ಬಾಗಿಲ ಹಾಯ್ದು' ಕವನ ಸಂಕಲನದ ಹಾಯ್ದು ಕವಿತೆಗಳನ್ನು ವಾಚಿಸಿ, ರಾಮುವಿನ ಮನಸ್ಸಿನಲ್ಲಿದ್ದ ಅನಿಸಿಕೆಗಳು ಕವಿತೆಗಳ ಮೂಲಕ ವ್ಯಕ್ತವಾಗುತ್ತಿವೆ ಎಂದರು.

ನಂತರ ಚಿಂತಕಿ ಜ.ನಾ.ತೇಜಸ್ವಿ ಮಾತನಾಡಿ, ಹಿರಿಯ ಕವಿ ರಾಮು, ತಮ್ಮ ಕವಿತೆಗಳ ಮೂಲಕ ನೂರಾರು ಜನರನ್ನು ತಲುಪಿಸಿದ್ದಾರೆ. ಆದರೆ, ಜಾತಿ ಅವರನ್ನು ಬಿಟ್ಟಿಲ್ಲ. ಅವರ ಜಾತಿ ಕಾರಣಕ್ಕಾಗಿ ಅವರ ಸಮಾಜದಲ್ಲಿ ಸಾಕಷ್ಟು ನೋವುಂಡಿದ್ದಾರೆ. ಸಮಾಜದಲ್ಲಿ ಎಷ್ಟೇ ಪ್ರಗತಿ ಕಂಡರೂ ಜಾತಿ ಕಾರಣಕ್ಕಾಗಿ ಮಗುವಿನ ಮನಸ್ಸುಳ್ಳ ವ್ಯಕ್ತಿ ನಿಂದನೆಗೊಳಗಾಗುವುದು ಬೇಸರದ ಸಂಗತಿ ಎಂದರು. ಈ ವೇಳೆ ಹಿರಿಯ ಸಾಹಿತಿಗಳಾದ ರಾಜೇಂದ್ರ ಜನ್ನಿ, ಓ.ಎಲ್.ನಾಗಭೂಷಣ, ಸ್ವಾಮಿ, ರಹಮತ್ ತರೀಕೆರೆ, ಕೃಪಾಂಕರ್ ಸೇರಿದಂತೆ ಇತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.16–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆಗಳಿಗೆ ಸೇರಿದ ಪ್ರತಿಭಾವಂತ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಸಾಲಿನ ರಾಜ್ಯ ಮತ್ತು ಕೇಂದ್ರೀಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.30 ಕೊನೆ ದಿನ. ಮಾಹಿತಿಗೆ ಸಿ.ಮಹದೇವಪ್ರಸಾದ್, ಮೊ. 9449030588 ಸಂಪರ್ಕಿಸಬಹುದು.

ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಎಂ.ಗೌರಮ್ಮ ನೇಮಕ



ಮೈಸೂರು, ಜೂ. 16– ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯದರ್ಶಿಯನ್ನಾಗಿ ಸೋಸಲೆ ಗ್ರಾಮದ ಎಂ.ಗೌರಮ್ಮ ಅವರನ್ನು ನೇಮಿಸಲಾಗಿದೆ ಎಂದು ವಿಭಾಗದ ಜಿಲ್ಲಾಧ್ಯಕ್ಷ ಎಚ್.ಕೆ.ಮಂಜುನಾಥ್ ತಿಳಿಸಿದ್ದಾರೆ.

ಡಿಜಿಟಲ್ ಆರೋಗ್ಯ ಸೇವೆಗಳ ಕುರಿತು ಹೆಚ್ಚು ಸಂಶೋಧನೆ ನಡೆಯುತ್ತಿದೆ

ಡ್ರಗ್ ಡಿಸ್ಕವರಿ ಕುರಿತ ವಿಚಾರ ಸಂಕಿರಣದಲ್ಲಿ ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ ಅಭಿಮತ

ಮೈಸೂರು, ಜೂ.16(ಆರ್‌ಕೆ)– ಆರೋಗ್ಯ ಕ್ಷೇತ್ರದಲ್ಲಿ ಇತ್ತೀಚೆಗೆ ಅತೀ ಮಹತ್ವದ ಬೆಳವಣಿಗೆಗಳಾಗುತ್ತಿದ್ದು, ಪ್ರಮುಖವಾಗಿ ಡಿಜಿಟಲ್ ಆರೋಗ್ಯ ಸೇವೆಗಳ ಕುರಿತಂತೆ ಹೆಚ್ಚು ಸಂಶೋಧನೆಗಳು ನಡೆಯುತ್ತಿವೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್. ಗಂಗಾಧರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ವತಿಯಿಂದ ಆಲ್ ಫಾರ್ಮಾಕಾಗ್ನೋಸಿಸ್ಟ್ಸ್ ಅಂಡ್ ಫಿಟೋಕೆಮಿಸ್ಟ್ಸ್ ಅಸೋಸಿಯೇಷನ್ (ಎಪಿಪಿಎ) ಮತ್ತು ಅಸೋಸಿಯೇಷನ್ ಆಫ್ ಫಾರ್ಮಾಸ್ಯೂಟಿಕಲ್ ಸೈಂಟಿಸ್ಟ್ಸ್ ಅಂಡ್ ಎಜುಕೇಟರ್ಸ್ (ಎಪಿಎಸ್‌ಇ) ಸಹಯೋಗದೊಂದಿಗೆ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ 'ಡ್ರಗ್ ಡಿಸ್ಕವರಿ ಫ್ರಮ್ ಇಂಡಿಯನ್ ಟ್ರೆಡಿಷನಲ್ ಮೆಡಿಸಿನ್ಸ್ ಅಂಡ್ ರಿವರ್ಸ್ ಫಾರ್ಮಕಾಲಜಿ' ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ 'ಡ್ರಗ್ ಡಿಸ್ಕವರಿ ಫ್ರಮ್ ಇಂಡಿಯನ್ ಟ್ರೆಡಿಷನಲ್ ಮೆಡಿಸಿನ್ಸ್ ಅಂಡ್ ರಿವರ್ಸ್ ಫಾರ್ಮಕಾಲಜಿ' ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ ಉದ್ಘಾಟಿಸಿದರು.

ಡಿಜಿಟಲ್ ಆರೋಗ್ಯ ಸೇವೆ ಕುರಿತು ದೇಶಾದ್ಯಂತ ಸಂಶೋಧನೆಗಳು ಪ್ರಗತಿಯಲ್ಲಿದ್ದು, ಕೃತಕ ಬುದ್ಧಿಮತ್ತೆ, ಆರೋಗ್ಯ ವರ್ಧನೆ ಮತ್ತು ಔಷಧಿಗಳ ಸಂಶೋಧನೆಯಿಂದ ಹೆಚ್ಚು ಉಪಯೋಗವಾಗುತ್ತದೆಯಾದ್ದರಿಂದ ಔಷಧ ವಿಜ್ಞಾನಿಗಳು ಈ ನಿಟ್ಟಿನಲ್ಲಿ ಸಕ್ರಿಯರಾಗುವುದು ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜಿನ ಪ್ರಾಂಶುಪಾಲ ಡಾ.ಗಜಾನನ ಹೆಗ್ಡೆ ಮಾತನಾಡಿ, ಭಾರತೀಯ ಔಷಧ ಪದ್ಧತಿಗಳು ಹಲವು ವರ್ಷಗಳಿಂದ ಜನರಿಗೆ ಉಪಯೋಗವಾಗುತ್ತಿವೆ. ಔಷಧೀಯ ಸಸ್ಯಗಳ ಮೇಲಿನ ಸಂಶೋಧನೆಗೆ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಒತ್ತು ನೀಡುತ್ತಿರುವುದು ಶ್ಲಾಘನೀಯ ಎಂದರು.

ಬೆಳಗಾವಿಯ ಕೆಎಲ್‌ಇ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಸುನಿಲ್ ಎಸ್.ಜಲಾಲ್‌ಪುರ್, ಮಲ್ಲಿಗೆ ಔಷಧ ವಿಜ್ಞಾನ ಕಾಲೇಜು ಪ್ರಾಧ್ಯಾಪಕ ಪ್ರೊ.ರಾಜೇಂದ್ರ ವಿಷಯ ಕುರಿತು ಮಾತನಾಡಿದರು. ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಷಿ ಅಧ್ಯಕ್ಷತೆ ವಹಿಸಿದ್ದ ವಿಚಾರ ಸಂಕಿರಣದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎನ್.ಚಂದ್ರಶೇಖರ, ಕಾಲೇಜಿನ ಫಾರ್ಮಕಾಲಜಿ ವಿಭಾಗದ ಮುಖ್ಯಸ್ಥ ಡಾ.ಎನ್.ವೆಂಕಟರಾವ್, ಫಾರ್ಮಸಿ ಪ್ರಾಕ್ಟೀಸ್ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್.ಚರಣ್ ಪಾಲ್ಗೊಂಡಿದ್ದರು.

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ



ಮೈಸೂರಿನ ಜ್ಯೋತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಅಭಿವಿನ್ಯಾಸ ಕಾರ್ಯಕ್ರಮವನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜ್ಯೋತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುದ್ದುವೀರಪ್ಪ, ಕಾರ್ಯದರ್ಶಿ ಎ.ಎಸ್.ಚನ್ನಬಸಪ್ಪ, ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಪ್ರಣಮ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ವಿ.ಪಿ.ಸವಿತಾ, ಕಾರ್ಯದರ್ಶಿ ಮಹಿ ಮಹೇಶ್, ಕಾಲೇಜ್ ಆಡಳಿತಾಧಿಕಾರಿ ಎ.ಸಿ.ಅರವಿಂದ್, ಪ್ರಾಂಶುಪಾಲ ಡಾ.ಭರತ್ ರಾಜ್, ಸತ್ಯನಾರಾಯಣ, ಗೋಪಾಲರಾಜ್ ಅರಸ್, ನೂತನ ವಿದ್ಯಾರ್ಥಿಗಳು, ಪೋಷಕರು, ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ದೇಶ - ವಿದೇಶ

ನಾಪತ್ತೆಯಾಗಿದ್ದ ಮಹಿಳೆ 3 ದಿನಗಳ ಬಳಿಕ ಹೆಬ್ಬಾವಿನ ಹೊಟ್ಟೆಯೊಳಗೆ ಪತ್ತೆ!

ಜಕಾರ್ತ: 3 ದಿನಗಳ ಹಿಂದೆ ನಾಪತ್ತೆಯಾಗಿದ್ದ ಮಹಿಳೆಯೊಬ್ಬರು ಹೆಬ್ಬಾವಿನ (ಪೈಥಾನ್) ಹೊಟ್ಟೆಯೊಳಗೆ ಪತ್ತೆಯಾಗಿರುವ ಆಘಾತಕಾರಿ ಘಟನೆ ಇಂಡೋನೇಷ್ಯಾದಲ್ಲಿ ವರದಿಯಾಗಿದೆ. ಮಧ್ಯ ಇಂಡೋನೇಷ್ಯಾ, ಮಕಾಸ್ಸರ್‌ನಲ್ಲಿ ಈ ಘಟನೆ ವರದಿಯಾಗಿದ್ದು, ಹೆಬ್ಬಾವೊಂದು ಮಹಿಳೆಯನ್ನು ನುಂಗಿಹಾಕಿದೆ. 3 ದಿನಗಳ ಬಳಿಕ ಮಹಿಳೆ ಸತ್ತ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ಸ್ಥಳೀಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೂಲಗಳ ಪ್ರಕಾರ 45 ವರ್ಷದ ಫರೀದಾ ಮೃತ ಮಹಿಳೆಯಾಗಿದ್ದು, ಫರೀದಾ ಅವರ ಪತಿ ಮತ್ತು ದಕ್ಷಿಣ ಸುಲವೆಸಿ ಪ್ರಾಂತ್ಯದ ಕಲೆಂಪಂಗ್ ಗ್ರಾಮದ ನಿವಾಸಿಗಳು ಶುಕ್ರವಾರ ಐದು ಮೀಟರ್ (16 ಅಡಿ) ಅಳತೆಯ ರೆಟಿಕ್ಯುಲೇಟೆಡ್ ಹೆಬ್ಬಾವಿನೊಳಗೆ ಆಕೆಯ ಶವವನ್ನು ಪತ್ತೆ ಮಾಡಿದ್ದಾರೆ. 45 ವರ್ಷದ ಫರೀದಾ ಗುರುವಾರ ರಾತ್ರಿ ನಾಪತ್ತೆಯಾಗಿದ್ದರು. ಈ ವೇಳೆ ಫರೀದಾ ಅವರ ಪತಿ ಗ್ರಾಮದಲ್ಲಿ ವ್ಯಾಪಕ ಶೋಧ ನಡೆಸಿದ್ದರು. ಆದರೆ ಫರೀದಾ ಪತ್ತೆಯಾಗಿರಲಿಲ್ಲ. ಬಳಿಕ ಗ್ರಾಮದ ಕಾಲುವೆಯಲ್ಲಿ ಹೆಬ್ಬಾವು ಭಾರಿ ಗಾತ್ರದ ಹೊಟ್ಟೆಯೊಂದಿಗೆ ಪತ್ತೆಯಾಗಿತ್ತು.



ಇದನ್ನು ಗಮನಿಸಿದ ಗ್ರಾಮಸ್ಥರು ಅನುಮಾನಗೊಂಡು ಫರೀದಾ ಅವರ ಪತಿ ಮತ್ತು ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಕೂಡಲೇ ತಜ್ಞರೊಂದಿಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಅರಣ್ಯ ಇಲಾಖೆ ಒಪ್ಪಿಗೆ ಬಳಿಕ ಹಾವಿನ ಹೊಟ್ಟೆಯನ್ನು ಬಗೆಯಲು ಮುಂದಾದರು. ಈ ವೇಳೆ ಹಾವಿನ ಹೊಟ್ಟೆಯಲ್ಲಿ ಫರೀದಾ ಅವರ ಬಟ್ಟೆ ಪತ್ತೆಯಾಗಿದೆ. ಈ ವೇಳೆ ಫರೀದಾ ಸಾವು ಖಚಿತವಾಗಿದ್ದು, ಸಂಪೂರ್ಣ ಹೊಟ್ಟೆಯನ್ನು ಕತ್ತರಿಸಿದಾಗ ಮಹಿಳೆಯ ಶವ ಪತ್ತೆಯಾಗಿದೆ.

48 ಗಂಟೆಗಳಲ್ಲಿಯೇ ಸಾವು: ಜಪಾನ್‌ನಲ್ಲಿ 'ಮಾಂಸ ತಿನ್ನುವ ಬ್ಯಾಕ್ಟೀರಿಯಾ' ಆತಂಕ

ಟೋಕಿಯೋ: 'ಮಾಂಸ ತಿನ್ನುವ ಬ್ಯಾಕ್ಟೀರಿಯಾ' ಹೊಸ ಆತಂಕ ಸೃಷ್ಟಿಸಿದೆ. ಜಪಾನ್‌ನಲ್ಲಿ ಹರಡುತ್ತಿರುವ ಈ ಅಪರೂಪದ ಬ್ಯಾಕ್ಟೀರಿಯಾ, ಗಂಭೀರ ಕಾಯಿಲೆ ಉಂಟುಮಾಡುತ್ತಿದ್ದು, 48 ಗಂಟೆಗಳಲ್ಲಿ ಸಾವಿಗೆ ಕಾರಣವಾಗುವಷ್ಟು ಅಪಾಯಕಾರಿಯಾಗಿದೆ. ಇದು ವೈದ್ಯಕೀಯ ಲೋಕಕ್ಕೆ ಹೊಸ ಸವಾಲೊಡ್ಡಿದೆ. ಕೋವಿಡ್ ಸಮಯದ ನಿರ್ಬಂಧಗಳನ್ನು ಸಡಿಲಿಸಿದ ಬಳಿಕ ಜಪಾನ್‌ನಲ್ಲಿ ಇದು ಕಾಣಿಸಿಕೊಂಡಿದೆ ಎಂದು ಬ್ಲೂಮ್‌ಬರ್ಗ್ ವರದಿ ಹೇಳಿದೆ. ಜಪಾನ್‌ನಲ್ಲಿ ಸ್ಟ್ರೆಪ್ಟೋಕೊಕ್ಕಾಲ್ ಟಾಕ್ಸಿಕ್ ಶಾಕ್ ಸಿಂಡ್ರೋಮ್ (ಎಸ್‌ಟಿಎಸ್‌ಎಸ್) ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದೆ. ಜೂನ್ 2ರ ವೇಳೆಗೆ 977 ಪ್ರಕರಣಗಳು ದಾಖಲಾಗಿವೆ. ಕಳೆದ ವರ್ಷ ಒಟ್ಟು 941 ಪ್ರಕರಣಗಳು ವರದಿಯಾಗಿದ್ದವು. ಈ ವರ್ಷದ ಅರ್ಧ ಭಾಗದಲ್ಲಿಯೇ ಅದನ್ನೂ ಮೀರಿದ ಪ್ರಕರಣಗಳು ದಾಖಲಾಗಿವೆ ಎಂದು ಸಾಂಕ್ರಾಮಿಕ ಕಾಯಿಲೆಗಳ ರಾಷ್ಟ್ರೀಯ ಸಂಸ್ಥೆ ವರದಿ ಹೇಳಿದೆ. ಪ್ರಸ್ತುತ ದಾಖಲಾಗುತ್ತಿರುವ ಸೋಂಕಿನ ದರದ ವೇಗವನ್ನು ಗಮನಿಸಿದಾಗ, ಈ ವರ್ಷ ಒಟ್ಟಾರೆ 2,500 ಪ್ರಕರಣಗಳಿಗೆ ತಲುಪಬಹುದು ಎಂದು ಊಹಿಸಲಾಗಿದೆ.



ಅಮೆರಿಕದಲ್ಲಿ ಭಾರತೀಯ ಮೂಲದ ಚಿನ್ನಾಭರಣ ಮಳಿಗೆ ಲೂಟಿ: 3 ನಿಮಿಷಗಳಲ್ಲೇ ಅಂಗಡಿ ಖಾಲಿ!

ಕ್ಯಾಲಿಫೋರ್ನಿಯಾ (ಅಮೆರಿಕ): ಈ ಘಟನೆ ಸಿನಿಮಾ ದೃಶ್ಯದಂತೆ ಭಾಸವಾಗುತ್ತೆ. ಚಿನ್ನಾಭರಣ ಮಳಿಗೆಗೆ ಸುಮಾರು 20 ಮುಸುಕುಧಾರಿ ವ್ಯಕ್ತಿಗಳು ನುಗ್ಗುತ್ತಾರೆ. ಈ ವೇಳೆ ಅಂಗಡಿಯ ರಕ್ಷಣೆಗೆ ಇದ್ದದ್ದು ಕೇವಲ ಒಬ್ಬನೇ ಒಬ್ಬ ಭದ್ರತಾ ಸಿಬ್ಬಂದಿ. ಆತ ಪ್ರತಿರೋಧ'ವೇ ಇಲ್ಲದಂತೆ ಶರಣಾಗುತ್ತಾನೆ. ಕೇವಲ ಮೂರೇ ನಿಮಿಷಗಳಲ್ಲಿ ದುಷ್ಕರ್ಮಿಗಳು ಇಡೀ ಆಭರಣ ಮಳಿಗೆಯನ್ನು ಲೂಟಿ ಮಾಡುತ್ತಾರೆ. ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಸನ್ನಿವೇಲ್‌ನಲ್ಲಿ ನಡೆದ ಘಟನೆ ಇದು. ಭಾರತದ ಪುಣೆ ಮೂಲದ ಉದ್ಯಮಿಯೊಬ್ಬರು ಈ ನಗರದಲ್ಲಿ ಚಿನ್ನಾಭರಣ ಮಳಿಗೆ ಹೊಂದಿದ್ದಾರೆ. ಅದರ ಹೆಸರು ಪಿಎನ್‌ಜಿ ಜ್ಯುವೆಲ್ಲರ್ಸ್. ಈ ಮಳಿಗೆ ಗಾಜಿನ ಬಾಗಿಲನ್ನು ಮುರಿದು ಒಳ ನುಗ್ಗಿದ ದರೋಡೆಕೋರರು ಆಭರಣ ಮಳಿಗೆಯನ್ನು ಲೂಟಿ ಮಾಡಿದ ಸಿಸಿಟಿವಿ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಂಗಡಿ ಒಳಗೆ ಗಾಜಿನ ಬಾಗಿಲುಗಳನ್ನು, ಕಪಾಟುಗಳನ್ನು ಮುರಿಯುವ ದರೋಡೆಕೋರರು ಅಚ್ಚುಕಟ್ಟಾಗಿ ಜೋಡಿಸಿ ಇಡಲಾಗಿದ್ದ ಆಭರಣಗಳನ್ನು ದೋಚುತ್ತಾರೆ. ಅಲ್ಲಿಯೇ ಇದ್ದ ಒಬ್ಬನೇ ಒಬ್ಬ ಭದ್ರತಾ ಸಿಬ್ಬಂದಿಗೆ ಥಳಿಸುತ್ತಾರೆ. ಇದೇ ವೇಳೆ ಓರ್ವ ದರೋಡೆಕೋರ ಮಳಿಗೆಯ ಕಪಾಟುಗಳಿಗೆ ಅಳವಡಿಸಿದ್ದ ಗಾಜಿನ ಬಾಗಿಲುಗಳಿಗೆ ಕಲ್ಲೆಸೆದು ಅದನ್ನು ಪುಡಿಗಟ್ಟುತ್ತಾನೆ. ಸಿಸಿಟಿವಿ ವಿಡಿಯೋ ನೋಡಿದಾಗ ಕೇವಲ ಮೂರು ನಿಮಿಷಗಳಲ್ಲೇ ಇಡೀ ಮಳಿಗೆಯ ಕಳ್ಳತನ ನಡೆದಿರುವುದು ಸ್ಪಷ್ಟವಾಗುತ್ತದೆ. ಇಡೀ ಮಳಿಗೆಯ ಎಲ್ಲಾ ಚಿನ್ನಾಭರಣ ಕೆಲವೇ ನಿಮಿಷಗಳಲ್ಲಿ ದರೋಡೆಕೋರರ ಬ್ಯಾಗ್ ಸೇರಿದೆ.



ಗಂಗಾ ನದಿಯಲ್ಲಿ 17 ಮಂದಿ ಪ್ರಯಾಣಿಸುತ್ತಿದ್ದ ದೋಣಿ ಪಲ್ಟಿ: ಆರು ಮಂದಿ ನಾಪತ್ತೆ

ಪಾಟ್ನಾ: 17 ಮಂದಿ ಪ್ರಯಾಣಿಸುತ್ತಿದ್ದ ದೋಣಿಯೊಂದು ಗಂಗಾ ನದಿಯಲ್ಲಿ ಪಲ್ಟಿಯಾಗಿದೆ. ಬಿಹಾರದ ರಾಜಧಾನಿ ಪಾಟ್ನಾದ ಬಾರ್ಹ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಅದೃಷ್ಟವಶಾತ್ 11 ಮಂದಿ ಈಜಿ ದಡ ಸೇರಿದ್ದರೆ ಆರು ಮಂದಿ ನಾಪತ್ತೆಯಾಗಿದ್ದಾರೆ.



ನದಿ ಮಧ್ಯೆಯಲ್ಲಿ ದೋಣಿ ಮುಳುಗಿದ್ದು, ತಕ್ಷಣ ಎಲ್ಲರೂ ನದಿಯಲ್ಲಿ ಮುಳುಗಲು ಪ್ರಾರಂಭಿಸಿದರು. ಇಂತಹ ಸಂದರ್ಭದಲ್ಲೂ ಹೇಗೋ 11 ಜನ ಈಜಿ ದಡ ಸೇರಿದ್ದರೆ ಇನ್ನೂ ಆರು ಮಂದಿ ನಾಪತ್ತೆಯಾಗಿದ್ದಾರೆ. ಗಂಗಾ ದಸರಾ ನಿಮಿತ್ತ ಕೆಲವರು ಸ್ನಾನ ಮಾಡಲು ನದಿಗೆ ಅಡ್ಡಲಾಗಿ ದೋಣಿಯಲ್ಲಿ ಹೋಗುತ್ತಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ವೇಳೆ ಉಮಾ ಘಾಟ್ ಬಳಿ ದೋಣಿ ಪಲ್ಟಿಯಾಗಿದೆ. ದುರಂತದಲ್ಲಿ ಆರು ಮಂದಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ.

ಅಮುಲ್ ಐಸ್ ಕ್ರೀಂ ಟಬ್‌ನೊಳಗೆ ಜರಿಹುಳು; ಪ್ರಕರಣ ದಾಖಲು

ನೋಯ್ಡಾ: ದೀಪಾ ದೇವಿ ಎಂಬುವವರು ತಮ್ಮ ಐದು ವರ್ಷದ ಮಗನಿಗೆ ಮ್ಯಾಂಗೋ ಶೇಕ್ ಮಾಡಿಕೊಡಲೆಂದು ಬ್ಲಿಂಕಿಟ್‌ನಿಂದ ಅಮುಲ್ ವೆನಿಲ್ಲಾ ಮ್ಯಾಜಿಕ್ ಐಸ್ ಕ್ರೀಂ ಟಬ್ ಅನ್ನು ಆರ್ಡರ್ ಮಾಡಿದ್ದರು. ಟಬ್ ಅನ್ನು ತೆರೆದಾಗ ಅವರಿಗೆ ಆಘಾತ ಕಾದಿತ್ತು. ಐಸ್‌ಕ್ರೀಂ ಟಬ್‌ನೊಳಗೆ ಜರಿಹುಳುವನ್ನು ಕಂಡು ದಂಗಾಗಿದ್ದಾರೆ. ಉತ್ತರ ಪ್ರದೇಶದ ನೋಯ್ಡಾದ ಸೆಕ್ಟರ್ 12ರಲ್ಲಿ ಈ ಘಟನೆ ನಡೆದಿದೆ. ಐಸ್ ಕ್ರೀಂನ ಟಬ್ ಮುಚ್ಚಳ ಎತ್ತಿದ ಕೂಡಲೆ ಅವರಿಗೆ ಜರಿಹುಳು ಕಂಡುಬಂದಿದೆ. ಈ ಸಂಬಂಧ ದೀಪಾ ವಿಡಿಯೋ ಮಾಡಿದ್ದು, ಸದ್ಯ ಈ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ ಮತ್ತು ಆಹಾರ ಪದಾರ್ಥಗಳ ಸುರಕ್ಷತಾ ಮಾನದಂಡಗಳ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಜರಿಯನ್ನು ಕಂಡ ತಕ್ಷಣವೇ ದೀಪಾ ಬ್ಲಿಂಕಿಟ್‌ಗೆ ದೂರು ಸಲ್ಲಿಸಿದ್ದಾರೆ. ಆಗ ಇ–ಕಾಮರ್ಸ್ ಪ್ಲಾಟ್‌ಫಾರ್ಮ್ ಐಸ್ ಕ್ರೀಮ್ ಖರೀದಿಗೆ ನೀಡಿದ್ದ 195 ರೂ.ಗಳನ್ನು ಮರುಪಾವತಿಸಿದೆ. ಹೆಚ್ಚಿನ ತನಿಖೆಗಾಗಿ ಈ ವಿಷಯವನ್ನು ಅಮುಲ್‌ಗೆ ತಿಳಿಸಿರುವುದಾಗಿ ಬ್ಲಿಂಕಿಟ್ ಆಕೆಗೆ ಭರವಸೆ ನೀಡಿದೆ. ಐಸ್ ಕ್ರೀಂನಲ್ಲಿ ಜರಿಹುಳು ಪತ್ತೆಯಾಗಿರುವ ಕುರಿತು ಮಾಹಿತಿ ಪಡೆದ ಆಹಾರ ಸುರಕ್ಷತಾ ಅಧಿಕಾರಿಗಳ ತಂಡ ಸೆಕ್ಟರ್–12ನ್ನು ತಲುಪಿದೆ. ಸಂತ್ರಸ್ತೆಯ ದೂರಿನ ಆಧಾರದ ಮೇಲೆ, ಅವರು ಆಪ್ ಸ್ಟೋರ್‌ಗೆ ತೆರಳಿ ಆ ಬ್ಯಾಚ್‌ನ ಐಸ್ ಕ್ರೀಂ ಮಾರಾಟವನ್ನು ನಿಲ್ಲಿಸಿದ್ದಾರೆ. ಸದ್ಯ ಐಸ್ ಕ್ರೀಮ್ ಕಂಪನಿ ವಿರುದ್ಧ ಆಹಾರ ಕಲಬೆರಕೆ ಮತ್ತು ಮಾನವನ ಜೀವಕ್ಕೆ ಅಪಾಯ ತಂದಿರುವ ಪ್ರಕರಣ ದಾಖಲಾಗಿದೆ.

ರೇಣುಕಾಸ್ವಾಮಿ ಹತ್ಯೆ ಪ್ರಕರಣ

ಚಿತ್ರದುರ್ಗದಲ್ಲಿ ಪೊಲೀಸರ ಸ್ಥಳ ಮಹಜರ್



ಚಿತ್ರದುರ್ಗ, ಜೂ.16– ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಬೆಂಗಳೂರು ಪೊಲೀಸರು ಗುರುವಾರ ಮಧ್ಯರಾತ್ರಿ ಚಿತ್ರದುರ್ಗದ ಎರಡು ಕಡೆ ಸ್ಥಳ ಮಹಜರು ಮಾಡಿದ್ದಾರೆ. ನಗರದ ಚಳ್ಳಕೆರೆ ಗೇಟ್ ಬಳಿ ಬಾಲಾಜಿ ಬಾರ್ ಅಂಡ್ ರೆಸ್ಟೋರೆಂಟ್ ಹಾಗೂ ಬೆಂಗಳೂರು ರಸ್ತೆಯಲ್ಲಿನ ಜಗಳೂರು ಮಹಲಿಂಗಪ್ಪ ಪೆಟ್ರೋಲ್ ಬಂಕ್ ಬಳಿ ಮಹಜರು ನಡೆಸಲಾಯಿತು. ಗುರುವಾರ ಸಂಜೆ ಸ್ಥಳ ಮಹಜರಿಗೆ ಬರುತ್ತಾರೆ, ದರ್ಶನ್ ಕೂಡಾ ಆಗಮಿಸುತ್ತಾರೆಂಬ ವದಂತಿ ಹಿನ್ನೆಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಬಾಲಾಜಿ ಬಾರ್ ಬಳಿ ಕಾದಿದ್ದರು.

ಆದರೆ, ಯಾರೂ ಬರುವ ಸೂಚನೆ ಸಿಗದ ಕಾರಣ ರಾತ್ರಿ ಎಂಟೂವರೆ ನಂತರ ಎಲ್ಲರೂ ನಿರ್ಗಮಿಸಿದ್ದರು. ಆ ಬಳಿಕ ಜನಸಂದಣಿ, ಮಾಧ್ಯಮದ ಕಣ್ತಪ್ಪಿಸಿ ಪೊಲೀಸರು ಮಧ್ಯರಾತ್ರಿ ಒಂದು ಗಂಟೆಗೆ ಆಗಮಿಸಿ ಸ್ಥಳ ಮಹಜರು ಮಾಡಿದ್ದಾರೆ. ಕಾಮಾಕ್ಷಿಪಾಳ್ಯ ಸಿಪಿಐ ಸಂಜೀವ್ ಗೌಡ ನೇತೃತ್ವದಲ್ಲಿ ಮಹಜರು ಮಾಡಲಾಗಿದೆ. ಈ ವೇಳೆ ದರ್ಶನ್ ಅಭಿಮಾನಿಗಳ ಸಂಘದ ಚಿತ್ರದುರ್ಗ ಅಧ್ಯಕ್ಷ ರಾಘವೇಂದ್ರ ಪೊಲೀಸರ ಮುಂದೆ ರೇಣುಕಾಸ್ವಾಮಿ ಕಿಡ್ನಾಪ್ ಹೇಗೆ ಮಾಡಿದೆ ಎಂಬುದನ್ನು ವಿವರಿಸಿದ್ದಾನೆ. ಬಾಲಾಜಿ ಬಾರ್ ಬಳಿ ಜೂ.8ರ ಬೆಳಗ್ಗೆ 9.48ರ ವೇಳೆಗೆ ಸ್ಕೂಟರ್ ಅಡ್ಡಗಟ್ಟಿ ಕಿಡ್ನಾಪ್ ಮಾಡಲಾಯಿತು.

ನಂತರ ಆಟೋವೊಂದರಲ್ಲಿ ಚಳ್ಳಕೆರೆ ಗೇಟಿನಿಂದ ಬೆಂಗಳೂರು ರಸ್ತೆಯಲ್ಲಿನ ಜಗಳೂರು ಮಹಲಿಂಗಪ್ಪ ಪೆಟ್ರೋಲ್ ಬಂಕ್‌ವರೆಗೆ ತೆರಳಲಾಯಿತು. ಬಳಿಕ ಟ್ಯಾಕ್ಸಿ ಚಾಲಕ ರವಿಶಂಕರ್‌ಗೆ ಹೇಳಿ ಅಲ್ಲಿಗೆ ಕಾರು ತರಿಸಿಕೊಂಡು ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆದೊಯ್ದ ಬಗೆ ವಿವರಿಸಿದ್ದಾನೆ. ಪ್ರಕರಣದ ಇಂಚಿಂಚು ಮಾಹಿತಿ, ಸ್ಥಳದಲ್ಲಿ ಅಳತೆ ಮಾಡಿ ಸಾಕ್ಷಿ ಸಂಗ್ರಹ ಮಾಡಲಾಯಿತು. ಎರಡೂ ಜಾಗದಲ್ಲಿ ಪೊಲೀಸ್ ಬಿಗಿ ಭದ್ರತೆಯಲ್ಲೇ ಮಧ್ಯರಾತ್ರಿ 1.30ರಿಂದ 2.30 ವರೆಗೆ ಎರಡೂ ಜಾಗದಲ್ಲಿ ಸ್ಥಳ ಮಹಜರು ನಡೆಯಿತು.

ದರ್ಶನ್ ಗ್ಯಾಂಗ್ ಬಳಸಿದ್ದ ಕಾರನ್ನು ವಶಪಡಿಸಿಕೊಂಡ ಪೊಲೀಸರು



ಚಿತ್ರದುರ್ಗ: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರ ತಂಡವು ಭಾನುವಾರ ಸಂತ್ರಸ್ತನ ಅಪಹರಣಕ್ಕೆ ಬಳಸಲಾಗಿದ್ದ ಕಾರನ್ನು ವಶಪಡಿಸಿಕೊಂಡಿದೆ.

ಆರೋಪಿಗಳಲ್ಲಿ ಒಬ್ಬನಾದ ರವಿ ಎಂಬಾತ ಚಿತ್ರದುರ್ಗ ಜಿಲ್ಲೆಯ ಅಯ್ಯನಹಳ್ಳಿ ಗ್ರಾಮದ ಮನೆಯೊಂದರಲ್ಲಿ ಕಾರನ್ನು ನಿಲ್ಲಿಸಿದ್ದ. ಕಾರನ್ನು ವಶಪಡಿಸಿಕೊಳ್ಳುವಾಗ ವಿಧಿವಿಜ್ಞಾನ ತಜ್ಞರು ಹಾಜರಿದ್ದರು. ಪೊಲೀಸರು ರವಿ ಕುಟುಂಬದವರನ್ನು ವಿಚಾರಣೆಗೊಳಪಡಿಸಿ ಕಾರಿನಲ್ಲಿದ್ದ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬೀದಿ ಹೆಣವಾಗಿದ್ದ ರೇಣುಕಾಸ್ವಾಮಿಗೆ ನ್ಯಾಯ ಸಿಗಬೇಕು

ನಟ ಕಿಚ್ಚ ಸುದೀಪ್ ಪ್ರತಿಕ್ರಿಯೆ

ಬೆಂಗಳೂರು, ಜೂ.16– ಸರ್ಕಾರ, ಮಾಧ್ಯಮದವರು, ಪೊಲೀಸರು ಕರೆಕ್ಟಾಗಿ ಕೆಲಸ ಮಾಡುತ್ತಿದ್ದಾರೆಂದರೆ ಅದಕ್ಕೆ ನಾನೂ ಬೆಂಬಲಿಸುತ್ತೇನೆ. ಬಾಳಿ ಬದುಕಬೇಕಿದ್ದ ರೇಣುಕಾಸ್ವಾಮಿ ಬೀದಿ ಹೆಣವಾಗಿದ್ದಕ್ಕೆ, ಆತನ ಹೆಂಡತಿಗೆ, ಮುಂದೆ ಹುಟ್ಟಿ ಬರುವ ಮಗುವಿಗೆ ಹಾಗೂ ಅವರ ಕುಟುಂಬಕ್ಕೆ ನ್ಯಾಯ ಸಿಗಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ ಎಂದು ನಟ ಹಾಗೂ ನಿರ್ದೇಶಕ ಕಿಚ್ಚ ಸುದೀಪ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕರ್ನಾಟಕ ದೊಡ್ಡ ಸ್ಥಾನದಲ್ಲಿರುವ ಮುಖ್ಯಮಂತ್ರಿಗಳು, ಮಾಧ್ಯಮಗಳು ಹಾಗೂ ಪೊಲೀಸರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಯಾರ ಪರವಾಗಿಯೂ, ವಿರೋಧವಾಗಿಯೂ ನನ್ನ ಅಭಿಪ್ರಾಯ ವ್ಯಕ್ತಪಡಿಸಲ್ಲ. ಮುಖ್ಯಮಂತ್ರಿಗಳೇ ಹಠ ವಿಡಿದು ಕುಳಿತು ಈ ಕೇಸಿನಲ್ಲಿ ನ್ಯಾಯ ಕೊಡಿಸಲು ಮುಂದಾಗಿದ್ದಾರೆ. ಅದಕ್ಕೆ ನಾವೆಲ್ಲರೂ ಬೆಂಬಲಿಸಬೇಕಿದೆ. ಬಾಳಿ ಬದುಕಬೇಕಿದ್ದ ರೇಣುಕಾಸ್ವಾಮಿ ಬೀದಿ ಹೆಣವಾಗಿದ್ದಕ್ಕೆ, ಆತನ ಹೆಂಡತಿಗೆ, ಮುಂದೆ ಹುಟ್ಟಿ ಬರುವ ಮಗುವಿಗೆ ಹಾಗೂ ಅವರ ಕುಟುಂಬಕ್ಕೆ ನ್ಯಾಯ ಸಿಗಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ ಎಂದು ಹೇಳಿದರು. ಕೊಲೆಯಾದವನ ಮನೆಗೆ, ಕುಟುಂಬಸ್ಥರಿಗೆ ನ್ಯಾಯ ಸಿಗಬೇಕು. ಇಲ್ಲಿ ಆರೋಪಿ ಯಾರು? ಯಾತಕ್ಕಾಗಿ ಮಾಡಿದ್ದಾನೆ ಎಂಬ ಸತ್ಯ ಹೊರ ಬಂದು ಶಿಕ್ಷೆ ಆಗಬೇಕು ಎಂಬುದು ಎಲ್ಲರ ಅಪೇಕ್ಷೆಯಾಗಿದೆ. ಒಂದು ಜೀವ ಹುಟ್ಟಿತು, ಒಂದು ಜೀವ ಹೋಯಿತು ಎಂಬುದನ್ನು ನಾನು ಯಾವುದೇ ಸ್ಥಳವನ್ನು ಆಧರಿಸಿ ಪ್ರಾಮುಖ್ಯತೆ ನೀಡಲು ಸಾಧ್ಯವಿಲ್ಲ. ಚಿತ್ರದುರ್ಗ, ಶಿವಮೊಗ್ಗ ಯಾವುದೇ ಆಗಿರಲಿ ಕರ್ನಾಟಕದ ಪ್ರತಿಯೊಂದು ಗ್ರಾಮದಲ್ಲಿಯೂ ಅನ್ಯಾಯವಾದರೆ ಅದಕ್ಕೆ ನ್ಯಾಯ ಸಿಗಲಿ ಎಂಬುದೇ ನಮ್ಮ ವಾದವಾಗಿದೆ.



ರಾಜ್ಯದಲ್ಲಿ ಚಿತ್ರರಂಗಕ್ಕೆ ನ್ಯಾಯ ಸಿಗಬೇಕು. ಚಿಕ್ಕ ಚಿಕ್ಕ ವಿಚಾರಗಳಿಗೂ ಚಿತ್ರರಂಗದ ಮೇಲೆ ಏನಾದರೂ ಒಂದು ಬರುತ್ತದೆ. ಜನ ಬರಲಿಲ್ಲವೆಂದರೂ ಚಿತ್ರರಂಗ, ಹೋರಾಟಕ್ಕೆ ಬರಲಿಲ್ಲ ಎಂದರೂ ಚಿತ್ರರಂಗ ಎಂಬುದರ ಮೇಲೆ ಆರೋಪ ಮಾಡುತ್ತಿರುವುದಕ್ಕೆ ಒಂದು ಕ್ಲೀನ್ ಚಿಟ್ ಸಿಗಬೇಕು. ಚಿತ್ರರಂಗದಲ್ಲಿ ಎಲ್ಲ ಬಗೆಯ ಕಲಾವಿದರು ಇದ್ದಾರೆ. ಕೊಲೆಯಾದ ವ್ಯಕ್ತಿಯ ಕುಟುಂಬಕ್ಕೆ ನ್ಯಾಯ ಸಿಕ್ಕರೆ ಚಿತ್ರರಂಗವೂ ಸಂತಸ ಪಡುತ್ತದೆ.

ಯಾರನ್ನೂ ಸುಖಾ ಸುಮ್ಮನೇ ಬ್ಯಾನ್ ಮಾಡೋಕಾಗಲ್ಲ: ನಾವ್ಯಾರೂ ಕಾನೂನು ಅಲ್ಲ. ಚಿತ್ರರಂಗದಿಂದ ಒಬ್ಬರನ್ನು ಸುಖಾಸುಮ್ಮನೇ ಬ್ಯಾನ್ ಮಾಡೋಕೆ ಆಗೊಲ್ಲ. ಈ ಕೇಸಿನಿಂದ ಹೊರಗೆ ಬಂದರೆ ಬ್ಯಾನ್ ಎನ್ನುವ ಪದವೇ ಬರುವುದಿಲ್ಲ. ಕೆಲವು ಹಿರಿಯರು ಕುಳಿತುಕೊಂಡು ತೀರ್ಮಾನ ಮಾಡುತ್ತಾರೆ. ಕೆಲವು ದಿನಗಳ ಹಿಂದೆ ನನ್ನ ಮೇಲೆಯೂ ಬ್ಯಾನ್ ಮಾಡಬೇಕು ಎಂಬ ಆಗ್ರಹ ಕೇಳಿಬಂದಿತ್ತು. ಈಗ ಬ್ಯಾನ್ ವಿಚಾರವನ್ನು ಕೈಬಿಡಿ. ಇದೆಲ್ಲವೂ ಸೆಕೆಂಡರಿ ಆದ್ಯತೆಯಾಗಿದೆ. ಚಿತ್ರರಂಗದಲ್ಲಿ ಯಾವ ತೀರ್ಮಾನ ಕೈಗೊಳ್ತೀರಿ ಎಂದು ಕೇಳಿದಾಗ, ನಾವೆಲ್ಲರೂ ನಿಲುವು ಕೈಗೊಂಡು ನಗೆಪಾಟಲಿಗೀಡಾಗಿದ್ದೇನೆ. ಯಾರೋ ಒಬ್ಬರು ಹಲ್ಲೆ ಮಾಡಿದ್ದಾರೆಂದು ಬೇರೊಬ್ಬರ ಮೇಲೆ ಆರೋಪ ಮಾಡಿರುತ್ತಾರೆ. ಆಗ ನಾವು ಅವರ ಬಗ್ಗೆ ನಿಲುವು ಕೈಗೊಂಡ ನಂತರ ಹೊಡೆದಾಡಿಕೊಂಡ ಇಬ್ಬರೂ ಒಂದಾಗುವ ಮೂಲಕ ನಿಲುವು ಕೈಗೊಂಡವರನ್ನು ಜೋಕರ್ಸ್ ಮಾಡಿದ್ದಾರೆ. ಹೀಗಾಗಿ, ಯಾವುದೇ ನಿಲುವು ಬಗ್ಗೆ ಕೇಳಬೇಡಿ ಎಂದು ಹೇಳಿದರು.

ಪವಿತ್ರಾಗೌಡ ಮ್ಯಾನೇಜರ್ ಪೊಲೀಸ್ ವಶಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಗೆಳತಿ ಪವಿತ್ರಾಗೌಡರ ಮ್ಯಾನೇಜರ್ ದೇವರಾಜ್ ಎಂಬಾತನನ್ನು ಮೈಸೂರು ರಸ್ತೆಯಲ್ಲಿ ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಕೊಲೆ ನಡೆದ ದಿನ ಅಂದರೆ ರೇಣುಕಾಸ್ವಾಮಿ ಕೊಲೆಯಾದ ಶೆಡ್‌ಗೆ ಪವಿತ್ರಾ ಜತೆಗೆ ದೇವರಾಜ್ ಕೂಡ ಹೋಗಿದ್ದ ಎನ್ನಲಾಗಿದ್ದು, ಇದೇ ಕಾರಣಕ್ಕೆ ದೇವರಾಜ್‌ನನ್ನು ಪೊಲೀಸರು ವಶ ಪಡೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಪವಿತ್ರಾಗೌಡ ಮನೆಯಲ್ಲಿ ಪೊಲೀಸರಿಂದ ಮಹಜರು: ಅಂತೆಯೇ ಪವಿತ್ರಾ ಗೌಡ ಮನೆಯಲ್ಲಿ ಪೊಲೀಸರು ಮಹಜರು ನಡೆಸಿದ್ದು, ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ ನಂತರ ಪವಿತ್ರಾಗೌಡ ನೇರವಾಗಿ ತಮ್ಮ ಮನೆಗೆ ಹೋಗಿದ್ದರು. ರೇಣುಕಾಸ್ವಾಮಿ ಮೇಲೆ ಮೊದಲು ಹಲ್ಲೆ ನಡೆಸಿದ್ದೇ ಪವಿತ್ರಾಗೌಡ ಎನ್ನಲಾಗಿದೆ. ಪವಿತ್ರಾಗೌಡ ನೋಡುತ್ತಿದ್ದಂತೆ ರೇಣುಕಾಸ್ವಾಮಿ ಪವಿತ್ರಾ ಕಾಲಿಗೆ ಬಿದ್ದು ತಪ್ಪಾಯ್ತು ಅಂತ ಕ್ಷಮೆ ಕೇಳಿದ್ದನಂತೆ. ಸದ್ಯ ಪವಿತ್ರಾ ಮನೆಯಲ್ಲಿ ಪೊಲೀಸರು ಆ ದಿನ ಪವಿತ್ರಾ ಧರಿಸಿದ್ದ ಬಟ್ಟೆ ಹಾಗೂ ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ್ದ ಚಪ್ಪಲಿಯನ್ನ ಸೀಜ್ ಮಾಡಲಿದ್ದಾರೆ. ಪ್ರಕರಣದಲ್ಲಿ ಪವಿತ್ರಾ ಚಪ್ಪಲಿ ಕೂಡ ಮಹತ್ವದ ಸಾಕ್ಷ್ಯವಾಗಲಿದೆ ಎನ್ನಲಾಗಿದೆ.

ತನಿಖಾ ತಂಡಕ್ಕೆ ಮತ್ತೆ ಇನ್‌ಸ್ಪೆಕ್ಟರ್ ಗಿರೀಶ್ ನಾಯ್ಕ್ ಸೇರ್ಪಡೆ


ಬೆಂಗಳೂರು: ದರ್ಶನ್ ಮತ್ತು ಗ್ಯಾಂಗ್‌ನಿಂದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ತಂಡಕ್ಕೆ ಮತ್ತೆ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ಸೇರ್ಪಡೆಗೊಂಡಿದ್ದಾರೆ. ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ದರ್ಶನ್‌ನನ್ನು ಮೈಸೂರಿನಿಂದ ಕರೆತಂದಿದ್ದರು. ಗಿರೀಶ್ ನಾಯ್ಕ್ ಮೊದಲಿಗೆ ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖಾಧಿಕಾರಿಯಾಗಿದ್ದರು. ಚುನಾವಣೆ ನಿಮಿತ್ತ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಗಿರೀಶ್ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಇದೇ ವೇಳೆ ದರ್ಶನ್ ಗ್ಯಾಂಗ್‌ನಿಂದ ರೇಣುಕಾಸ್ವಾಮಿ ಮರ್ಡರ್ ನಡೆದಿದೆ. ನಂತರ ಮತ್ತೆ ಗಿರೀಶ್ ನಾಯ್ಕ್ ಸಿ.ಕೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿದ್ದರು. ಆ ಬಳಿಕ ಎಸಿಪಿ ಚಂದನ್ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ಆರೋಪಿಗಳ ಹೆಚ್ಚಿನ ವಿಚಾರಣೆ ಅಗತ್ಯತೆ ಹಿನ್ನೆಲೆ ಮತ್ತೆ ಗಿರೀಶ್ ನಾಯ್ಕ್ ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಪವಿತ್ರಾಗೌಡ ಮನೆಯಲ್ಲಿ ಪೊಲೀಸರ ಶೋಧ; ಹಲ್ಲೆ ನಡೆಸಿದ ಚಪ್ಪಲಿ ವಶ

ಬೆಂಗಳೂರು, ಜೂ.16– ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ತೀವ್ರಗೊಂಡಿದೆ. ನಟ ದರ್ಶನ್ ಹಾಗೂ ಗ್ಯಾಂಗ್ ನಡೆಸಿದ ಕೊಲೆ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಪೊಲೀಸರು ಇದೀಗ ಎ1 ಆರೋಪಿ ಪವಿತ್ರಾ ಗೌಡ ಮನೆಯಲ್ಲಿ ಸಾಕ್ಷ್ಯಕ್ಕಾಗಿ ತೀವ್ರ ಶೋಧ ನಡೆಸಿದ್ದಾರೆ. ರೇಣುಕಾಸ್ವಾಮಿ ಮೇಲೆ ಪವಿತ್ರಾಗೌಡ ಚಪ್ಪಲಿಯಲ್ಲಿ ಹಲ್ಲೆ ನಡೆಸಿದ್ದರು. ಹಲ್ಲೆಗೆ ಬಳಸಿದ್ದ ಚಪ್ಪಲಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಇದರ ಜೊತೆಗೆ ಕೆಲ ಮಹತ್ವದ ಸಾಕ್ಷ್ಯಗಳನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

2 ಗಂಟೆಗೂ ಹೆಚ್ಚು ಕಾಲ ಪೊಲೀಸರು ಪವಿತ್ರಾಗೌಡ ಮನೆ ಶೋಧ ನಡೆಸಿದ್ದಾರೆ. ಹಲವು ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡಿರುವ ವಸ್ತುಗಳ ಕುರಿತು ಸಂಪೂರ್ಣ ಮಾಹಿತಿ ಲಭ್ಯವಾಗಿಲ್ಲ. ಶೋಧ ಕಾರ್ಯ ಮುಗಿಸಿದ ಪೊಲೀಸರು ಇದೀಗ ಪವಿತ್ರಾಗೌಡಳನ್ನು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ.

ಆನೆ ಸಾವು ತಡೆಯಲು ಏನು ಕ್ರಮಕೈಗೊಂಡಿದ್ದೀರಿ?: ಕೇಂದ್ರ–ರಾಜ್ಯಕ್ಕೆ ಕರ್ನಾಟಕ ಹೈಕೋರ್ಟ್ ನೋಟಿಸ್



ಬೆಂಗಳೂರು, ಜೂ.16– ರಾಜ್ಯದಲ್ಲಿ ವಿದ್ಯುತ್ ಸ್ಪರ್ಶ ಹಾಗೂ ಅಸ್ವಾಭಾವಿಕ ಕಾರಣಗಳಿಂದ ಆನೆ ಸೇರಿದಂತೆ ವನ್ಯಜೀವಿಗಳು ಸಾವನ್ನಪ್ಪುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದರ ಬಗ್ಗೆ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿರುವ ಹೈಕೋರ್ಟ್, ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.

ಪತ್ರಿಕೆಯೊಂದರಲ್ಲಿ ಪ್ರಕಟವಾದ ವರದಿಯ ಆಧರಿಸಿ ಶುಕ್ರವಾರ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಅವರ ನೇತೃತ್ವದ ವಿಭಾಗೀಯ ಪೀಠ ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡಿತು. ಅರ್ಜಿಯಲ್ಲಿ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯನ್ನು ಪ್ರತಿವಾದಿಯನ್ನಾಗಿ ನೋಟಿಸ್ ಜಾರಿ ಮಾಡಿತು.

ಆನೆ ಸೇರಿ ವನ್ಯಜೀವಿಗಳ ಅಸ್ವಾಭಾವಿಕ ಸಾವುಗಳನ್ನು ತಡೆಯುವುದು ಮತ್ತು ಅವುಗಳಿಗೆ ರಕ್ಷಣೆಯನ್ನು ಒದಗಿಸುವ ಕುರಿತು ಕೈಗೊಂಡಿರುವ ಕ್ರಮಗಳೇನು? ಇತ್ತೀಚೆಗೆ ಬೆಳಕಿಗೆ ಬಂದ ಆನೆಗಳ ಸತತ ಸಾವುಗಳನ್ನು ತಡೆಯುವುದಕ್ಕೆ ಕೈಗೊಂಡಿರುವ ಕ್ರಮಗಳೇನು? ಈ ರೀತಿಯ ಘಟನೆಗಳನ್ನು ತಡೆಯಲು ಅರಣ್ಯ ಇಲಾಖೆ ಅಧಿಕಾರಿಗಳು ಅಳವಡಿಸಿಕೊಂಡಿರುವ ಕಾರ್ಯವಿಧಾನಗಳು ಯಾವುವು? ಈ ರೀತಿಯ ಸಾವುಗಳಿಗೆ ಯಾವ ರೀತಿ ಅಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿಪಡಿಸಲಾಗುತ್ತದೆ? ಎಂಬ ಬಗ್ಗೆ ಮುಂದಿನ ವಿಚಾರಣೆ ವೇಳೆ ಉತ್ತರ ನೀಡಬೇಕು ಎಂದು ಪ್ರತಿವಾದಿ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಜು.1ಕ್ಕೆ ಮುಂದೂಡಿತು.

ಅಶ್ವತ್ಥಾಮ ಎಂಬ ಆನೆ ಮೈಸೂರಿನಲ್ಲಿ ಸಾವಿಗೀಡಾಗಿದೆ. ಚಿಕ್ಕಮಗಳೂರಿನಲ್ಲಿ ಮತ್ತೊಂದು ಆನೆ ಹಾಗೂ ಮಡಿಕೇರಿಯಲ್ಲಿ ಎರಡು ಆನೆಗಳು ಸಾವಿಗೀಡಾಗಿವೆ. ರಾಜ್ಯದ ವನ್ಯಜೀವಿ ಧಾಮಗಳು ಸೇರಿದಂತೆ ಅನೇಕ ಭಾಗಗಳಲ್ಲಿ ಆನೆಗಳು ಸೇರಿದಂತೆ ಇತರೆ ವನ್ಯಜೀವಿಗಳು ವಿದ್ಯುತ್ ಸ್ಪರ್ಶ ಅಥವಾ ಅಸ್ವಾಭಾವಿಕ ರೀತಿಯಲ್ಲಿ ಸಾವನ್ನಪ್ಪುತ್ತಿವೆ. ಇದು ಅತ್ಯಂತ ಗಂಭೀರ ಮತ್ತು ಆತಂಕದ ವಿಚಾರ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಯಾವುದೇ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳದಿರುವುದರಿಂದಲೇ ಇಂತಹ ಪ್ರಕರಣಗಳು ಪದೇ–ಪದೆ ಮರುಕಳಿಸುತ್ತಿವೆ ಎಂಬುದಾಗಿ ಮಾಧ್ಯಮಗಳ ವರದಿಯಲ್ಲಿ ಉಲ್ಲೇಖವಾಗಿದೆ. ವನ್ಯಜೀವಿಧಾಮ ಮತ್ತು ರಕ್ಷಿತಾರಣ್ಯಗಳು ಮಾತ್ರವಲ್ಲದೆ ಇತರೆ ಭಾಗಗಳಲ್ಲಿಯೂ ಆನೆಗಳು ಸೇರಿದಂತೆ ವನ್ಯಜೀವಿಗಳ ರಕ್ಷಣೆ ಮಾಡಬೇಕಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಕಾಳಜಿ ವ್ಯಕ್ತಪಡಿಸಿದೆ.

ಫ್ರಿಡ್ಜ್‌ನಲ್ಲಿ ಗೋಮಾಂಸ ಪತ್ತೆ; 11 ಆರೋಪಿಗಳ ಮನೆಗಳನ್ನು ಕೆಡವಿದ ಮಧ್ಯಪ್ರದೇಶ ಪೊಲೀಸರು

ಮಂಡ್ಲಾ: ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗೋಮಾಂಸ ಮಾರಾಟದ ವಿರುದ್ಧದ ಕ್ರಮದ ಭಾಗವಾಗಿ ಮಧ್ಯಪ್ರದೇಶದ ಬುಡಕಟ್ಟು ಪ್ರಾಬಲ್ಯವಿರುವ ಮಾಂಡ್ಲಾದಲ್ಲಿ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿದ್ದ 11 ಮನೆಗಳನ್ನು ನೆಲಸಮಗೊಳಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ನೈನ್‌ಪುರದ ಭೈನ್‌ವಾಹಿ ಪ್ರದೇಶದಲ್ಲಿ ಮಾಂಸ ಮಾರಾಟಕ್ಕಾಗಿ ಹೆಚ್ಚಿನ ಸಂಖ್ಯೆಯ ಹಸುಗಳನ್ನು ಕೂಡಿಡಲಾಗಿದೆ ಎಂಬ ಸುಳಿವು ದೊರೆತ ನಂತರ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಂಡ್ಲಾ ಪೊಲೀಸ್ ವರಿಷ್ಠಾಧಿಕಾರಿ ರಜತ್ ಸಕ್ಲೇಚಾ ಸುದ್ದಿ ಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

ಪೊಲೀಸರ ತಂಡ ಸ್ಥಳಕ್ಕೆ ಧಾವಿಸಿದಾಗ ಆರೋಪಿಗಳ ಹಿತ್ತಲಿನಲ್ಲಿ ಕಟ್ಟಿಹಾಕಲಾಗಿದ್ದ 150 ಹಸುಗಳು ಪತ್ತೆಯಾಗಿವೆ. ಎಲ್ಲ 11 ಆರೋಪಿಗಳ ಮನೆಗಳಲ್ಲಿನ ರೆಫ್ರಿಜರೇಟರ್‌ಗಳಿಂದ ಗೋಮಾಂಸವನ್ನು ವಶಪಡಿಸಿಕೊಳ್ಳಲಾಗಿದೆ. ಕೊಠಡಿಯೊಂದರಲ್ಲಿ ಹಸುಗಳ ಕೊಬ್ಬು, ಚರ್ಮ ಮತ್ತು ಮೂಳೆಗಳನ್ನು ಇಟ್ಟಿರುವುದು ಸಹ ಪತ್ತೆಯಾಗಿದೆ ಎಂದು ಅವರು ಹೇಳಿದರು.

ಶುಕ್ರವಾರ ರಾತ್ರಿ ಹಸುಗಳು ಮತ್ತು ದನದ ಮಾಂಸವನ್ನು ವಶಪಡಿಸಿಕೊಂಡ ನಂತರ ಎಫ್‌ಐಆರ್ ದಾಖಲಿಸಲಾಗಿದೆ. ಓರ್ವ ಆರೋಪಿಯನ್ನು ಬಂಧಿಸಲಾಗಿದ್ದು, ಉಳಿದ 10 ಮಂದಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಹೇಳಿದರು.

ಸದ್ಯ ವಶಕ್ಕೆ ಪಡೆದಿರುವ 150 ಹಸುಗಳನ್ನು ಗೋಶಾಲೆಗೆ ಕಳುಹಿಸಲಾಗಿದೆ. ಭೈನಸ್ವಾಹಿ ಪ್ರದೇಶವು ಕೆಲವು ಸಮಯದಿಂದ ಹಸು ಕಳ್ಳಸಾಗಣೆಯ ಕೇಂದ್ರವಾಗಿತ್ತು. ಮಧ್ಯ ಪ್ರದೇಶದಲ್ಲಿ ಗೋಹತ್ಯೆ ಮಾಡುವುದು ಅಪರಾಧವಾಗಿದ್ದು, ಏಳು ವರ್ಷಗಳ ಜೈಲು ಶಿಕ್ಷೆಗೆ ಅರ್ಹವಾಗಿದೆ' ಎಂದು ಸಕ್ಲೇಚಾ ತಿಳಿಸಿದರು.

ಪುಸ್ತಕ ಓದುವ ಹವ್ಯಾಸದಿಂದ ಜೀವನದಲ್ಲಿ ನೆಮ್ಮದಿ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಮತ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ದಾಸೋಹ ಸಂಸ್ಥೆ ಆಯೋಜಿಸಿದ್ದ ಲೇಖಕಿ ಪದ್ಮಾ ಆನಂದ್ ಅವರ 'ತಂಗಾಳಿಯಲ್ಲಿ ವಾಕಿಂಗ್' ಹಾಗೂ 'ಬದುಕು ಬಿಂಬ' ಕೃತಿಯನ್ನು ಹಿರಿಯ ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬಿಡುಗಡೆ ಮಾಡಿದರು.

ಮೈಸೂರು,ಜೂ.16(ಎಂಟಿವೈ)– ಪುಸ್ತಕ ಓದುವ ಹವ್ಯಾಸವನ್ನು ಮೈಗೂಡಿಸಿಕೊಂಡರೆ ಜೀವನದಲ್ಲಿ ನೆಮ್ಮದಿ ಕಾಣಬಹುದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ದಾಸೋಹ ಸಂಸ್ಥೆ ಆಯೋಜಿಸಿದ್ದ ಲೇಖಕಿ ಪದ್ಮಾ ಆನಂದ್ ಅವರ 'ತಂಗಾಳಿಯಲ್ಲಿ ವಾಕಿಂಗ್' ಹಾಗೂ 'ಬದುಕು ಬಿಂಬ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರಾಂತಿಕಾರಿ ಬಸವಣ್ಣರ ಕಲ್ಯಾಣ ಕಾರ್ಯದಂತೆ ಮೈಸೂರು ಸಾಹಿತ್ಯ ದಾಸೋಹ ಸಂಸ್ಥೆಯ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುವುದು ಶ್ಲಾಘನೀಯ. ಎಲ್ಲರ ಜೀವನದಲ್ಲಿ ಪುಸ್ತಕ ಪ್ರೇಮ ಬೆಳೆಸಿಕೊಳ್ಳುವ ಅನಿವಾರ್ಯವಾಗಿದೆ. ಬದುಕಿನಲ್ಲಿ ನೆಮ್ಮದಿ ಕಾಣಬೇಕಾದರೆ ಪುಸ್ತಕ ಓದುವ ಗೀಳು(ಹವ್ಯಾಸ) ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

40–50 ವಯೋಮಾನದ ಕೆಲವರು ತಮ್ಮ ಬದುಕನ್ನು ದೂಡಲು ಮಾತ್ರೆ ಖರೀದಿಸುವ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ ಆರಂಭದಿಂದಲೂ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಂಡಿದ್ದರೆ ಶಾಂತಿಯುತ ಮನಸ್ಥಿತಿಯೊಂದಿಗೆ ಜೀವನ ಸಾಗಿಸಬಹುದು. ಆರೋಗ್ಯ ಕಾಪಾಡಿಕೊಳ್ಳಲು ಪುಸ್ತಕ ಸಹಕಾರಿಯಾಗಿವೆ. ಮನಸ್ಥಿತಿ ಪ್ರಬುದ್ಧವಾಗಿದ್ದರೆ ಉತ್ತಮ ಜೀವನ ನಡೆಸಲು ಸಾಧ್ಯ. ಅದಕ್ಕಾಗಿ ಪುಸ್ತಕ ಓದುವ ಅಭಿರುಚಿ ಬೆಳೆಸಿಕೊಳ್ಳಬೇಕು ಎಂದರು. ಪುಸ್ತಕ ಓದುವಂತೆ ಸಲಹೆ ನೀಡಿದರೆ ಕೆಲವರು ಸಮಯ ಸಿಗುವುದಿಲ್ಲ ಎಂಬ ಸಬೂಬು ಹೇಳುತ್ತಿರುತ್ತಾರೆ. ಆದರೆ ಬೇರೆ ಎಲ್ಲಾ ಕೆಲಸವನ್ನೂ ಮಾಡುತ್ತಲೇ ಇರುತ್ತಾರೆ. ಪುಸ್ತಕ ಓದಲು ಮಾತ್ರ ಸಮಯವಿಲ್ಲ ಎನ್ನುವ ಸಿದ್ಧ ಉತ್ತರವನ್ನು ಇಟ್ಟುಕೊಂಡಿರುತ್ತಾರೆ. ಈ ಕಾರಣದಿಂದ ವಯಸ್ಸಾದ ಮೇಲೆ ಮನಶಾಂತಿಗಾಗಿ ತೀರ್ಥಯಾತ್ರೆಗೆ ಹೋಗುವ ಪರಿಪಾಠ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಎಲ್ಲರೂ ತಮಗೆ ಇಷ್ಟವಾದ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಅರ್ಥವಾಗದಿದ್ದರೂ ಪುಸ್ತಕ ಓದುವುದನ್ನು ನಿಲ್ಲಿಸಬಾರದು. ಈ ಹವ್ಯಾಸ ಮುಂದುವರೆಸಿದರೆ ಕ್ಲಿಷ್ಟಕರ ಸಮಯದಲ್ಲಿ ಸಾಹಿತ್ಯ ಬದುಕು ನಮ್ಮನ್ನು ಕಾಪಾಡುತ್ತದೆ. ದುಬಾರಿ ವಸ್ತುಗಳನ್ನು ಖರೀದಿಸುವ ಜನ ಪುಸ್ತಕ ಖರೀದಿಸುವುದಿಲ್ಲ. ಹೀಗಾಗಿ ಪುಸ್ತಕ ಖರೀದಿಸುವ ಗುಣ ಬೆಳೆಸಿಕೊಳ್ಳಬೇಕು ಎಂದರಲ್ಲದೆ, 'ಮಂಕುತಿಮ್ಮನ ಕಗ್ಗ' ಕೃತಿ ಇಂದಿಗೂ ಪ್ರಸ್ತುತವಾಗಿದೆ. ಈ ಕೃತಿಗೆ ಮೊದಲ ಜ್ಞಾನಪೀಠ ಪ್ರಶಸ್ತಿ ಬರಬೇಕಾಗಿತ್ತು. ಆದರೆ, ಆಯ್ಕೆ ಸಮಿತಿ ಯಾವ ಕಾರಣಕ್ಕೆ ಈ ಕೃತಿಯನ್ನು ಪರಿಗಣಿಸಿಲ್ಲ ಎಂಬ ಪ್ರಶ್ನೆ ಕಾಡುತ್ತಿದೆ ಎಂದು ವಿಷಾದಿಸಿದರು.

ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ 'ತಂಗಾಳಿಯಲ್ಲಿ ವಾಕಿಂಗ್' ಹಾಗೂ 'ಬದುಕು ಬಿಂಬ' ಕೃತಿಯನ್ನು ಹಿರಿಯ ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬಿಡುಗಡೆ ಮಾಡಿದರು. ಕೃತಿ ಕುರಿತು ಪ್ರಾಧ್ಯಾಪಕ ಡಾ.ಮೈಸೂರು ಕೃಷ್ಣಮೂರ್ತಿ, ಶಿಕ್ಷಣ ಇಲಾಖೆಯ ಸಹಾಯಕ ಸಮಗ್ರ ಯೋಜನಾಧಿಕಾರಿ ಜಿ.ವೆಂಕಟಾಚಲ ಮಾತನಾಡಿದರು. ಮುಖ್ಯ ಅತಿಥಿಯಾಗಿ ಚುಕ್ಕಿ ಚಿತ್ರಕಲಾವಿದ ಮೋಹನ್ ವೆರ್ಣೇಕರ್ ಹಿರಿಯ ಲೇಖಕಿ ಕೆರೋಡಿ ಎಂ.ಲೋಲಾಕ್ಷಿ, ಮೈಸೂರು ಸಾಹಿತ್ಯ ದಾಸೋಹದ ಸಂಸ್ಥಾಪಕರಾದ ಪದ್ಮಾ ಆನಂದ್ ಹಾಗೂ ಎಂ.ಆರ್.ಆನಂದ್ ಉಪಸ್ಥಿತರಿದ್ದರು.

ಬಕ್ರೀದ್ ಆಚರಣೆ: ಗೋವು, ಒಂಟೆಗಳ ವಧೆ ನಿಷೇಧ

ಮೈಸೂರು, ಜೂ.16– ಜೂ.17ರಂದು ರಾಜ್ಯಾದ್ಯಂತ ಬಕ್ರೀದ್ ಹಬ್ಬದ ಆಚರಣೆ ಸಂದರ್ಭದಲ್ಲಿ ಅಕ್ರಮವಾಗಿ ಪ್ರಾಣಿಗಳ ಸಾಗಣೆ, ಅನಧಿಕೃತ ಗೋವು ಹಾಗೂ ಒಂಟೆಗಳ ವಧೆಯನ್ನು ತಡೆಗಟ್ಟುವುದು, ಕಸಾಯಿಖಾನೆಗಳು ಮತ್ತು ಮಾಂಸದ ಅಂಗಡಿಗಳಿಗೆ ನಿಯಂತ್ರಕ ಅನುಸರಣೆ ಜಾರಿಗೊಳಿಸಲು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ ಎಂದು ಪಶುಪಾಲನಾ ಇಲಾಖೆಯ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 17 ಜೂನ್ 2024

ಮುಗಿಯದ ಕೊಡವ ಹೆರಿಟೇಜ್ ಯೋಜನೆ

ಐನ್‌ಮನೆ ಮಾದರಿಯ ಕಟ್ಟಡ ತಲೆ ಎತ್ತಿದರೂ ಪೂರ್ಣಗೊಳ್ಳದ ಕಾಮಗಾರಿ



ಕರವಲೆ ಬಾಡಗದಲ್ಲಿ ನಿರ್ಮಾಣವಾಗುತ್ತಿರುವ ಕೊಡವ ಹೆರಿಟೇಜ್ ಸೆಂಟರ್‌ನ ಪೂರ್ಣಗೊಳ್ಳದ ಕಾಮಗಾರಿ.

ದೇಶದ ಬೇರೆಲ್ಲೂ ಕಂಡು ಬಾರದ ಕೊಡವ ಜನಾಂಗದ ಸಾಂಸ್ಕೃತಿಕ ಶ್ರೀಮಂತಿಕೆ, ಜೀವನ ಶೈಲಿಯನ್ನು ಪರಿಚಯಿಸುವ ನಿಟ್ಟಿನಲ್ಲಿ ಕೊಡವ ಹೆರಿಟೇಜ್ ಸೆಂಟರ್ ಸ್ಥಾಪಿಸಲು ಕೊಡಗು ಮೂಲದವರಾದ ನಿವೃತ್ತ ಐಎಎಸ್ ಅಧಿಕಾರಿ ರತಿ ವಿನಯ್ ಝಾ ಯೋಜನೆ ಅವರು ರೂಪಿಸಿ ಅದನ್ನು ಅನುಷ್ಠಾನಕ್ಕೆ ತುದಿದ್ದರು. ಐನ್‌ಮನೆ, ಸ್ಮಾರಕಗಳು, ಕೊಡವರು, ಸಂಸ್ಕೃತಿ, ಪದ್ಧತಿ, ಪರಂಪರೆಯ ಅನಾವರಣ, ಉಡುಗೆ-ತೊಡುಗೆ, ಆಭರಣಗಳ ಪ್ರದರ್ಶನ, ಕೊಡಗಿನ ಪ್ರಮುಖ ಬೆಳೆ ಹಾಗೂ ಕೊಡವರ ಪೂರ್ವಿಕರು ಬಳಸುತ್ತಿದ್ದ ಪಾರಂಪರಿಕ ವಸ್ತುಗಳ ವಸ್ತು ಸಂಗ್ರಹಾಲಯ ಹಾಗೂ ಇನ್ನಿತರ ವ್ಯವಸ್ಥೆಗಳೊಂದಿಗೆ ಕೊಡವರ ಸಂಸ್ಕೃತಿ ಬಗ್ಗೆ ಪೂರಕ ಮಾಹಿತಿ ನೀಡುವುದು ಈ ಯೋಜನೆಯ ಉದ್ದೇಶವಾಗಿತ್ತು.

ಕೊಡವ ಹೆರಿಟೇಜ್ ಕಟ್ಟಡ ಕಾಮಗಾರಿ ಮುಗಿದಿದೆ. ಆದರೆ, ಒಳ ವಿನ್ಯಾಸ ಸೇರಿದಂತೆ ಇನ್ನಿತರ ಕೆಲಸಗಳಿಗೆ 4.95 ಕೋಟಿ ರೂ. ಹೆಚ್ಚುವರಿ ಅನುದಾನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಪಾರ್ಕಿಂಗ್, ರಸ್ತೆ, ವಿದ್ಯುತ್ ವ್ಯವಸ್ಥೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅನುದಾನ ಬಿಡುಗಡೆಯಾದ ತಕ್ಷಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.


–ಅನಿತಾ ಭಾಸ್ಕರ್, ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ

ಮಡಿಕೇರಿ, ಜೂ.16–ಕೊಡವ ಜನಾಂಗದ ವಿಶಿಷ್ಟ ಸಂಸ್ಕೃತಿ, ಆಚಾರ-ವಿಚಾರ, ಪದ್ಧತಿ, ಪರಂಪರೆಗಳು, ಐನ್‌ಮನೆ ಕಲ್ಪನೆ ಮತ್ತಿತರ ವಿಚಾರಗಳನ್ನು ದೇಶ-ವಿದೇಶಗಳ ಪ್ರವಾಸಿಗರಿಗೆ ಪರಿಚಯಿಸುವ ನಿಟ್ಟಿನಲ್ಲಿ ರೂಪಿಸಲಾದ 'ಕೊಡವ ಹೆರಿಟೇಜ್' ಯೋಜನೆ ಇಂದಿಗೂ ಮುಕ್ತಾಯದ ಹಂತ ಕಂಡಿಲ್ಲ.

2 ಐನ್‌ಮನೆ ಮಾದರಿಯ ಕಟ್ಟಡಗಳು ತಲೆ ಎತ್ತಿದರೂ ಅಂತಿಮ ಹಂತದ ಕಾಮಗಾರಿ ಪೂರ್ಣಗೊಳ್ಳದೆ ಕೊಡವ ಪಾರಂಪರಿಕ ತಾಣ ಯಾರ ದರ್ಶನಕ್ಕೂ ಸಿಗದೆ ಅನಾಥ ಸ್ಥಿತಿಯಲ್ಲಿದೆ.

ನಗರದ ಹೊರವಲಯದ ಕರವಲೆ ಬಾಡಗ ಗ್ರಾಮದಲ್ಲಿ ಒಟ್ಟು 5 ಎಕರೆ ಪ್ರದೇಶದಲ್ಲಿ ಉದ್ದೇಶಿತ ಕೊಡವ ಹೆರಿಟೇಜ್ ಸೆಂಟರ್ ನಿರ್ಮಿಸಲು 2009-10ರಲ್ಲಿ ಯೋಜನೆ ಮಂಜೂರಾತಿ ಪಡೆದುಕೊಂಡಿತ್ತು. 2011ರಲ್ಲಿ ಕಾಮಗಾರಿ ಆರಂಭಗೊಂಡು 14 ವರ್ಷ ಸಮೀಪಿಸುತ್ತಾ ಬಂದರು ಕೂಡ ಇಂದಿಗೂ ಅಂತಿಮ ಹಂತದ ಕಾಮಗಾರಿ ಪೂರ್ಣವಾಗದೆ ಆಡಳಿತ ವ್ಯವಸ್ಥೆಯನ್ನು ಅಣಕಿಸುತ್ತಿದೆ.

ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ ಸಂಬಂಧ 3,30,45,110 ರೂ. ಕಾಮಗಾರಿಗೆ ಅನುಮೋದನೆ ದೊರೆತು ಸದ್ಯಕ್ಕೆ 2 ಐನ್ ಮನೆಗಳ ಕೆಲಸ, ಪ್ರವೇಶ ದ್ವಾರ, ಅಡುಗೆ ಕೊಠಡಿ, ಮೆಟ್ಟಿಲುಗಳು, ಗ್ರಂಥಾಲಯ, ರಂಗ ಮಂದಿರ, ವಿದ್ಯುದೀಕರಣ, ಕಿಟಕಿ, ಬಾಗಿಲುಗಳ ಕೆಲಸ ಸೇರಿದಂತೆ ಮತ್ತಿತರ ಕಾಮಗಾರಿಗಳು ಮುಕ್ತಾಯವಾಗಿವೆ. ಪ್ರಮುಖವಾಗಿ ಕೆಂಪು ಕಲ್ಲಿನ ಗೋಡೆಗಳಿಗೆ ಪಾಲಿಷಿಂಗ್ ಆಗಬೇಕಿದೆ. ಕಟ್ಟಡ ಮುಂಭಾಗ ಗೇಟ್ ಮತ್ತು ಕಾಂಪೌಂಡ್ ನಿರ್ಮಿಸಬೇಕಿದೆ. ಮೆಟ್ಟಿಲುಗಳಿಗೆ ರೇಲಿಂಗ್ಸ್ ಮತ್ತು ಫ್ಲೋರಿಂಗ್ ಮಾಡಬೇಕಿದ್ದು, ರಂಗಮಂದಿರಕ್ಕೆ ಚಾವಣಿ ಅಳವಡಿಕೆ ಹಾಗೂ ಇತರ ಕೆಲಸಗಳು ಬಾಕಿ ಇವೆ. ಇದರೊಂದಿಗೆ ರಸ್ತೆ ಪಾರ್ಕಿಂಗ್ ವ್ಯವಸ್ಥೆ, ವಿದ್ಯುತ್, ನೀರು ಸೇರಿದಂತೆ ಇನ್ನಿತರ ಮೂಲಸೌಲಭ್ಯ ಕಲ್ಪಿಸಬೇಕಾಗಿದೆ.



ಆರಂಭದಲ್ಲೇ ವಿಘ್ನ: ನಿರ್ಮಾಣ ಹಂತದಿಂದಲೂ ಹಲವು ತಾಂತ್ರಿಕ ಸಮಸ್ಯೆ, ಪ್ರಕೃತಿ ವಿಕೋಪ, ಲಾಕ್‌ಡೌನ್, ಕಳಪೆ ಕಾಮಗಾರಿ, ಗುತ್ತಿಗೆದಾರರ ಬದಲಾವಣೆ ಮತ್ತಿತರ ವಿಚಾರಗಳು ಕೊಡವ ಹೆರಿಟೇಜ್ ಸೆಂಟರ್ ಪಾಲಿಗೆ ಶಾಪವಾಗಿ ಪರಿಣಮಿಸಿದ್ದವು. ಜೊತೆಯಲ್ಲೇ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಕೆಲಸ ವಿಳಂಬವಾಗುತ್ತಲೇ ಸಾಗುತ್ತಿದೆ. ಇದೀಗ ಕಾಮಗಾರಿಗೆ ಹೆಚ್ಚುವರಿಯಾಗಿ 4.95 ಕೋಟಿ ರೂ. ಅವಶ್ಯಕತೆ ಇದ್ದು, ಪ್ರವಾಸೋದ್ಯಮ ಇಲಾಖೆ ಅನುದಾನ ಕೋರಿ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸಿದೆ.

ಅನುದಾನ ನಿರೀಕ್ಷೆ: ಕಾಮಗಾರಿ ಮುಕ್ತಾಯಕ್ಕೆ ಅವಶ್ಯಕತೆ ಇರುವ 4.95 ಅನುದಾನಕ್ಕೆ ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ.ಪಾಟೀಲ್ ಗಮನಕ್ಕೆ ತಂದಿದೆ. ಈಗಾಗಲೇ ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಮೂಲಕ ಯೋಜನೆಯ ಕಾರ್ಯಗತಕ್ಕೆ ಇಲಾಖೆ ಪ್ರಯತ್ನ ನಡೆಸುತ್ತಿದ್ದು, ಅನುದಾನ ಕೋರಿ ಪತ್ರ ಬರೆದಿದೆ. ಕೆಟಿವಿಜಿಯಲ್ಲಿ ಅನುದಾನದ ಲಭ್ಯತೆಯೂ ಇದ್ದು, ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆ ನಿರೀಕ್ಷೆಯಲ್ಲಿದೆ.

ಸಂಸದ ಯದುವೀರ್‌ಗೆ ನೆನಪಿನ ಕಾಣಿಕೆ



ಬಿಜೆಪಿ ಕಾರ್ಯಕರ್ತರ ಸಮಾರಂಭದಲ್ಲಿ ಕುಂಡ್ಯೋಳಂಡ ಕುಟುಂಬಸ್ಥರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಿದರು.

ನಾಪೋಕ್ಲು: ಸಮೀಪದ ಹಳೇ ತಾಲೂಕಿನ ಶ್ರೀ ಭಗವತಿ ದೇವಾಲಯದ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಬಿಜೆಪಿ ಶಕ್ತಿ ಕೇಂದ್ರದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಮಾರಂಭದಲ್ಲಿ ಕುಂಡ್ಯೋಳಂಡ ಕುಟುಂಬಸ್ಥರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು.

ಕುಂಡ್ಯೋಳಂಡ ಕೊಡವ ಕೌಟುಂಬಿಕ ಹಾಕಿ ಉತ್ಸವ-2024 ಗಿನ್ನಿಸ್ ದಾಖಲೆ ಮಾಡಿದ್ದು, ಈ ಉತ್ಸವದಲ್ಲಿ ಒಡೆಯರು ಭಾಗವಹಿಸಿದ್ದರು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಕಾರಣ ಅವರನ್ನು ಸನ್ಮಾನಿಸಲು ಸಾಧ್ಯವಾಗಿರಲಿಲ್ಲ ಆದ್ದರಿಂದ ಬಿಜೆಪಿ ಕಾರ್ಯಕರ್ತರ ಕಾರ್ಯಕ್ರಮದಲ್ಲಿ ಯದುವೀರ್ ಅವರಿಗೆ ಕುಂಡ್ಯೋಳಂಡ ಕುಟುಂಬಸ್ಥರ ಪರವಾಗಿ ಹಾಕಿ ಕಾರ್ನಿವಲ್ ಸಮಿತಿ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಖಜಾಂಚಿ ವಿಶು ಪೂವಯ್ಯ, ಕಾರ್ಯದರ್ಶಿ ಬಿ.ಪಿನ್.ವಿಜಯ ಮುತ್ತಣ್ಣ ಬೋಪಣ್ಣ ಅಭಿನಂದಿಸಿದರು.

ಈ ಸಂದರ್ಭ ಎಂಎಲ್ಸಿ ಮಂಡೆಪಂಡ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ. ಬೋಪಯ್ಯ, ನಾಪಂಡ ರವಿ ಕಾಳಪ್ಪ ಬಿದ್ದಾಟಂಡ ರಮೇಶ್ ಚಂಗಪ್ಪ ನಾಗೇಶ್ ಕುಂದಲ್ಪಾಡಿ, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ರೀನಾ ಪ್ರಕಾಶ್, ಯಮುನಾ ಚಂಗಪ್ಪ, ಕುಲ್ಲೇಟಿರ ಗುರುವಪ್ಪ, ಕೆಟೋಳಿರ ಹರೀಶ್ ಪೂವಯ್ಯ, ಶಿವಚಾಳಿಯಂಡ ಜಗದೀಶ್, ಬಿ.ಎಂ. ಪ್ರತೀಪ ಇನ್ನಿತರರು ಉಪಸ್ಥಿತರಿದ್ದರು.

ಕೆಂಗಪ್ಪ ಮಾಸ್ಟರ್ ನಿಧನ



ಕುಶಾಲನಗರ: ಮೂಲತಃ ತೊರೆನೂರು ಗ್ರಾಮದ ಅರಕಲಗೂಡು ತಾಲೂಕಿನ ಕಡುವಿನಹೊಸಳ್ಳಿಯಲ್ಲಿ ನೆಲೆಸಿದ್ದ ನಿವೃತ್ತ ಶಿಕ್ಷಕ ಕೆಂಗಪ್ಪ ಮಾಸ್ಟರ್(92) ಭಾನುವಾರ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಕಡುವಿನಹೊಸಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಗಮನ ಸೆಳೆದ ಬೆಣ್ಣೆ ಹಣ್ಣಿನ ತಳಿಗಳು



ಚೆಟ್ಟಳ್ಳಿಯ ತೋಟಗಾರಿಕೆ ಕೇಂದ್ರದಲ್ಲಿ ಆಯೋಜಿಸಿದ್ದ ಕ್ಷೇತ್ರೋತ್ಸವದಲ್ಲಿ ವಿವಿಧ ತಳಿಯ ಬೆಣ್ಣೆ ಹಣ್ಣುಗಳನ್ನು ಪ್ರದರ್ಶಿಸಲಾಯಿತು.

ಮಡಿಕೇರಿ, ಜೂ.16– ಚೆಟ್ಟಳ್ಳಿಯ ತೋಟಗಾರಿಕೆ ಕೇಂದ್ರದಲ್ಲಿ ಆಯೋಜಿಸಿದ್ದ ಬೆಣ್ಣೆ ಹಣ್ಣಿನ ಕ್ಷೇತ್ರೋತ್ಸವ ಕೃಷಿಕರು ಮತ್ತು ಬೆಳೆಗಾರರ ಗಮನ ಸೆಳೆಯಿತು.

ಅರ್ಕಾ ಸುಪ್ರೀಂ, ಅರ್ಕಾ ರವಿ, ಹ್ಯಾಸ್, ಸ್ಪಿಂಗ್ ಗ್ರೀನ್, ಪಿಂಕ್ ಕಾರ್ಟನ್, ಫಿರುಟೆ ಸೇರಿದಂತೆ 100ಕ್ಕೂ ಅಧಿಕ ಬೆಣ್ಣೆ ಹಣ್ಣಿನ ತಳಿಗಳ ಪ್ರದರ್ಶನ ಕ್ಷೇತ್ರೋತ್ಸವ ಹಾಗೂ ಮೇಳದಲ್ಲಿ ಕೃಷಿಕರ ಗಮನ ಸೆಳೆದವು. ಅವಕಾಡೋನಿಂದ ತಯಾರಿಸಿದ್ದ ಬೆಣ್ಣೆ ಹಣ್ಣಿನ ಪರೋಟ, ಕೇಕ್, ಸ್ಯಾಂಡ್ ವಿಚ್, ಮಫಿಂನ್ಸ್, ಹಲ್ವ, ಸಾಲಡ್, ಐಸ್‌ಕ್ರೀಂ ಕ್ಷೇತ್ರೋತ್ಸವಕ್ಕೆ ಮತ್ತಷ್ಟು ಮೆರುಗು ತಂದಿತು.

ಭಾರತೀಯ ಕೃಷಿ ವಿಜ್ಞಾನ ಕೇಂದ್ರ ಗೋಣಿಕೊಪ್ಪ ಕಾಫಿ ಮಂಡಳಿ, ಅಪ್ಪಂಗಾಳದ ಸಂಬಾರ ಮಂಡಳಿ, ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲೆಯ ವಿವಿಧೆಡೆಗಳ 250ಕ್ಕೂ ಅಧಿಕ ಬೆಳೆಗಾರರು ಭಾಗವಹಿಸಿದ್ದರು.

ಬೆಣ್ಣೆ ಹಣ್ಣಿನ ಕ್ಷೇತ್ರೋತ್ಸವಕಕ್ಕೆ ಚಾಲನೆ ನೀಡಿದ ಚೆಟ್ಟಳ್ಳಿಯ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ ಹಾಗೂ ಸಂಶೋಧನಾ ಸಂಸ್ಥೆಯ ಡಾ.ಕೆಎನ್.ವರ್ಮಾ ಮಾತನಾಡಿ, ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ ವಿವಿಧ ತಳಿಗಳ ಅಭಿವೃದ್ಧಿ ಕಾರ್ಯ ನಡೆಸುತ್ತಿದೆ. ವಿವಿಧ ಹಣ್ಣಿನ ತಳಿಗಳ ಸಂಗ್ರಹ ಚೆಟ್ಟಳ್ಳಿಯ ತೋಟಗಾರಿಕೆ ಕೇಂದ್ರದಲ್ಲಿರುವುದು ಹೆಗ್ಗಳಿಕೆಯಾಗಿದೆ ಎಂದರು.

ಸಂಸ್ಥೆಯ ಉಪಮಹಾನಿರ್ದೇಶಕ ಡಾ. ಎಸ್.ಕೆ.ಸಿಂಗ್ ಮಾತನಾಡಿ, ಮುಂದಿನ ಕೆಲ ವರ್ಷಗಳಲ್ಲಿ ಹಣ್ಣಿನ ವಿವಿಧ ತಳಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹಣ್ಣಿನ ಬೆಳೆಗಳನ್ನು ಬೆಳೆಸಲಾಗುವುದು ಎಂದು ಹೇಳಿದರು.

ಕಾಫಿ ಮಂಡಳಿಯ ಮಾಜಿ ಉಪಾಧ್ಯಕ್ಷ ಹಾಗೂ ಪ್ರಗತಿಪರ ಕೃಷಿಕ ಬೋಸ್ ಮಂದಣ್ಣ ಮಾತನಾಡಿ, ಹಿಂದೆ ಹೆಸರುಗಳಿಸಿದ್ದ 'ಕೂರ್ಗ್ ಮ್ಯಾಂಡರೀನ್' ಎಂಬ ಕೊಡಗಿನ ಕಿತ್ತಳೆ ತಳಿ ಇಂದು ಮರೆಯಾಗುತ್ತಿದೆ. ತೋಟಗಾರಿಕಾ ಕೇಂದ್ರದ ಮೂಲಕ ಕೊಡಗಿನ ತಳಿಯ ಕಿತ್ತಳೆಯನ್ನು ಅಭಿವೃದ್ಧಿಪಡಿಸುವ ಕಾರ್ಯ ಆಗಬೇಕಿದೆ ಎಂದು ತಿಳಿಸಿದರು.

ಇದೇ ವೇಳೆ ಡಾ.ಕೆ.ಎನ್.ವರ್ಮಾ, ಎಸ್.ಕೆ. ಸಿಂಗ್, ಡಾ.ಪ್ರಕಾಶ್ ಪಾಟೀಲ್, ಬೋಸ್ ಮಂದಣ್ಣ ಅವರನ್ನು ಸನ್ಮಾನಿಸಲಾಯಿತು. ಪ್ರದರ್ಶನಕ್ಕೆ ಇಡಲಾಗಿದ್ದ ಬೆಣ್ಣೆ ಹಣ್ಣಿನ ವಿವಿಧ ಉತ್ತಮ ತಳಿ ಹಾಗೂ ಖಾದ್ಯಗಳಿಗೆ ಬಹುಮಾನ ನೀಡಲಾಯಿತು.

ಬಸ್ ಡಿಕ್ಕಿಯಾಗಿ ದ್ವಿಚಕ್ರ ವಾಹನ ಸವಾರ ಸಾವು

ಸುಂಟಿಕೊಪ್ಪ: ದ್ವಿಚಕ್ರ ವಾಹನಕ್ಕೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸುಂಟಿಕೊಪ್ಪ ಸಮೀಪದ ಗದ್ದೆಹಳ್ಳದಲ್ಲಿ ಭಾನುವಾರ ಸಂಭವಿಸಿದೆ.

ಗದ್ದೆಹಳ್ಳದ ಪಟ್ಟಿಮನೆ ನಿವಾಸಿ ಲೋಕೇಶ್ (60) ಮೃತ ವ್ಯಕ್ತಿ. ಈತ ದ್ವಿಚಕ್ರ ವಾಹನದಲ್ಲಿ ಸುಂಟಿಕೊಪ್ಪದಿಂದ ಗದ್ದೆಹಳ್ಳದ ಕಡೆಗೆ ಬರುತ್ತಿದ್ದರು. ಇ ವೇಳೆ ವಿರಾಜಪೇಟೆಗೆ ಹೋಗುತ್ತಿದ್ದ ಖಾಸಗಿ ಬಸ್ ಗದ್ದೆಹಳ್ಳದ ಎಸ್‌ಎಸ್ ಇಂಟರ್ ನ್ಯಾಷನಲ್ ಹಾಲ್ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ಲೋಕೇಶ್‌ಗೆ ತಲೆಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ದೃಶ್ಯ ರಸ್ತೆ ಪಕ್ಕದ ಕಟ್ಟಡದ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿದೆ.

ಸ್ಥಳ ಪರಿಶೀಲಿಸಿದ ಸುಂಟಿಕೊಪ್ಪ ಠಾಣೆ ಪೊಲೀಸರು ಬಸ್ ಮತ್ತು ಚಾಲಕನನ್ನು ವಶಕ್ಕೆ ಪಡೆದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೇಂದ್ರದ ಸೇವೆಗೆ ನಿಯೋಜನೆ



ಮಡಿಕೇರಿ: ಮೂಲತಃ ಬಾಳೆಲೆ ಗ್ರಾಮದವರಾದ ಹಿಂದೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಕ್ಯಾಪ್ಟನ್ ಮಲಚೀರ ಅಯ್ಯಪ್ಪ ಅವರು ಕೇಂದ್ರ ಸಿವಿಲ್ ಏವಿಯೇಷನ್ ಇಲಾಖೆಯ ಅಧೀನದ ಬ್ಯೂರೋ ಆಫ್ ಸಿವಿಲ್ ಏವಿಯೇಷನ್ ಸೆಕ್ಯೂರಿಟಿಯ ಜಂಟಿ ಹಾಗೂ ವಿಭಾಗೀಯ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ.

ಅಯ್ಯಪ್ಪ (2014 ಬ್ಯಾಚ್ ಐಪಿಎಸ್) ಕೊಡಗಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿದ ಬಳಿಕ ಕರ್ನಾಟಕ ಲೋಕಾಯುಕ್ತದ ಎಸ್‌ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಇದೀಗ ಕೇಂದ್ರದ ಸೇವೆಗೆ ಇವರನ್ನು ನಿಯೋಜಿಸಲಾಗಿದೆ.

ದನಗಳನ್ನು ಬೀದಿಯಲ್ಲಿ ಬಿಟ್ಟರೆ ಕ್ರಮ

ಮಡಿಕೇರಿ: ನಗರಸಭೆ ವ್ಯಾಪ್ತಿ ಬಿಡಾಡಿ ದನಗಳು ಬೇಕಾಬಿಟ್ಟಿ ಓಡಾಡುತ್ತಿದ್ದು, ಇದರಿಂದ ರಸ್ತೆ ಅಪಘಾತ ಸಂಭವಿಸುವ ಸಾಧ್ಯತೆ ಇರುವುದರಿಂದ ಅವುಗಳ ಮಾಲೀಕರಿಗೆ ದಂಡ ವಿಧಿಸುವುದರೊಂದಿಗೆ ಕ್ರಮಜರುಗಿಸಲು ನಗರಸಭೆ ಮುಂದಾಗಿದೆ.

ಲೋಕಾಯುಕ್ತ ಡಿವೈಎಸ್‌ಪಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಕ್ರಮವಹಿಸುವಂತೆ ಸೂಚಿಸಿದ್ದು, ಅದರಂತೆ ನಗರಸಭೆ ವ್ಯಾಪ್ತಿಯ ಎಲ್ಲಾ ಬಿಡಾಡಿ ದನಗಳ ಮಾಲೀಕರು ದನಗಳನ್ನು ಸಾರ್ವಜನಿಕ ಸ್ಥಳ, ದಾರಿಯಲ್ಲಿ ಬಿಟ್ಟು ವ್ಯಕ್ತಿಗಳಿಗೆ ಅಪಾಯ ಮತ್ತು ಅಡ್ಡಿಪಡಿಸಿದ್ದಲ್ಲಿ ಪ್ರಕರಣ ದಾಖಲಿಸಿ, ಶಿಕ್ಷೆಗೊಳಪಡಿಸಲಾಗುವುದು ಎಂದು ನಗರಸಭೆ ಪೌರಾಯುಕ್ತ ವಿಜಯ್ ಎಚ್ಚರಿಸಿದ್ದಾರೆ.

ಜೂ.19, ಚೌಡೇಶ್ವರಿ ಅಮ್ಮನವರ ವಾರ್ಷಿಕ ಜಯಂತಿ

ಕುಶಾಲನಗರ: ಇಲ್ಲಿನ ರಥ ಬೀದಿಯ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಜೂ.19ರಂದು ಚೌಡೇಶ್ವರಿ ಅಮ್ಮನವರ ವಾರ್ಷಿಕ ಜಯಂತಿ ಅದ್ಧೂರಿಯಾಗಿ ನಡೆಯಲಿದೆ.

ಚೌಡೇಶ್ವರಿ ದೇವಸ್ಥಾನ ಸಮಿತಿ ಹಾಗೂ ದೇವಾಂಗ ಸಂಘದ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಅಮ್ಮನವರ ಉತ್ಸವ ನಡೆಯಲಿದ್ದು, ಅಂದು ಮುಂಜಾನೆ 5 ಗಂಟೆಗೆ ಗಣಪತಿ ಹೋಮ, ಧ್ವಜಾರೋಹಣ, ನಂತರ ಕಾವೇರಿ ನದಿಯಲ್ಲಿ ಗಂಗೆಪೂಜೆ ನೆರವೇರಿಸಲಾಗುವುದು. ನಂತರ ಮಹಿಳೆಯರು ಪೂರ್ಣಕುಂಭ ಕಳಶ ಹೊತ್ತು ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ದೇವಾಲಯಕ್ಕೆ ಆಗಮಿಸಲಿದ್ದಾರೆ. ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನಕ್ಕೆ ಬರಲಿದೆ. ದೇವಿಗೆ ಪೂಜೆ ಹಾಗೂ ಮಹಾಮಂಗಳಾತಿ, ಪ್ರಸಾದ ವಿನಿಯೋಗ ನಡೆಯಲ್ಲಿದೆ ಎಂದು ದೇವಾಂಗ ಸಂಘದ ಅಧ್ಯಕ್ಷ ಡಿ.ವಿ. ರಾಜೇಶ್ ತಿಳಿಸಿದ್ದಾರೆ.

ಪಾಳ್ಯದಲ್ಲಿ ಅಕ್ರಮ ಕಟ್ಟಡ ತೆರವು

ಗ್ರಾಮದಲ್ಲಿ ಸರ್ಕಾರಿ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದ ಸರ್ಕಾರಿ ನೌಕರ



ಪಾಳ್ಯ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡವನ್ನು ಕಂದಾಯಾಧಿಕಾರಿಗಳು ತೆರವುಗೊಳಿಸಿದರು.

ಕೊಳ್ಳೇಗಾಲ, ಜೂ.16–ತಾಲೂಕಿನ ಪಾಳ್ಯ ಗ್ರಾಮದಲ್ಲಿ ಸರ್ಕಾರಿ ನೌಕರರೊಬ್ಬರು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡವನ್ನು ಕಂದಾಯಾಧಿಕಾರಿಗಳು ತೆರವುಗೊಳಿಸಿದರು.

ಚಾಮರಾಜನಗರ ತಾಲೂಕು ಕೆಂಪನಪುರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸಿದ್ದನಾಯಕ ಹಾಗೂ ಮಗ ಸಿದ್ದಪ್ಪಸ್ವಾಮಿ ಅವರು ಪಾಳ್ಯ ಗ್ರಾಮದ ಸರ್ವೆ ನಂಬರ್ 130ರ 1.42 ಎಕರೆ ಸರ್ಕಾರಿ ಬಂಡಿದಾರಿಯನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಕಟ್ಟಡ ನಿರ್ಮಿಸಿದ್ದರು. ಲೋಕಾಯುಕ್ತ ತನಿಖೆ ವೇಳೆ ಇದು ಅಕ್ರಮ ಕಟ್ಟಡವೆಂದು ಸಾಬೀತಾಗಿತ್ತು. ನಂತರ ಲೋಕಾಯುಕ್ತರು ಕಂದಾಯಾಧಿಕಾರಿಗಳಿಗೆ ಕಟ್ಟಡ ತೆರವುಗೊಳಿಸುವಂತೆ ನಿರ್ದೇಶನ ನೀಡಿದ್ದರು. ಆದೇಶದ ಅನ್ವಯ ಕಂದಾಯಾಧಿಕಾರಿಗಳು ಜೆಸಿಬಿ ಮೂಲಕ ಅಕ್ರಮ ಕಟ್ಟಡ ತೆರವುಗೊಳಿಸಿ, ಇದು ಸರ್ಕಾರಿ ಜಾಗ ಎಂಬ ನಾಮಫಲಕ ಹಾಕಿದ್ದಾರೆ.

ಗ್ರಾಪಂ ಕಾರ್ಯದರ್ಶಿ ಸಿದ್ದನಾಯಕ ಹಾಗೂ ಮಗ ಸಿದ್ದಪ್ಪಸ್ವಾಮಿ ಅಕ್ರಮವಾಗಿ 14 ಚದರ ಅಡಿಯಲ್ಲಿ ಆರ್‌ಸಿಸಿ ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದು, ಈ ಕಟ್ಟಡವನ್ನು ತೆರವುಗೊಳಿಸಬೇಕು ಎಂದು ಈ ಬಗ್ಗೆ ಪಾಳ್ಯ ಗ್ರಾಮದ ರಂಗಸ್ವಾಮಿ ಅವರು 2019ರಲ್ಲಿ ದೂರು ನೀಡಿದ್ದರು. ಅಲ್ಲದೆ ಲೋಕಾಯುಕ್ತ ತನಿಖೆ ವೇಳೆ ರಂಗಸ್ವಾಮಿ ಸರ್ಕಾರಿ ಜಾಗವೆಂದು ದಾಖಲೆ ಒದಗಿಸಿಕೊಟ್ಟಿದ್ದರು.

ಈ ಹಿನ್ನೆಲೆಯಲ್ಲಿ ಲೋಕಾಯುಕ್ತರು ತನಿಖೆ ನಡೆಸಿ ಇದು ಸರ್ಕಾರದ ಜಾಗವಾಗಿದ್ದು, ಕಟ್ಟಡವನ್ನು ಅಕ್ರಮವಾಗಿ ನಿರ್ಮಿಸಲಾಗಿದೆ. ಇದನ್ನು ತೆರವುಗೊಳಿಸಿ ಎಂದು ತಹಸೀಲ್ದಾರ್ ಅವರಿಗೆ ಆದೇಶಿಸಿದ್ದರು. ಲೋಕಾಯುಕ್ತರ ಆದೇಶದ ಹಿನ್ನೆಲೆಯಲ್ಲಿ ಕಂದಾಯಾಧಿಕಾರಿಗಳು ತೆರವುಗೊಳಿಸಿದರು.

ಈ ಸಂದರ್ಭದಲ್ಲಿ ಪಾಳ್ಯ ನಾಡಕಚೇರಿಯ ಉಪತಹಸೀಲ್ದಾರ್ ವಿಜಯ್ ಕುಮಾರ್, ಆರ್‌ಐ ರಂಗಸ್ವಾಮಿ, ತಾಲೂಕು ಸರ್ವೆಯರ್ ಹೇಮರಾಜು, ಗ್ರಾಮಾಂತರ ಪೊಲೀಸ್ ಠಾಣೆ ಪೊಲೀಸರು ಹಾಜರಿದ್ದರು.

ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲಿಸುವುದಿಲ್ಲ



ಕೊಳ್ಳೇಗಾಲ ತಾಪಂ ಸಭಾಂಗಣದಲ್ಲಿ ಮೇಲ್ವಿಚಾರಕಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಸ್ಮಾರ್ಟ್‌ಫೋನ್ ವಿತರಿಸಿದರು.

ಕೊಳ್ಳೇಗಾಲ: ಯಾವುದೇ ಕಾರಣಕ್ಕೂ ಸರ್ಕಾರ ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಮೇಲ್ವಿಚಾರಕಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಮಾರ್ಟ್‌ಫೋನ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ಗ್ಯಾರಂಟಿ ಯೋಜನೆ ಎಲ್ಲಾ ವರ್ಗದವರಿಗೂ ತಲುಪುತ್ತಿದೆ. ಹಾಗಾಗಿ ಸರ್ಕಾರ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದು, ಯಾವುದೇ ಕಾರಣಕ್ಕೂ ಈ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಚಂದ್ರು, ಉಪವಿಭಾಗಾಧಿಕಾರಿ ಮಹೇಶ್, ತಾಪಂ ಇಓ ಶ್ರೀನಿವಾಸ್, ಸಿಡಿಪಿಓ ನಂಜಮ್ಮಣಿ ಇನ್ನಿತರಿದ್ದರು.

ವಿವೇಕನಗರದಲ್ಲಿ ಸಾಯಿಬಾಬಾ ಮಂದಿರ ಲೋಕಾರ್ಪಣೆ





ವಿವೇಕ ನಗರದ ಶಿರಡಿ ಸಾಯಿಬಾಬಾ ಮಂದಿರದ ಲೋಕಾರ್ಪಣೆ ಅಂಗವಾಗಿ ಭಾನುವಾರ ಹೋಮ ನಡೆಸಲಾಯಿತು.

ಚಾಮರಾಜನಗರ, ಜೂ.16–ನಗರದ ಫಾರೆಸ್ಟ್ ನರ್ಸರಿ ಹತ್ತಿರದ ವಿವೇಕ ನಗರದಲ್ಲಿ ಶ್ರೀ ಶಿರಡಿ ಸಾಯಿಬಾಬಾ ಧಾರ್ಮಿಕ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರವನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಮಂದಿರ ಉದ್ಘಾಟನೆ ಪ್ರಯುಕ್ತ ಮೂರು ದಿನ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ ನಡೆದವು. ಮೂರು ದಿನವೂ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಕೊನೆಯ ದಿನವಾದ ಭಾನುವಾರ 15 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಸಹಪಂಕ್ತಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಭಾನುವಾರ ಬೆಳಗ್ಗೆ ಮಹಾರಾಷ್ಟ್ರದ ಶಿರಡಿ ಸಾಯಿಬಾಬಾ ಮಂದಿರದ ಪ್ರಧಾನ ಅರ್ಚಕ ಪಂಡಿತ್ ಅಮಿತ್ ದೇಶ್‌ಮುಖ್ ಅವರು ಹೋಮ, ಹವನ ದೇವತೆ ಕಾರ್ಯ ನೆರವೇರಿಸಿದರು. ಬಳಿಕ ತಿ.ನರಸೀಪುರದ ತ್ರಿವೇಣಿ ಸಂಗಮದಿಂದ ಜಲ ತಂದು ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಾಯಿತು. ನಂತರ ಸಾಯಿಬಾಬಾ ಮಂದಿರಕ್ಕೆ ಕೊಂಡೊಯ್ದು ಸಾಯಿಬಾಬಾರ ವಿಗ್ರಹ ಮತ್ತು ಧ್ಯಾನಾಂಜನೇಯ ಸ್ವಾಮಿ ಪ್ರಾಣ ಪ್ರತಿಷ್ಠಾಪನೆ, ಮಂದಿರದ ಮಹಾಕುಂಭಾಭಿಷೇಕ, ಮಂಗಳಾರತಿ ನಡೆಸಲಾಯಿತು.

ಮೂರು ದಿನಗಳಿಂದ ಚಾಮರಾಜನಗರ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಭಕ್ತರು ಭೇಟಿ ನೀಡಿ ದೇವರ ದರ್ಶನ ಪಡೆದರು. ಶನಿವಾರ ಗಣಪತಿ, ನವಗ್ರಹ, ವಾಸ್ತು, ಪ್ರಾಯಶ್ಚಿತ ಹೋಮ, ಸಂಜೆ 4ಕ್ಕೆ ಪ್ರಧಾನ, ಶಾಂತಿ, ಪುಷ್ಟಿ, ಕುಟೀರ ಹೋಮ, ಪೂಜೆ, ಆರತಿ ನಡೆದವು.

ಬಳಿಕ ಹರಿಕಥಾ ವಿದುಷಿ ಡಾ.ಮಾಲಿನಿ ಅವರಿಂದ ಸಾಯಿಬಾಬಾರ ವೈಭವದ ಕಥಾವಲೋಕನ ನಡೆಯಿತು. ಈ ವೇಳೆ ದೇವಸ್ಥಾನ ಆಡಳಿತ ಮಂಡಳಿಯವರು ಮಾತನಾಡಿ, ರಾಜಸ್ಥಾನದ ಜೈಪುರದಿಂದ ಸಾಯಿಬಾಬಾ ಅವರ ಮೂಲ ವಿಗ್ರಹ ತಯಾರಿಸಲಾಗಿದ್ದು, ಇದು ರಾಜ್ಯದಲ್ಲೇ ಮೊದಲು ಆಗಿದೆ. ಅಲ್ಲದೇ ದೇವಸ್ಥಾನದಲ್ಲಿ ಅಯೋಧ್ಯೆಯಲ್ಲಿ ಹನುಮಂತನ ಮಾದರಿಯ ಧ್ಯಾನಾಂಜನೇಯಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಶಿರಡಿ ಸಾಯಿಬಾಬಾ ಧಾರ್ಮಿಕ ಮತ್ತು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಕೀಲ ಕೆ.ಬಾಲಸುಬ್ರಹ್ಮಣ್ಯಂ, ಕಾರ್ಯಾಧ್ಯಕ್ಷ ಎಸ್‌ಪಿಕೆ ಉಮೇಶ್, ಕಾರ್ಯದರ್ಶಿ ಆರ್.ರಾಜು, ಗೌರವಾಧ್ಯಕ್ಷ ಎಂ.ರಾಜು, ಸಹಕಾರ್ಯದರ್ಶಿ ಮುರುಗೇಶನ್, ಸದಸ್ಯರಾದ ವೇದಿ, ಶಕ್ತಿ, ಉತ್ತರಸ್ವಾಮಿ, ಲೋಕೇಶ್ ಎಸ್‌ಪಿಕೆ, ಸುಜನ್ ಟೈಲ್ಸ್ ರಾಮು ಮೊದಲಾದವರು ಭಾಗವಹಿಸಿದ್ದರು.

ಇಬ್ಬರು ಪೊಲೀಸರ ಅಮಾನತು

ಕೊಳ್ಳೇಗಾಲ, ಜೂ.16–ಅಶಿಸ್ತು ವರ್ತನೆ ಹಿನ್ನೆಲೆಯಲ್ಲಿ ಮಾಂಬಳ್ಳಿ ಠಾಣೆಯ ಇಬ್ಬರು ಪೊಲೀಸರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಾನತುಗೊಳಿಸಿದ್ದಾರೆ.

ಮಾಂಬಳ್ಳಿ ಪೊಲೀಸ್ ಠಾಣೆಯ ಮುಖ್ಯಪೇದೆ ನಟೇಶ್ ಹಾಗೂ ಪೇದೆ ಸೋಮ ಅಮಾನತುಗೊಂಡವರು.

ಕಾರಾಗೃಹದಲ್ಲಿರುವ ಆರೋಪಿ ಮಲ್ಲೇಶ್ ಅಲಿಯಾಸ್ ಪ್ರದೀಪ ಎಂಬಾತ ಹಿಂದೆ ಎಎಸ್ಐ ಶಿವರುದ್ರ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ. ನಂತರ ಈತನ ವಿರುದ್ಧ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಬಳಿಕ ಆರೋಪಿ ಮಲ್ಲೇಶ್ ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿತ್ತು

ನಂತರ ಚಾ.ನಗರ ಜಿಲ್ಲಾ ಕಾರಾಗೃಹಕ್ಕೆ ಆರೋಪಿ ಮಲ್ಲೇಶ್‌ನನ್ನು ಕಳುಹಿಸಲಾಗಿತ್ತು. ಈ ವೇಳೆ ಈ ಇಬ್ಬರು ಪೊಲೀಸರು ಕಾರಾಗೃಹ ಅಧಿಕಾರಿಗಳ ಅನುಮತಿ ಇಲ್ಲದೆ. ಅಶಿಸ್ತಿನಿಂದ ಕಾರಾಗೃಹಕ್ಕೆ ತೆರಳಿ, ಆರೋಪಿ ಜೊತೆ 1 ಗಂಟೆಗಳಿಗೂ ಹೆಚ್ಚು ಕಾಲ ಚರ್ಚಿಸಿದ್ದರು. ಈ ಹಿನ್ನೆಲೆಯಲ್ಲಿ ಅಮಾನತುಗೊಳಿಸಿ, ಆದೇಶಿಸಲಾಗಿದೆ.

ಕಾಡುಪ್ರಾಣಿ ಹಾವಳಿ ತಪ್ಪಿಸಲು ಮನವಿ ಸಲ್ಲಿಕೆ



ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಆಂಡಿಪಾಳ್ಯ ಗ್ರಾಮಸ್ಥರು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಜೂ.16–ಹನೂರು ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ತಪ್ಪಿಸಬೇಕು ಹಾಗೂ ಆಂಡಿಪಾಳ್ಯ ಭಾಗದ ಕಂದಕದಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ತೆರೆವುಗೊಳಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ಮೈಸೂರು ವಿಭಾಗೀಯ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು ನೇತೃತ್ವದಲ್ಲಿ ಗ್ರಾಮಸ್ಥರು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಆಂಡಿಪಾಳ್ಯ ಭಾಗದಲ್ಲಿ ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ರೈತರು ಕೃಷಿ ಮಾಡುತ್ತಿದ್ದು, ಇವರೆಲ್ಲರೂ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರಿದ್ದಾರೆ. ಇಲ್ಲಿ ಹೆಚ್ಚಾಗಿ ಆಲೂಗಡ್ಡೆ ಈರುಳ್ಳಿ, ಎಲೆಕೋಸು, ಬಾಳೆ, ಮುಸುಕಿನ ಜೋಳ ಹಾಗೂ ಇನ್ನಿತರ ಬೆಳೆ ಬೆಳೆಯಲಾಗುತ್ತಿದೆ. ಆದರೆ, ರಾತ್ರಿ ಕಾಡುಪ್ರಾಣಿಗಳು ಲಗ್ಗೆಇಟ್ಟು ಫಸಲನ್ನು ನಾಶಪಡಿಸುತ್ತಿವೆ. ಇದರಿಂದ ರೈತರು ನಷ್ಟ ಅನುಭವಿಸುವಂತಾಗಿದೆ. ಈ ಬಗ್ಗೆ ಲೊಕ್ಕನಹಳ್ಳಿ ವಲಯ ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಇತ್ತ ಗಮನಹರಿಸಿ ಕಾಡುಪ್ರಾಣಿಗಳು ಜಮೀನುಗಳಿಗೆ ಲಗ್ಗೆ ಇಡದಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ರೈತರಿಗೆ ಫಿನಿಕ್ಸ್ ಬ್ಯಾಟರಿಯನ್ನು ಉಚಿತವಾಗಿ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾಡಳಿತ ಭವನದ ಮುಂಭಾಗ ಗ್ರಾಮಸ್ಥರೊಂದಿಗೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ದಸಂಸ ಜಿಲ್ಲಾ ಸಂಚಾಲಕ ಆಲೂರು ನಾಗೇಂದ್ರ ತಾಲೂಕು ಅಧ್ಯಕ್ಷ ಮುರುಗೇಶ್, ಮುಖಂಡರಾದ ನಂಜುಂಡಸ್ವಾಮಿ, ಮಹದೇವಸ್ವಾಮಿ, ಸಿದ್ದರಾಜು ಮತ್ತಿತರರು ಹಾಜರಿದ್ದರು.

ಬಸ್ತಿಪುರದಲ್ಲಿ ಸಿದ್ದಪ್ಪಾಜಿ ಕೊಂಡೋತ್ಸವ



ಚಾಮರಾಜನಗರ, ಜೂ.16–ಪಟ್ಟಣದ ಬಸ್ತೀಪುರ ಬಡಾವಣೆಯಲ್ಲಿ ಕುರುಬನಕಟ್ಟೆ ಸಿದ್ದಪ್ಪಾಜಿ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಬಸ್ತೀಪುರ ಬಡಾವಣೆಯ ಸಿದ್ದಪ್ಪಾಜಿ ದೇವಸ್ಥಾನದ ಮುಂಭಾಗದಲ್ಲಿ ಕೊಂಡೋತ್ಸವ ಜರುಗಿತು. ಇದಕ್ಕೂ ಮುನ್ನ ಬಡಾವಣೆಯ ಹೊರವಲಯದ ಶನೇಶ್ವರ ದೇವಸ್ಥಾನದ ಬಳಿ ಕಂಡಾಯಗಳಿಗೆ ಹೂ ಹೊಂಬಾಳೆ ಧರಿಸಿ, ತಮಟೆ ಹಾಗೂ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಕುರುಬನಕಟ್ಟೆ ತಂಬಡಿಗಳಾದ ಮಹಾಲಿಂಗ, ಗಂಗಮಲ್ಲ, ಗಿರೀಶ, ನಿಂಗರಾಜು, ರಾಜಣ್ಣ, ಕುಮಾರ್ ಅವರು ಕಂಡಾಯಗಳನ್ನು ಹೆಗಲ ಮೇಲೆ ಹೊತ್ತು ತಂದು ದೇವಸ್ಥಾನದ ಮುಂದಿನ ಕೊಂಡ ಹಾಯ್ದರು. ಕೊಂಡಕ್ಕೆ ಕುರುಬನಕಟ್ಟೆ ಮಠಾಧ್ಯಕ್ಷರಾದ ವರುಣರಾಜೇ ಅರಸ್ ಪೂಜೆ ಸಲ್ಲಿಸಿ ಕೊಂಡೋತ್ಸವಕ್ಕೆ ಚಾಲನೆ ನೀಡಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ ಇನ್ನಿತರರು ಪೂಜೆ ಸಲ್ಲಿಸಿದರು.

ಮೈಸೂರು ಮಿತ್ರ

ಸೋಮವಾರ 17 ಜೂನ್ 2024

ಮೂಲ ಸೌಕರ್ಯ ವಂಚಿತ ಚಿಕ್ಕ ಅಂಗಡಿ ರಸ್ತೆ

ಸಮರ್ಪಕ ರಸ್ತೆ, ಚರಂಡಿ ನಿರ್ಮಾಣಕ್ಕೆ ಒತ್ತಾಯ

ತಿ.ನರಸೀಪುರ, ಜೂ.16– ಪಟ್ಟಣದ ಪ್ರಮುಖ ವಾಣಿಜ್ಯ ಕೇಂದ್ರವಾದ ಚಿಕ್ಕ ಅಂಗಡಿ ಬೀದಿಯಲ್ಲಿ ಸಮರ್ಪಕ ರಸ್ತೆ, ವಿದ್ಯುತ್ ದೀಪ, ಚರಂಡಿ ಸೇರಿದಂತೆ ಮೂಲ ಸೌಲಭ್ಯಗಳಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ.

ಪಟ್ಟಣದ ಅತೀ ಹೆಚ್ಚು ಜನನಿಬಿಡ ಪ್ರದೇಶಗಳಲ್ಲಿ ಚಿಕ್ಕ ಅಂಗಡಿ ಬೀದಿ ಪ್ರಮುಖವಾಗಿದ್ದು, ರಸ್ತೆ ತೀರಾ ಕಿರಿದಾಗಿರುವ ಕಾರಣ ಸಾರ್ವಜನಿಕರು ಹಾಗೂ ವಾಹನ ಸವಾರರ ಸಂಚಾರಕ್ಕೆ ಸಂಕಷ್ಟ ಎದುರಾಗಿದೆ. ಪುರಸಭೆ ಅವೈಜ್ಞಾನಿಕ ಕಾಮಗಾರಿಯಿಂದ ರಸ್ತೆಗೆ ಹಾಕಲಾಗಿದ್ದ ಕಾಂಕ್ರೀಟ್ ಕಿತ್ತು ಬಂದಿದ್ದು, ದೊಡ್ಡ ದೊಡ್ಡ ಕಂದಕಗಳು ನಿರ್ಮಾಣವಾಗಿವೆ. ಜೊತೆಗೆ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ ಪರಿಣಾಮ ಮಳೆ ಬಂದರೆ ಚರಂಡಿ ನೀರು ರಸ್ತೆಯಲ್ಲಿ ಹರಿದು ಹಳ್ಳ ಕೊಳ್ಳಗಳಲ್ಲಿ ನಿಲ್ಲುವುದರಿಂದ ತೀವ್ರ ಸಮಸ್ಯೆ ಎದುರಾಗಿದೆ.



ಚಿಕ್ಕ ಅಂಗಡಿ ರಸ್ತೆಗೆ ನಿತ್ಯ ಸಾವಿರಾರು ಮಂದಿ ಗ್ರಾಹಕರು ವ್ಯಾಪಾರಕ್ಕಾಗಿ ಆಗಮಿಸುತ್ತಾರೆ. ಅಲ್ಲದೇ ಈ ರಸ್ತೆಯಲ್ಲಿ ಚಿನ್ನ, ಬೆಳ್ಳಿ ಅಂಗಡಿ, ದಿನಸಿ ಅಂಗಡಿಗಳು ಹೆಚ್ಚಾಗಿರುವುದರಿಂದ ಯಾವಾಗಲೂ ಜನ ಸಂದಣಿ ಹೆಚ್ಚಿರುತ್ತದೆ. ಆದರೆ ಜನ ಸಂಖ್ಯೆಗೆ ಅನುಗುಣವಾದ ರಸ್ತೆ ನಿರ್ಮಾಣವಾಗಿಲ್ಲ. ಇಲ್ಲಿನ ಅಂಗಡಿಗಳ ಎದುರು ತರಕಾರಿ ಮಾರಾಟ ಮಾಡುವವರು ವ್ಯಾಪಾರ ಮಾಡುವುದರಿಂದ ರಸ್ತೆ ಮತ್ತಷ್ಟು ಇಕ್ಕಟ್ಟಾಗಿ ಸಾರ್ವಜನಿಕರಿಗೆ ತೊಂದರೆ ಎದುರಾಗಿದೆ. ರಸ್ತೆಯಲ್ಲಿ ತುಂಬಾ ಹಳ್ಳಗಳಿರುವುದರಿಂದ ವಾಹನ ಸವಾರರು ಬಿದ್ದು ಗಾಯಗೊಂಡಿರುವ ಹಲವು ನಿದರ್ಶನಗಳಿವೆ. ವಾರ್ಡ್ ಸದಸ್ಯರು ಸಮಸ್ಯೆ ಬಗೆಹರಿಸಲು ಮುಂದಾಗದ ಪರಿಣಾಮ ಪ್ರಮುಖ ವಾಣಿಜ್ಯ ಕೇಂದ್ರವಾದ ಚಿಕ್ಕಂಗಡಿ ಬೀದಿ ಮೂಲ ಸೌಕರ್ಯಗಳಿಂದ ವಂಚಿತವಾಗಿದೆ. ಅಲ್ಲದೇ ಇಲ್ಲಿನ ದಿನಸಿ ಅಂಗಡಿ, ಚಿನ್ನ, ಬೆಳ್ಳಿ ಅಂಗಡಿ ಮಾಲೀಕರು ರಸ್ತೆ ದುರಸ್ತಿ, ಚರಂಡಿ ನಿರ್ಮಿಸಿ ಕೊಡುವಂತೆ ಮಾಡಿದ್ದ ಮನವಿಗೆ ಪುರಸಭೆಯಿಂದ ಸ್ಪಂದಿಸಿಲ್ಲ. ಹೀಗಾಗಿ ತೀವ್ರ ಹದಗೆಟ್ಟು ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಯನ್ನು ಕೂಡಲೇ ದುರಸ್ತಿ ಪಡಿಸುವ ಮೂಲಕ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಕಲ್ಪಿಸಿಕೊಡಬೇಕು. ಅಲ್ಲದೇ ಚರಂಡಿ ನಿರ್ಮಾಣ ಮಾಡಬೇಕು ಎಂದು ಇಲ್ಲಿನ ವರ್ತಕರು ಒತ್ತಾಯಿಸಿದ್ದಾರೆ. ಈ ವೇಳೆ ಸುಂದರ್ ಜ್ಯೂಯಲರ್ಸ್‌ನ ನಾಗೇಂದ್ರ, ವಿಜಯ ಹಾಲ್ ಶ್ರೀಧರ್, ರಾಮಹಾಲ್ ಬಾಬು, ಪಾತ್ರೆ ಅಂಗಡಿ ಶೇಖರ್, ಪ್ರಕಾಶ್, ಜೋಷಿ, ಘನ್ ಶ್ಯಾಂ, ಮಂಜು, ಗೋಪಿ, ಚೆಲುವ, ವಿನಯ್ ಹಾಜರಿದ್ದರು.

ಸಾರ್ವಜನಿಕರಿಗೆ ತೊಂದರೆ

ಚಿಕ್ಕ ಅಂಗಡಿ ರಸ್ತೆಯನ್ನು ಕಳೆದ 10 ವರ್ಷಗಳಿಂದ ದುರಸ್ತಿ ಪಡಿಸಿಲ್ಲ. ರಸ್ತೆ ಗುಣಮಟ್ಟ ಸಹ ಕಳಪೆಯಾಗಿದೆ. ಮಳೆ ಬಂತೆಂದರೆ ರಸ್ತೆ ತುಂಬಾ ನೀರು ನಿಂತು ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತದೆ. ಕಿರಿದಾದ ರಸ್ತೆಯಲ್ಲಿ ಬೈಕ್‌ಗಳು ಸಂಚರಿಸಲು ಸಾಧ್ಯವಿಲ್ಲ.

-ಪಿ.ಗಿರೀಶ್, ರಾಮ ವಿಲಾಸ್ ಜವಳಿ ಅಂಗಡಿ ಮಾಲೀಕರು

ಕೂಡಲೇ ದುರಸ್ತಿ ಮಾಡಲಿ

ಪಟ್ಟಣದಲ್ಲೇ ಅತಿ ಹೆಚ್ಚಿನ ಅಂಗಡಿಗಳು ಪುರಸಭೆಯ 17 ಮತ್ತು 18ನೇ ವಾರ್ಡ್‌ನಲ್ಲಿವೆ. ರಸ್ತೆ ತೀವ್ರ ಹದಗೆಟ್ಟಿರುವುದರಿಂದ ಬೈಕ್ ಸವಾರರು ಸೇರಿದಂತೆ ನಡೆದು ಹೋಗುವ ಸಾರ್ವಜನಿಕರು ಎಡವಿ ಬಿದ್ದು ಗಾಯ ಮಾಡಿಕೊಂಡಿದ್ದಾರೆ. ಹಾಗಾಗಿ ಪುರಸಭೆಯವರು ಕೂಡಲೇ ರಸ್ತೆ ದುರಸ್ತಿ ಮಾಡಬೇಕು.

- ರಾಕೇಶ್, ನೀಲಂ ಜ್ಯೂಯಲರಿ ಮಾಲೀಕ

ಗಮನ ಹರಿಸುವೆ

ಚಿಕ್ಕ ಅಂಗಡಿ ಬೀದಿ ಸಮಸ್ಯೆ ಬಗ್ಗೆ ಅರಿವಿದೆ. ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಕಾಮಗಾರಿ ಸಾಧ್ಯವಾಗಿರಲಿಲ್ಲ. ಈಗ ನೀತಿ ಸಂಹಿತೆ ತೆರವಾಗಿದ್ದು, ಸಮಸ್ಯೆ ಬಗೆಹರಿಸುವತ್ತಾ ಗಮನ ಹರಿಸುತ್ತೇನೆ.

- ಶೋಭಾರಾಣಿ, ಪುರಸಭೆ ಸದಸ್ಯೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಹರೋಂ ಹರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಚಂದು ಚಾಂಪಿಯನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಹಾರಾಜ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಹಾರಾಜ (ತ)	4 ಪ್ರದರ್ಶನಗಳು
ಪ್ರಭಾ	
ಅಮೀನ (ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಟ್ ಔಟ್ 2(3ಡಿ) (ಇಂ): ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಚಂದು ಚಾಂಪಿಯನ್ (ಹಿಂ): ಸಂ.4.15ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.11ಕ್ಕೆ, ರಾ.7ಕ್ಕೆ, ಮುಂಜ್ಯಾ (ಹಿಂ): ಮ.2.15ಕ್ಕೆ, ಶಿವಮ್ಮ ಯರೆಹಂಚಿನಾಳ (ಕ): ಸಂ.4.40ಕ್ಕೆ, ಹರೋಂ ಹರ (ತೆ): ರಾ.10.15ಕ್ಕೆ.
ಸ್ಕ್ರೀನ್ 3	ಮುಂಜ್ಯಾ (ಹಿಂ): ಬೆ.10.40ಕ್ಕೆ, ಮಹಾರಾಜ (ತ): ಮ.1.15ಕ್ಕೆ, ಸಂ.4.20ಕ್ಕೆ, ಚೆಫ್ ಚಿದಂಬರ (ಕ): ರಾ.7.20ಕ್ಕೆ, ಡಿಎನ್‌ಎ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.10ಕ್ಕೆ, ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಟ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಚೆಫ್ ಚಿದಂಬರ (ಕ): ಬೆ.11.15ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಮ.1.30ಕ್ಕೆ, ಮ್ಯೂಸಿಕ್ ಶಾಪ್ ಮೂರ್ತಿ (ತೆ): ಮ.3.45ಕ್ಕೆ, ಹರೋಂ ಹರ (ತೆ): ಸಂ.6.15ಕ್ಕೆ, ಮಹಾರಾಜ (ತ): ರಾ.9.15ಕ್ಕೆ.
ಸ್ಕ್ರೀನ್ 2	ಇನ್‌ಸೈಟ್ ಔಟ್ (3ಡಿ)(ಇಂ): ಬೆ.11ಕ್ಕೆ, ಕೋಟಿ (ಕ): ಮ.1ಕ್ಕೆ, ಸಂ.4.15ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಲವ್ ಲಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.05ಕ್ಕೆ, ಸಂ.6.45ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ರಾ.9.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಚೆಫ್ ಚಿದಂಬರ (ಕ): ಮ.1.55ಕ್ಕೆ, ಲವ್ ಲಿ (ಕ): ಸಂ.4.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ರಾ.7.20ಕ್ಕೆ

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **4N6** (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹೈನುಗಾರಿಕೆಯಿಂದ ರೈತರ ಜೀವನಮಟ್ಟ ಸುಧಾರಿಸಿದೆ

ಬಿಎಂಸಿ ಕೇಂದ್ರ ಉದ್ಘಾಟಿಸಿ ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ



ಬೂದನೂರಲ್ಲಿ ಡೈರಿ ಕಟ್ಟಡ ಹಾಗೂ ಬಿಎಂಸಿ ಕೇಂದ್ರವನ್ನು ಶಾಸಕ ಅನಿಲ್ ಉದ್ಘಾಟಿದರು.

ಹೆಚ್.ಡಿ.ಕೋಟೆ, ಜೂ.16– ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆಯಿಂದ ರೈತರ ಜೀವನಮಟ್ಟ ಸ್ವಲ್ಪ ಸುಧಾರಿಸಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಬೂದನೂರು ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಹಾಗೂ ಬಿಎಂಸಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಬೆಳೆದ ಬೆಳೆಗಳು ಸಾಕಷ್ಟು ಹಾನಿಯಾದ ವೇಳೆ ಹೈನುಗಾರಿಕೆ ರೈತರ ಕೈ ಹಿಡಿದಿದ್ದರಿಂದ ಸ್ವಲ್ಪ ಸುಧಾರಿಸಿಕೊಂಡಿದ್ದಾರೆ. ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಲು ಉತ್ಪಾದಕರಿಗೆ 5 ರೂ. ಸಹಾಯಧನ ಹಾಗೂ ಪಶುಭಾಗ್ಯ ಯೋಜನೆಯಡಿ ನಾನಾ ಸವಲತ್ತುಗಳನ್ನು ನೀಡಿದ ಪರಿಣಾಮ ರೈತರು ಹೈನುಗಾರಿಕೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡು ಜೀವನೋಪಾಯ ಕಂಡುಕೊಳ್ಳಲು ಸಹಕಾರಿಯಾಗಿದೆ. ರೈತರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ರಾದ ಕೆ.ಈರೇಗೌಡ, ದಾಕ್ಷಾಯಿಣಿ, ಮೈಮುಲ್ ವ್ಯವಸ್ಥಾಪಕ ಆರಿಫ್ ಇಕ್ಬಾಲ್, ಚಕ್ಕೊಡನಹಳ್ಳಿ ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ, ಸಿಪಿಐ ಶಬ್ಬೀರ್ ಹುಸೇನ್, ಮುಖಂಡರಾದ ಕೆ.ಜಿ. ಮಹೇಶ್, ಕುಮಾರ್, ಉಡ ನಾಗರಾಜ್, ಚಲುವರಾಜು, ಬೂದನೂರು ಮಹದೇವ ಸೇರಿದಂತೆ ಇನ್ನಿತರರಿದ್ದರು.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಉದ್ಘಾಟನೆ

ನಂಜನಗೂಡು, ಜು.16– ಮಹಿಳಾ ಸಬಲೀಕರಣ ಹಿತದೃಷ್ಟಿಯಿಂದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಹೆಚ್ಚಾಗಬೇಕಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ಕೋರೆಹುಂಡಿ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘಕ್ಕೆ ಸರ್ಕಾರದಿಂದ ಸಾಲ ಸೌಲಭ್ಯದ ಜೊತೆಗೆ ಸಬ್ಸಿಡಿ ಸೇರಿದಂತೆ ಅನೇಕ ಸವಲತ್ತುಗಳನ್ನು ಸರ್ಕಾರ ಒದಗಿಸಲಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಸಂಘದ ಸದಸ್ಯರು ಆರ್ಥಿಕವಾಗಿ ಮುಂದೆ ಬರಬೇಕು. ಡೈರಿ ಹೆಚ್ಚಿನ ಅಭಿವೃದ್ಧಿಗೆ ಎಲ್ಲರೂ ಗುಣಮಟ್ಟದ ಹಾಲನ್ನು ಪೂರೈಕೆ ಮಾಡಿ ಎಂದು ಕರೆ ನೀಡಿದರು.

ಈ ಸಂಘಕ್ಕೆ ಕಟ್ಟಡ ನಿರ್ಮಿಸಿ ಕೊಡುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ. ಜೊತೆಗೆ ಕನಕ ಸಮುದಾಯ ಭವನ, ಸ್ಮಶಾನ ಅಭಿವೃದ್ಧಿಗೊಳಿಸುವಂತೆಯೂ ಮನವಿ ಮಾಡಿದ್ದಾರೆ. ಅತೀ ಶೀಘ್ರ ಅನುದಾನ ತಂದು ಕಟ್ಟಡ ನಿರ್ಮಿಸಿ ಕೊಡಲು ಬದ್ಧನಾಗಿದ್ದೇನೆ ಎಂದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್ ಮಾತನಾಡಿ, ಮೈಮುಲ್‌ನಿಂದ ಸಹಕಾರ ಸಂಘಗಳಿಗೆ ರಿಯಾಯಿತಿ ದರ ಜೊತೆಗೆ ಸಬ್ಸಿಡಿ ಸೌಲಭ್ಯದೊಂದಿಗೆ ಹಸುವಿಗೆ ಹಾಸುವ ಮ್ಯಾಟ್, ಹಾಲು ಕರೆಯುವ ಯಂತ್ರ, ಮೇವು ಕಟಾವು ಯಂತ್ರ ಸೇರಿದಂತೆ ಅನೇಕ ಸೌಲಭ್ಯಗಳು ದೊರಕಲಿವೆ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು.




ಕೋರೆಹುಂಡಿಯಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ವ್ಯವಸಾಯದ ಜೊತೆಗೆ ಹೈನುಗಾರಿಕೆ ಅನುಸರಿಸಿದಲ್ಲಿ ಆರ್ಥಿಕವಾಗಿ ಸದೃಢರಾಗಬಹುದು. ಹಾಲು ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲೇ 2ನೇ ಸ್ಥಾನ ಪಡೆದಿದೆ. ಪ್ರತಿ ದಿನ 6 ರಿಂದ 8 ಲಕ್ಷ ಲೀ ಹಾಲು ಉತ್ಪಾದನೆಯಾಗುತ್ತಿದೆ ಎಂದ ಅವರು ರೈತರು ನಿಮ್ಮ ರಾಸುಗಳಿಗೆ ಕಡ್ಡಾಯವಾಗಿ ವಿಮೆ ಮಾಡಿಸಿದಲ್ಲಿ ಆರ್ಥಿಕ ನಷ್ಟ ಅನುಭವಿಸುವುದನ್ನು ತಪ್ಪಿಸಬಹುದು ಎಂದು ಸಲಹೆ ನೀಡಿದರು.

ಇದೇ ವೇಳೆ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮೈಮುಲ್ ನಿರ್ದೇಶಕ ಗುರುಸ್ವಾಮಿ, ಮುಖಂಡರಾದ ಮೈಕ್ ಮಹದೇವು, ಮದನ್, ಅಬ್ದುಲ್ ಖಾದರ್, ಜಿ.ಸಿದ್ದಿಖ್, ನಗರಸಭಾ ಸದಸ್ಯರಾದ ಸಿದ್ದಿಖ್, ಹಾಲು ಉತ್ಪಾದಕರ ಸಂಘದ ಅಧ್ಯಕ್ಷೆ ರಾಜಮ್ಮ, ಉಪಾಧ್ಯಕ್ಷೆ ಮಂಗಳಮ್ಮ, ಸೇರಿದಂತೆ ಇತರರಿದ್ದರು.

ನೂತನ ಎಂಎಲ್‌ಸಿ ಡಾ.ಯತೀಂದ್ರಗೆ ಅಭಿನಂದನೆ...



ನೂತನ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಅಭಿನಂದಿಸಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕುಂಬರಳ್ಳಿಮಠ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ನೀರು ವ್ಯತ್ಯಯ

ನಂಜನಗೂಡು, ಜೂ.16– ನಗರದ ನೀರು ಸರಬರಾಜು ಶುದ್ಧೀಕರಣ ಘಟಕದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿ ದುರಸ್ತಿ ಕಾರ್ಯ ಕೈಗೊಂಡಿರುವ ಹಿನ್ನೆಲೆಯಲ್ಲಿ ಜೂ.21ವರೆಗೆ ಕಪಿಲಾ ನದಿ ನೀರು ಸರಬರಾಜು ಸ್ಥಗಿತಗೊಳಿಸಲಾಗುವುದು ಎಂದು ನಗರಸಭೆ ಆಯುಕ್ತ ನಂಜುಂಡಸ್ವಾಮಿ ತಿಳಿಸಿದ್ದಾರೆ.

ಹೀಗಾಗಿ ನಗರ ವ್ಯಾಪ್ತಿಯ ಬಡಾವಣೆಗಳಿಗೆ ಕೊಳವೆ ಬಾವಿ ನೀರು ಸರಬರಾಜು ಮಾಡಲಾಗುವುದು. ಈ ನೀರನ್ನು ಪಾತ್ರೆ ಮತ್ತು ಬಟ್ಟೆ ತೊಳೆಯಲು ಉಪಯೋಗಿಸಬೇಕು. ಕುಡಿಯಲು ಉಪಯೋಗಿಸಬಾರದು. ಅಗತ್ಯವಿರುವ ಕಡೆ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲಸ ಕೊಡಿಸುವುದಾಗಿ 74 ಸಾವಿರ ವಂಚನೆ

ತಿ.ನರಸೀಪುರ, ಜೂ.16– ಖಾಸಗಿ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ಸರ್ಕಾರಿ ಅಧಿಕಾರಿಯೊಬ್ಬರು ವ್ಯಕ್ತಿಯೊಬ್ಬರಿಂದ 74 ಸಾವಿರ ರೂ. ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ.

ತಾಲೂಕಿನ ತಲಕಾಡು ಸಮೀಪದ ಮಾರನಪುರ ಗ್ರಾಮದ ಮಹದೇವಸ್ವಾಮಿ ಕೆಲಸದ ಆಸೆಗಾಗಿ ಹಣ ಕಳೆದುಕೊಂಡವರಾಗಿದ್ದು, ಈ ಸಂಬಂಧ ತಲಕಾಡು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮೈಸೂರು ವಿಜಯನಗರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಗ್ರೇಡ್–2 ಅಧೀಕ್ಷಕರಾಗಿರುವ ಕೆ.ಸೋಮಯ್ಯ ಎಂಬುವರು ಖಾಸಗಿ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ 74 ಸಾವಿರ ರೂ.ಗಳನ್ನು ಪಡೆದು ವಂಚಿಸಿದ್ದಾರೆ ಎಂದು ಮಹದೇವಸ್ವಾಮಿ ತಲಕಾಡು ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಎಸ್‌ಐ ತಿರುಮಲ್ಲೇಶ್ ತನಿಖೆ ಕೈಗೊಂಡಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ, ಜೂ.16– ತಾಲೂಕು ನಾಯಕ ಸಂಘ, ತಾಲೂಕು ನಾಯಕ ನೌಕರರ ಸಂಘ ಹಾಗೂ ತಾಲೂಕು ನಾಯಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳ ವತಿಯಿಂದ ತಾಲೂಕಿನ ನಾಯಕ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023–24 ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ತಾಲೂಕಿನ ನಾಯಕ ಜನಾಂಗದ ವಿದ್ಯಾರ್ಥಿಗಳು ತಮ್ಮ ಸ್ವ ವಿಳಾಸದೊಂದಿಗೆ ಭಾವಚಿತ್ರ, ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಮಹರ್ಷಿ ವಾಲ್ಮೀಕಿ ಸ್ಕೂಲ್ ತಿ.ನರಸೀಪುರ ಟೌನ್ ಇಲ್ಲಿಗೆ ಜು.4ರೊಳಗೆ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮ ಜು.7ರಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ನಡೆಯಲಿದೆ ಎಂದು ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಆರ್.ರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ: 7026340955 ಸಂಪರ್ಕಿಸಬಹುದು.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು

ನಂಜನಗೂಡು, ಜೂ.16– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಚಾಮರಾಜನಗರ ಬೈಪಾಸ್ ರಸ್ತೆಯ ವಾಲ್ಮೀಕಿ ಸಮುದಾಯ ಭವನದ ಬಳಿ ಭಾನುವಾರ ನಡೆದಿದೆ.



ನಗರದ ಟೀಚರ್ಸ್ ಕಾಲೋನಿ ನಿವಾಸಿ ಹಾಗೂ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ನೌಕರರ ಸಂಘದ ಅಧ್ಯಕ್ಷ ಶ್ರೀಕಂಠ (50) ಸಾವನ್ನಪ್ಪಿದವರು. ಶ್ರೀಕಂಠೇಶ್ವರ ದೇವಾಲಯದಿಂದ ಮನೆಗೆ ಬೈಕ್‌ನಲ್ಲಿ ವಾಪಸ್ಸಾಗುತ್ತಿದ್ದ ವೇಳೆ ನಗರದ ಬೈಪಾಸ್ ರಸ್ತೆ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಶ್ರೀಕಂಠ ಸ್ಥಳದಲ್ಲಿ ಸಾವನ್ನಪ್ಪಿದ್ದಾರೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗ್ರಾಮೀಣ ಮಹಿಳೆಯರು ಹೈನುಗಾರಿಕೆಗೆ ಒತ್ತು ನೀಡಿ

ಶಾಸಕ ಡಿ.ರವಿಶಂಕರ್ ಸಲಹೆ

ಕೆ.ಆರ್.ನಗರ, ಜೂ.16– ಹೈನುಗಾರಿಕೆಗೆ ಪ್ರೋತ್ಸಾಹ ನೀಡುವ ಸಲುವಾಗಿ ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ 5 ರೂ. ಪ್ರೋತ್ಸಾಹಧನ ನೀಡುತ್ತಿದ್ದು, ಮೈಮುಲ್ ವತಿಯಿಂದ ಸಾಕಷ್ಟು ಸೌಲಭ್ಯ ದೊರೆಯುವುದರಿಂದ ಗ್ರಾಮೀಣ ಮಹಿಳೆಯರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಸಾಲಿಗ್ರಾಮ ತಾಲೂಕು ಮುದುಗುಪ್ಪೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಬಿಎಂಸಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ಜನತೆಯ ಮನವಿಯಂತೆ ಮುದ್ದುಗುಪ್ಪೆ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಈ ಭಾಗದಲ್ಲಿ ಸುಸಜ್ಜಿತ ಪಶು ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತದೆ ಎಂದು ಭರವಸೆ ನೀಡಿದರು.

ಹೈನುಗಾರಿಕೆ ಮಾಡುವುದರಿಂದ ಗ್ರಾಮೀಣ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಹೀಗಾಗಿ ಅಧಿಕಾರಿಗಳು ಹೆಚ್ಚಾಗಿ ಹೈನುಗಾರಿಕೆ ಮಾಡುವಂತೆ ಮಹಿಳೆಯರಲ್ಲಿ ಅರಿವು ಮೂಡಿಸಬೇಕು. ಜೊತೆಗೆ ಒಕ್ಕೂಟದಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಭೇರ್ಯ ಮುಖ್ಯ ರಸ್ತೆಯಿಂದ ಮುದ್ದುಗುಪ್ಪೆ, ಕುಪ್ಪಳ್ಳಿ ಸೇರಿದಂತೆ ಇತರ ಗ್ರಾಮಗಳ ಮೂಲಕ ಹೊಳೆನರಸೀಪುರ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಸುಮಾರು 10 ಕಿಮೀ ರಸ್ತೆ ಜೊತೆಗೆ ಗೇರದಡ, ಬಸವನಪುರ, ಕೆಂಚನಹಳ್ಳಿ ಗ್ರಾಮಗಳ ಸಂಪರ್ಕ ರಸ್ತೆಗಳನ್ನು



ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಬಿಎಂಸಿ ಕಟ್ಟಡವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಅಭಿವೃದ್ಧಿ ಪಡಿಸಲು ಅಗತ್ಯ ಅನುದಾನ ಮಂಜೂರು ಮಾಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದ್ದು, ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಜುಲೈ ತಿಂಗಳಿಂದ ಅಭಿವೃದ್ಧಿ ಕೆಲಸಗಳಿಗೆ ಹಣ ಬರಲಿದ್ದು, ನಂತರ ಅಭಿವೃದ್ಧಿ ಕಾರ್ಯಗಳ ಪರ್ವ ಆರಂಭವಾಗಲಿದೆ ಎಂದರು.

ಇದೇ ವೇಳೆ ಬಿಎಂಸಿ ಕೇಂದ್ರ ನಿರ್ಮಾಣ ಮಾಡಲು ನಿವೇಶನ ನೀಡಿದ ವೆಂಕಟೇಶ್ ಮತ್ತು ಕಟ್ಟಡದ ಇಂಜಿನಿಯರ್ ರುದ್ರಶೇಖರ್, ಗುತ್ತಿಗೆದಾರ ಯೋಗೇಂದ್ರ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಸೋಮು, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯ ಕುಮಾರ್, ನಿರ್ದೇಶಕ ಎ.ಟಿ.ಸೋಮಶೇಖರ್, ಉಪವ್ಯವಸ್ಥಾಪಕ ಸಂತೋಷ್, ನಿವೃತ್ತ ವ್ಯವಸ್ಥಾಪಕ ಡಾ.ಸಣ್ಣ ತಮ್ಮೇಗೌಡ, ಸಹಾಯಕ ವ್ಯವಸ್ಥಾಪಕ ಪ್ರವೀಣ್ ಪತ್ತಾರ್, ವಿಸ್ತರಣಾಧಿಕಾರಿ ವರಲಕ್ಷ್ಮಿ, ಮುಖಂಡರಾದ ಕೃಷ್ಣೇಗೌಡ, ಮಾದೇಗೌಡ, ಗಂಗಾಧರ್, ಬಲರಾಮಶೆಟ್ಟಿ ಗ್ರಾಪಂ ಉಪಾಧ್ಯಕ್ಷ ಎಂ.ಕೆ.ಮಹದೇವ್ ಮಾತನಾಡಿದರು.

ಸಂಘದ ಅಧ್ಯಕ್ಷೆ ಭಾರತಿ, ಉಪಾಧ್ಯಕ್ಷೆ ಶಿವಲಿಂಗಮ್ಮ, ನಿರ್ದೇಶಕರಾದ ಪ್ರೇಮ, ಮಹದೇವಮ್ಮ, ಪಾರ್ವತಿ, ರೇಣುಕಾ, ಜವರಮ್ಮ, ರತ್ನಮ್ಮ, ಭಾಗ್ಯ, ಲಕ್ಷ್ಮಿ, ಸವಿತಾ, ಲಕ್ಷ್ಮಿ, ಸಿಇಓ ಸುವರ್ಣ, ಹಾಲು ಪರಿವೀಕ್ಷಕಿ ವನಜಾಕ್ಷಿ, ಸಹಾಯಕಿ ಸೌಮ್ಯ ಮತ್ತಿತರರಿದ್ದರು.

36ನೇ ಕೇಂದ್ರ ಉದ್ಘಾಟನೆ

ಕೆ.ಆರ್.ನಗರ: ಬಿಎಂಸಿ ಕೇಂದ್ರಗಳಿಂದ ರೈತರಿಗೆ ಅನುಕೂಲವಾಗಲಿದ್ದು, ಒಂದು ಗಂಟೆ ತಡವಾದರೂ ಕೇಂದ್ರವಿರುವ ಸಂಘಕ್ಕೆ ಹಾಲು ಸರಬರಾಜು ಮಾಡಲು ಅವಕಾಶ ಇರುತ್ತದೆ. ಅದಕ್ಕಾಗಿ ಬಿಎಂಸಿ ಕೇಂದ್ರಗಳ ಸ್ಥಾಪನೆಗೆ ಒತ್ತು ನೀಡಲಾಗಿದ್ದು, ಕೆ.ಆರ್.ನಗರ ಕ್ಷೇತ್ರದಲ್ಲಿ ಈಗ 36ನೇ ಕೇಂದ್ರ ಉದ್ಘಾಟಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ಕೆಎಂಎಫ್ ದೇಶದ ಹಾಲು ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದ್ದು ಶೀಘ್ರ ಮೊದಲ ಸ್ಥಾನಕ್ಕೆ ಬರಲಿದೆ. ಅದಕ್ಕಾಗಿ ಬೇಕಿರುವ ಎಲ್ಲಾ ಉಪಯುಕ್ತ ಕೆಲಸಗಳನ್ನು ಒಕ್ಕೂಟದಿಂದ ಮಾಡಲಾಗುತ್ತಿದೆ. ಹಾಲು ಉತ್ಪಾದಕರಿಗೆ ಮತ್ತು ಸಂಘದ ಸದಸ್ಯರ ಮಕ್ಕಳ ಶಿಕ್ಷಣಕ್ಕೆ ಬೇಕಾಗುವ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

ಕುಂದು ಕೊರತೆ ಆಲಿಸಿದ ಎಂಎಲ್‌ಸಿ ಡಾ.ಯತೀಂದ್ರ



ಸುತ್ತೂರು, ಜೂ.16– ನೂತನ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ವರುಣ ಕ್ಷೇತ್ರದ ಸಾರ್ವಜನಿಕರ ಕುಂದು ಕೊರತೆ ಆಲಿಸಿದರು. ಈ ವೇಳೆ ಮಾತನಾಡಿದ ಅವರು, ಹಂತ ಹಂತ ವಾಗಿ ಕಾರ್ಯಕ್ರಮ ಹಮ್ಮಿಕೊಂಡು ಕ್ಷೇತ್ರದ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದರು.

ಈ ಸಂದರ್ಭ ಕೆಪಿಸಿಸಿ ಕಾರ್ಯದರ್ಶಿ ಮಹೇಶ್, ಎಪಿಎಂಸಿ ಸದಸ್ಯರಾದ ಬಸವರಾಜಣ್ಣ, ಜಿಪಂ ಸದಸ್ಯರಾದ ಕೆಂಪಿರಯ್ಯ, ತಾಪಂ ಅಧ್ಯಕ್ಷ ಪುಟ್ಟಣ್ಣ, ಡೈರಿ ಅಧ್ಯಕ್ಷ ಸಿದ್ದರಾಮ, ತಾಪಂ ಸದಸ್ಯರಾದ ಮುದ್ರಾಮೇಗೌಡ, ಉಮೇಶ್, ಕಾಂಗ್ರೆಸ್ ಜಿಲ್ಲಾ ಡಿಸಿಸಿ ಕಾರ್ಯದರ್ಶಿ ರಾಜೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಂಗಸ್ವಾಮಿ, ರಮೇಶ್ ಮುದ್ದೇಗೌಡ, ಶಿವಕುಮಾರ್, ಚಂದ್ರಶೇಖರ್, ಶೇಖರ್ ಸೇರಿದಂತೆ ಇನ್ನಿತರರಿದ್ದರು.

ಮೈಸೂರಲ್ಲಿ ಶ್ರೀನಿವಾಸ ಪ್ರಸಾದ್ ಸ್ಮರಣಾರ್ಥ ಸ್ವಾಭಿಮಾನಿಗೆ ಗಾನನಮನ



ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಸ್ಮರಣಾರ್ಥ 'ಸ್ವಾಭಿಮಾನಿಗೆ ಗಾನನಮನ' ಕಾರ್ಯಕ್ರಮಕ್ಕೆ ಪ್ರಸಾದ್ ಭಾವಚಿತ್ರಕ್ಕೆ ಪತ್ನಿ ಭಾಗ್ಯಲಕ್ಷ್ಮಿ ಶ್ರೀನಿವಾಸಪ್ರಸಾದ್, ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ) ಪುಷ್ಪಾರ್ಚನೆ ಮಾಡಿದರು.

ಮೈಸೂರು, ಜೂ. 16(ಎಸ್‌ಪಿಎನ್)– ಮೈಸೂರು ರಾಮಕೃಷ್ಣನಗರದ ರಮಾಗೋವಿಂಧ ರಂಗಮಂದಿರದಲ್ಲಿ ಚಾಮರಾಜನಗರ ರಂಗವಾಹಿನಿ ಸಂಸ್ಥೆ ಹಾಗೂ ಸಮಾನ ಮನಸ್ಕ ಗೆಳೆಯರ ಬಳಗ ಸಹಯೋಗದೊಂದಿಗೆ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಸ್ಮರಣಾರ್ಥ 'ಸ್ವಾಭಿಮಾನಿಗೆ ಗಾನನಮನ' ಕಾರ್ಯಕ್ರಮವನ್ನು ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್(ಜನ್ನಿ) ಭಾನುವಾರ ಉದ್ಘಾಟಿಸಿದರು.

ನಂತರ ಮಾತನಾಡಿ, ಮೈಸೂರು–ಚಾಮರಾಜನಗರ ಭಾಗದಲ್ಲಿ ಪ್ರತಿ ಮನೆ ಮನೆಗೂ ಚಿರಪರಿಚಿತರಾಗಿದ್ದ ವಿ. ಶ್ರೀನಿವಾಸ ಪ್ರಸಾದ್, ಸ್ವಾಭಿಮಾನ ಸಂಕೇತವಾಗಿದ್ದರು. ಇವರು ಅಪ್ಪಟ್ಟ ಡಾ.ಬಿ.ಆರ್. ಅಂಬೇಡ್ಕರ್ ಪ್ರೇಮಿ. ಆದರೆ, ಇಂದಿನ ಮಕ್ಕಳಲ್ಲಿ ಅಂದಿನ ಬಡತನ, ನೋವು–ಕಷ್ಟದ ದಿನಗಳು ಅದೆಷ್ಟು ಗೊತ್ತು ಎಂಬುದು ತಿಳಿಯದು ಎಂದು ಯುವಕರ ಮನಸ್ಥಿತಿ ಬಗ್ಗೆ ಬೇಸರ ವ್ಯಕ್ತಪಡಿಸಿದರು.

45 ವರ್ಷಗಳ ಹಿಂದೆ ಮೈಸೂರಿನ ಅಶೋಕಪುರಂ ಅಂಬೇಡ್ಕರ್ ಕುರಿತಾದ ಕಾರ್ಯಕ್ರಮವನ್ನು ವಿ.ಶ್ರೀನಿವಾಸ್ ಪ್ರಸಾದ್ ನೇತೃತ್ವದಲ್ಲಿ ಆಯೋಜಿಸಿದ್ದರು. ಆ ಕಾರ್ಯಕ್ರಮದಲ್ಲಿ ಕಾಗೋಡು ತಿಮ್ಮಪ್ಪ ಕೂಡ ಭಾಗವಹಿಸಿದ್ದರು. ಆ ಕಾರ್ಯಕ್ರಮದಲ್ಲಿ ನಾನು ಅಂಬೇಡ್ಕರ್ ಕುರಿತಾದ ಹಾಡು ಹೇಳಿದ್ದೆ. ಆ ಹಾಡನ್ನು ಕೇಳಿದ ಪ್ರಸಾದ್ ಕೊನೆಯಲ್ಲಿ ಕಣ್ಣೀರು ಹಾಕಿ ಸ್ವಲ್ಪ ಮೌನವಹಿಸಿದ್ದ ಘಟನೆ ನನಗೆ ಈಗಲೂ ಕಣ್ಣಿಗೆ ಕಟ್ಟಿದ್ದಂತಿದೆ ಎಂದರು.

ಈ ಘಟನೆಯಿಂದ ನಾನು ಗಲಿಬಿಲಿಗೊಂಡೆ. ನಂತರ ಅವರು(ಪ್ರಸಾದ್) ನನ್ನಂತ್ತ ನೋಡುತ್ತ, ಆಗಿನ ಕಾಲಕ್ಕೆ ಅಂಬೇಡ್ಕರ್ ಸಮಾಜದಲಿದ್ದ ಅಸಮಾನತೆ ಕುರಿತು ಎಷ್ಟು ನೋವು ಅನುಭವಿಸಿದ್ದರು. ಅವರು ಕಂಡದಂತಹ ದೊಡ್ಡ ಕನಸು, ಇಂದಿಗೂ ಈಡೇರಿಲ್ಲ. ಶೋಷಿತರು ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ನೋವು ಇಂದಿಗೂ ನನ್ನನ್ನು ಕಾಡುತ್ತಿದೆ. ಈಗ ನೀನು ಹಾಡಿದ ಹಾಡು ನನ್ನನ್ನು ಮತ್ತಷ್ಟು ಚಿಂತನೆಗೆ ಹಚ್ಚಿದೆ ಎಂದಿದ್ದ ಪ್ರಸಂಗವನ್ನು ನೆನೆದು ಭಾವುಕರಾದರು.

ಪ್ರಸ್ತುತ ಅಂಬೇಡ್ಕರ್ ಬಗ್ಗೆ ಮಾತನಾಡುವ ವ್ಯಕ್ತಿಗೆ ಆ ಎತ್ತರದ ಕನಸು, ಚಿಂತನೆಗಳಿರಬೇಕು. ಆ ಎಲ್ಲಾ ಗುಣಗಳು ವಿ.ಶ್ರೀನಿವಾಸ್‌ಪ್ರಸಾದ್ ಅವರಲ್ಲಿತ್ತು. ಅವರ ಆಪ್ತ ಸಹಾಯಕರಾಗಿದ್ದ ಶಂಕರ್ ಅಷ್ಟೇ ಒಳ್ಳೆಯ ವ್ಯಕ್ತಿಯಾಗಿದ್ದರು. ಯಾವುದೇ ವಿಷಯವನ್ನು ತಿಳಿಸಿದರೂ ಪ್ರಸಾದ್ ಅವರ ಗಮನಕ್ಕೆ ತಂದು ಕೆಲಸ ಮಾಡಿಕೊಡುತ್ತಿದ್ದರು. ಒಟ್ಟಿನಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ವ್ಯಕ್ತಿ ನಮ್ಮೊಂದಿಗಿಲ್ಲ ಎಂಬುದೇ ನೋವಿನ ಸಂಗತಿ ಎಂದರು.

ಈ ವೇಳೆ ಭಾಗ್ಯಲಕ್ಷ್ಮಿ ವಿ.ಶ್ರೀನಿವಾಸ್ ಪ್ರಸಾದ್, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್, ಗಾಯಕರಾದ ಸಿ.ಎಂ.ನರಸಿಂಹ ಮೂರ್ತಿ, ದೇವಾನಂದ ವರಪ್ರಸಾದ್, ಹುರಗಲವಾಡಿ ರಾಮಯ್ಯ, ಅಮ್ಮರಾಮಚಂದ್ರ, ಲಕ್ಷ್ಮೀರಾಮ್, ಗಾನಸುಮ ಪಟ್ಟಸೋಮನಹಳ್ಳಿ, ಮಹಾಲಿಂಗ ಗಿರ್ಗಿ, ಎಂ.ಡಿ.ರಾಜೇಂದ್ರ ಪ್ರಸಾದ್ ಕಿರಗುಂದ, ಮುಳ್ಳೂರು ಕೃಷ್ಣ, ಸಿಂಚನಾ, ರಶ್ಮಿ, ನೈಪಥ್ಯದಲ್ಲಿ ಕೀ ಬೋರ್ಡ್ ಪುರುಷೋತ್ತಮ ಕಿರಗಸೂರು, ತಬಲಾ ಸಿ.ಮಹದೇವ, ರಿದಂ ಪ್ಯಾಡ್ ಅರುಣ, ಡೋಲಕ್‌ಅನ್ನು ಕಿರಣ್ ನುಡಿಸಿ ಸಾಥ್ ನೀಡಿದ್ದಾರೆ.

ಇಂದು ಬಕ್ರೀದ್; ಮೈಸೂರಲ್ಲಿ ಮುಸ್ಲಿಂ ಬಾಂಧವರ ಸಂಭ್ರಮ

ಮೈಸೂರು,ಜೂ.16(ಪಿಎಂ)– ನಾಳೆ (ಜೂ.17ರ ಸೋಮವಾರ) ಮೈಸೂರು ನಗರದಲ್ಲಿ ಮುಸಲ್ಮಾನ ಬಾಂಧವರು ಭಕ್ತಿಭಾವದ ಬಕ್ರೀದ್ ಹಬ್ಬ ಆಚರಿಸಲಿದ್ದಾರೆ. ಮೈಸೂರಿನ ತಿಲಕನಗರದ ಈದ್ಗಾ ಮೈದಾನದ ಸೇರಿದಂತೆ ವಿವಿಧ ಈದ್ಗಾ ಮೈದಾನ ಹಾಗೂ ಮಸೀದಿಗಳಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ.

ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಬೆಳಗ್ಗೆ 9ಕ್ಕೆ ಮೈಸೂರಿನ ಸರ್ ಖಾಝಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಇದೇ ವೇಳೆ ಸರ್ ಖಾಝಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅವರು ಹಬ್ಬದ ಶುಭ ಸಂದೇಶ ನೀಡಲಿದ್ದಾರೆ. ರಾಜೀವ್‌ನಗರದ ನಿಮ್ರಾ ಮೈದಾನ, ಈದ್ಗಾ ಮೈದಾನ ಸೇರಿದಂತೆ ವಿವಿಧೆಡೆ ಹಾಗೂ ಮಸೀದಿಗಳಲ್ಲಿ ಬೆಳಗ್ಗೆ ಸುಮಾರು 6.30ರ ವೇಳೆಗೆ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಪ್ರಾರ್ಥನೆ ಬಳಿಕ ಮುಸ್ಲಿಂ ಬಾಂಧವರು ಶುಭಾಶಯ ವಿನಿಮಯ ಮಾಡಿಕೊಂಡು ಮನೆಗಳಲ್ಲಿ ವಿವಿಧ ಭಕ್ಷ್ಯಗಳನ್ನು ತಯಾರಿಸಿ ಬಂಧುಗಳೊಂದಿಗೆ ಸವಿಯಲಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು, ಜೂ.16(ಎಸ್‌ಬಿಡಿ)– ಮನೆ ಬೀಗ ಒಡೆದು ಚಿನ್ನಾಭರಣ ದೋಚಿರುವ ಘಟನೆ ಮೈಸೂರು ಬಂಬೂಬಜಾರ್‌ನ ಮೇದರ್‌ಬ್ಲಾಕ್‌ನಲ್ಲಿ ನಡೆದಿದೆ.

ಖಾಸಗಿ ಫೈನಾನ್ಸ್ ಸಂಸ್ಥೆ ಉದ್ಯೋಗಿ ಎಂ.ಎಸ್.ಉಮೇಶ್, ಕುಟುಂಬ ಸಮೇತ ತಿರುಪತಿಗೆ ಹೋಗಿದ್ದಾಗ ಕಳ್ಳರು ಮನೆಗೆ ನುಗ್ಗಿ ಸುಮಾರು 1.47 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಉಮೇಶ್ ಅವರು ತಾಯಿ, ಪತ್ನಿ ಹಾಗೂ ಮಗುವಿನೊಂದಿಗೆ ಜೂ.11ರಂದು ಸಂಜೆ 4 ಗಂಟೆಗೆ ತಿರುಪತಿಗೆ ತೆರಳಿದ್ದರು. ಜೂ.13ರಂದು ಸಂಜೆ ಮನೆ ಮಾಲೀಕ ಮುರುಗೇಶ್ ಅವರು ಉಮೇಶ್‌ಗೆ ಕರೆ ಮಾಡಿ ನಿಮ್ಮ ಮನೆ ಬೀಗ ಮುರಿದು, ಕಳ್ಳತನ ಮಾಡಿದ್ದಾರೆ ಎಂದು ತಿಳಿಸುತ್ತಾರೆ. ಜೂ.15ರಂದು ಬೆಳಗ್ಗೆ ವಾಪಸ್ಸಾಗಿ ಪರಿಶೀಲಿಸಿದಾಗ ಮನೆ ಮುಂಬಾಗಿಲ ಬೀಗ ಒಡೆದಿತ್ತು. ಒಳಹೋಗಿ ನೋಡಿದಾಗ ಅಲ್ಲಿಯೇ ಇದ್ದ ಕೀ ಬಳಸಿ ಬೀರು ಬಾಗಿಲು ತೆಗೆದು ಸೇಫ್ಟೀ ಲಾಕರ್ ಮೀಟಿ ಅದರೊಳಗಿದ್ದ ಚಿನ್ನಾಭರಣ ದೋಚಿರುವುದು ತಿಳಿಯಿತು.

ಈ ಸಂಬಂಧ ಉಮೇಶ್ ನೀಡಿರುವ ದೂರಿನನ್ವಯ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ವಹಿಸಿದ್ದಾರೆ.

ದಕ್ಷಿಣದ ರಾಜ್ಯಗಳ ಪೈಕಿ ಕರ್ನಾಟಕದಲ್ಲೇ ದರ ಕಡಿಮೆ

ತೈಲ ದರ ಏರಿಕೆಗೆ ಸಿಎಂ ಸಿದ್ದರಾಮಯ್ಯ ಸಮರ್ಥನೆ



ಬೆಂಗಳೂರು, ಜೂ.16–ವ್ಯಾಟ್ ಹೆಚ್ಚಳದ ನಂತರವೂ ಬಹುತೇಕ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕರ್ನಾಟಕದಲ್ಲೇ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ಸಮರ್ಥಿಸಿ ಕೊಂಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಆರ್ಥಿಕವಾಗಿ ಬಲಿಷ್ಠವಾಗಿರುವ ಮಹಾರಾಷ್ಟ್ರದಲ್ಲಿ ಇಂಧನಗಳ ಮೇಲಿನ ಮಾರಾಟ ಸುಂಕ ಪೆಟ್ರೋಲ್‌ಗೆ ಶೆ.25 ಇದ್ದು, ಹೆಚ್ಚುವರಿಯಾಗಿ 5.12 ರೂ. ತೆರಿಗೆ ಸಹ ಇದೆ. ಇನ್ನು ಮಹಾರಾಷ್ಟ್ರದಲ್ಲಿ ಡಿಸೇಲ್ ಮೇಲೆ ಶೆ.21 ತೆರಿಗೆ ಇದೆ. ಕರ್ನಾಟಕದಲ್ಲಿ ಪರಿಷ್ಕೃತಗೊಂಡ ನಂತರವೂ ಈ ಸುಂಕದ ಪ್ರಮಾಣ ಮಹಾರಾಷ್ಟ್ರಕ್ಕಿಂತ ಕಡಿಮೆ ಇದೆ. ಇದರ ಹೊರತಾಗಿ ಡಿಸೇಲ್ ದರ ಕರ್ನಾಟಕದಲ್ಲಿ, ಗುಜರಾತ್ ಮತ್ತು ಮಧ್ಯಪ್ರದೇಶಗಳಿಗಿಂತಲೂ ಕಡಿಮೆ ಇದೆ. ನಮ್ಮ ರಾಜ್ಯದಲ್ಲಿ ಇಂಧನಗಳ ದರ ಜನತೆಗೆ ಕೈಗೆಟುಕುವ ದರಗಳಲ್ಲಿ ಸಿಗುತ್ತಿದೆ.

ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಡಬಲ್ ಇಂಜಿನ್ ಸರ್ಕಾರವು ಕರ್ನಾಟಕದ ಆದಾಯ ಬೇರೆ ರಾಜ್ಯಗಳತ್ತ ಹರಿದುಹೋಗಲು ಕಾರಣವಾಗಿತ್ತು. ಆಗ ಕೇಂದ್ರ ಸರ್ಕಾರ ನಿರಂತರವಾಗಿ ಇಂಧನಗಳ ಮೇಲೆ ತೆರಿಗೆ ಹೆಚ್ಚಳ ಮಾಡುತ್ತಿದ್ದರೆ, ರಾಜ್ಯ ಸರ್ಕಾರವು ರಾಜ್ಯದಲ್ಲಿ ಇಂಧನಗಳ ಮೇಲಿನ ತನ್ನ ಮಾರಾಟ ಸುಂಕ ಕಡಿಮೆ ಮಾಡಿತ್ತು. ಈ ಕಾರಣದಿಂದ ರಾಜ್ಯದ ಆದಾಯ ಕಡಿಮೆ ಆಯಿತು. ಆದೇ ವೇಳೆ ರಾಜ್ಯದಿಂದ ಕೇಂದ್ರಕ್ಕೆ ಹೆಚ್ಚಿನ ಆದಾಯ ಹೋಗುತ್ತಿತ್ತು. ಪರೋಕ್ಷವಾಗಿ ರಾಜ್ಯದ ಆದಾಯಕ್ಕೆ ಹಿಂದಿನ ಬಿಜೆಪಿ ಸರ್ಕಾರವೇ ಕೊಕ್ಕೆ ಹಾಕಿತ್ತು.

ಇನ್ನು 2021–22 ರಲ್ಲಿ ಅಬಕಾರಿ ತೆರಿಗೆಯನ್ನು ಪೆಟ್ರೋಲ್‌ಗೆ 13 ರೂಪಾಯಿ ಮತ್ತು ಡಿಸೇಲ್‌ಗೆ 16 ರೂ. ಕಡಿಮೆ ಮಾಡಿತ್ತು. ಸದ್ಯ ಪೆಟ್ರೋಲ್ ಮೇಲಿನ ಕೇಂದ್ರದ ತೆರಿಗೆ 19.9 ರೂಪಾಯಿ ಹಾಗೂ ಡಿಸೇಲ್ ಮೇಲೆ 18.8 ರೂ. ಇದೆ. ಇದನ್ನು ಕೇಂದ್ರ ಸರ್ಕಾರ ಜನರ ಒಳಿತಿಗೊಸ್ಕರ ಕಡಿಮೆ ಮಾಡಬೇಕು. ರಾಜ್ಯದ ವ್ಯಾಟ್ ಹೆಚ್ಚಳದಿಂದ ಜನರ ಸೇವೆಗಳು ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಹಣ ನೀಡಲಿದ್ದೇವೆ.

ನಾವು ಸಮತೋಲಿತ ಮತ್ತು ಜವಾಬ್ದಾರಿಯುತ ಆಡಳಿತ ನೀಡಲು ಬದ್ಧರಾಗಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಸಮರ್ಥಿಸಿಕೊಂಡಿದ್ದಾರೆ.

ಸಂಸದರಾದ ಬಳಿಕವೂ ವೃತ್ತಿಬದ್ಧತೆ ಮೆರೆದ ಡಾ. ಸಿ.ಎನ್.ಮಂಜುನಾಥ್



ಅಪಘಾತದಲ್ಲಿ ಗಾಯಗೊಂಡ ದಂಪತಿಗೆ ಚಿಕಿತ್ಸೆ

ಕನಕಪುರ, ಜೂ.16–ಅಪಘಾತದಲ್ಲಿ ಗಾಯಗೊಂಡು ರಸ್ತೆಯಲ್ಲೇ ಬಿದ್ದಿದ್ದ ದಂಪತಿಯನ್ನು ಕಂಡು ಕಾರು ನಿಲ್ಲಿಸಿದ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ. ಸಿ.ಎನ್. ಮಂಜುನಾಥ್, ಸೀದಾ ಸ್ಥಳಕ್ಕೆ ಹೋಗಿ ಅಪಘಾತ ಸ್ಥಳದಲ್ಲೇ ಗಾಯಗೊಂಡವರನ್ನು ತಪಾಸಣೆ ನಡೆಸಿ, ಉಪಚರಿಸಿ ನಂತರ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಿದ್ದಾರೆ.

ಕಬ್ಬಾಳಮ್ಮನ ದರ್ಶನಕ್ಕೆ ಸಾಗುತ್ತಿದ್ದ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಅಪಘಾತದಲ್ಲಿ ಗಾಯಗೊಂಡವರನ್ನು ಕಂಡಾಕ್ಷಣ ಕಾರು ನಿಲ್ಲಿಸಿ ಪ್ರಾಥಮಿಕ ಚಿಕಿತ್ಸೆಗೆ ಮುಂದಾದರು.

ಆನೇಕಲ್ ತಾಲೂಕಿನ ದಂಪತಿ ಸಾತನೂರು ಬಳಿ ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದಾಗ ಟೆಂಪೊ ನಡುವೆ ಅಪಘಾತ ಸಂಭವಿಸಿತ್ತು. ರಸ್ತೆಯಲ್ಲಿ ಬಿದ್ದು ಗಾಯಗೊಂಡಿದ್ದ ದಂಪತಿ ಕಂಡ ಸಂಸದರು, ಸ್ಥಳೀಯರ ಸಹಾಯದಿಂದ ರಸ್ತೆ ಬದಿ ಕೂರಿಸಿ, ಪ್ರಾಥಮಿಕ ಚಿಕಿತ್ಸೆ ನೀಡಿದರು. ನಂತರ ತಾಲೂಕು ಆಸ್ಪತ್ರೆಗೆ ದಾಖಲಿಸಿ ಅಲ್ಲಿನ ವೈದ್ಯರ ಬಳಿ ಮಾತನಾಡಿ ಚಿಕಿತ್ಸೆ ಕೊಡಿಸಿದರು. ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ದೇವರ ದಯೆಯಿಂದ, ಅಪಘಾತದಲ್ಲಿ ದಂಪತಿಗೆ ಕಾಲು ಕೈಗಳಿಗೆ ಮಾತ್ರ ಗಾಯಗಳಾಗಿವೆ. ತಲೆಗೆ ಪೆಟ್ಟು ಬಿದ್ದಿರಲಿಲ್ಲ. ಸ್ಥಳದಲ್ಲೇ ಬೇಕಾದ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ಕರೆತಂದಿದ್ದೇನೆ. ಇಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗಿದೆ ಎಂದರು. ಹೃದ್ರೋಗ ತಜ್ಞ, ನೂತನ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರ ಹೃದಯವಂತಿಕೆಗೆ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೌಲಭ್ಯಗಳನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ಎಂ. ವಿ. ರಮೇಶ. ಬಿ.ಕಾಂ., ಎಂ.ಎಸ್.ಡಬ್ಲ್ಯೂ. ಎಲ್.ಎಲ್.ಬಿ., ವಕೀಲರು, ನಂ. 329/2 ಸಿ.ಎಚ್. 5/2, ಡಿ. ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ ಮೈಸೂರು – 570004. ಆದ ನಾನು, ನನ್ನ ಕಕ್ಷಿದಾರರಾದ, ಶ್ರೀ. ಅನಂತ್ ರಂಗನಾಥ್ ಬಿನ್ ಶ್ರೀ. ಎ. ರಂಗನಾಥ, ನಂ. 18, 18ನೇ ಕ್ರಾಸ್, 11ನೇ ಮುಖ್ಯ ರಸ್ತೆ, ಜೆ. ಪಿ. ಪಾರ್ಕ್ ಹಿಂದಿನ ಗೇಟ್, ಮುತ್ಯಾಲ್‌ನಗರ, ಮತ್ತಿಕೆರೆ, ಎಂ ಎಸ್ ಆರ್ ಐ ಟಿ ಅಂಚೆ, ಬೆಂಗಳೂರು ಉತ್ತರ, ಬೆಂಗಳೂರು–560054. ಇವರು, ಶ್ರೀ. ಮೈಸೂರು ಬಸವರಾಜು ರವಿಶಂಕರ್ ಬಿನ್ ಬಿ. ಬಸವರಾಜು ಮನೆ ನಂ. 1130, 5ನೇ ಮುಖ್ಯ ರಸ್ತೆ, 1ನೇ ಎ ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು ಉತ್ತರ, ಬೆಂಗಳೂರು–560010. ಇವರಿಗೆ ಸೇರಿದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಸರ್ವೇ ನಂ. 63/3ರಲ್ಲಿನ 1ಎಕರೆ 15ಗುಂಟೆ ಜಮೀನು, ಸರ್ವೇ ನಂ.63/2ಎ ರಲ್ಲಿನ 2ಎಕರೆ 3ಗುಂಟೆ ಜಮೀನು ಮತ್ತು ಸರ್ವೇ ನಂ. 65/5ರಲ್ಲಿನ 2ಎಕರೆ ಒಟ್ಟು 5ಎಕರೆ 18ಗುಂಟೆ ಜಮೀನನ್ನು ಕ್ರಯಕ್ಕೆ ಕೊಳ್ಳಲು ಉದ್ದೇಶಿಸಿ, ಸದರಿ ಸ್ವತ್ತಿನ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಇಚ್ಚಿಸಿರುವುದರಿಂದ ಸದರಿ ಸ್ವತ್ತಿನ ಬಗ್ಗೆ, ಯಾರಿಂದಾದರೂ ಯಾವುದೇ ವಿಧವಾದ ತಂಟೆ, ತಕರಾರು ಇದ್ದಲ್ಲಿ, ದೂರಿನ ಬಗ್ಗೆ, ತಮ್ಮಲ್ಲಿರುವ ಅಸಲು ದಾಖಲಾತಿಗಳ ಸಹಿತ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳ ಒಳಗೆ, ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನನ್ನ ವಿಳಾಸಕ್ಕೆ ಖುದ್ದು ಬಂದು ಲಿಖಿತವಾಗಿ ದೂರನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ವಿಧವಾದ ತಕರಾರು ಇಲ್ಲವೆಂದು ಪರಿಗಣಿಸಿ ನೋಂದಣಿ ಮಾಡಿಸಿಕೊಳ್ಳಲು ನನ್ನ ಕಕ್ಷಿದಾರರು ಇಚ್ಚಿಸಿರುತ್ತಾರೆ. ಅವದಿಯ ನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತುಗಳ ವಿವರ : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಸರ್ವೇ ನಂ. 63/3ರಲ್ಲಿನ 1ಎಕರೆ 15ಗುಂಟೆ ಜಮೀನು ಈ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಗುರುಮಲ್ಲಪ್ಪ ಅವರ ಜಮೀನು, ಪಶ್ಚಿಮಕ್ಕೆ : ನದಿ, ಉತ್ತರಕ್ಕೆ : ವೀರಬದ್ರಪ್ಪ ಅವರ ಕುಟುಂಬದ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 63/3ರ ಜಮೀನು.

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಸರ್ವೇ ನಂ. 63/2ಎ ರಲ್ಲಿನ 2ಎಕರೆ 3ಗುಂಟೆ ಜಮೀನು ಈ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಗುರುಮಲ್ಲಪ್ಪ ಅವರ ಜಮೀನು,ಪಶ್ಚಿಮಕ್ಕೆ : ನುಗು ನದಿ ಮತ್ತು ನಾಗಶೆಟ್ಟಿ ಅವರ ಜಮೀನು, ಉತ್ತರಕ್ಕೆ : ವೀರಬದ್ರಪ್ಪ ಅವರ ಜಮೀನು, ದಕ್ಷಿಣಕ್ಕೆ : ಸುಬ್ಬಮ್ಮ ಅವರ ಜಮೀನು

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಶೆಟ್ಟಿಹಳ್ಳಿ ಗ್ರಾಮದ ಸರ್ವೇ ನಂ. 65/5ರಲ್ಲಿನ 2ಎಕರೆ ಜಮೀನು ಈ ಸ್ವತ್ತಿಗೆ ಚೆಕ್ಕುಬಂದಿ :
ಪೂರ್ವಕ್ಕೆ : ಸರ್ಕಾರಿ ರಸ್ತೆ, ಪಶ್ಚಿಮಕ್ಕೆ : ವೀರಬದ್ರಪ್ಪ ಅವರ ಜಮೀನು, ಉತ್ತರಕ್ಕೆ : ಚನ್ನಬಸವ ಶೆಟ್ಟಿ ಅವರ ಜಮೀನು, ದಕ್ಷಿಣಕ್ಕೆ : ಕೆ ಸುಬ್ಬಣ್ಣ ಅವರ ಜಮೀನು

Sd/- M.V.Ramesha,
B.Com.,M.S.W.,L.L.B.,
329/2 CH-5/2, D. Subbaiah Road,
Chamaraja Mohalla,
Mysore - 570004.
Mob : 9480118990
Date: 16.06.2024